ಕವಿಮಾರ್ಗ

೧೭, ೧೮

ಸಂಪುಟ ೫, ಸಂಚಿಕೆ ೧, ೨ ಜನೇವರಿ–ಜೂನ ೧೯೯೨

ಪೂಜ್ಯ ಡಾ॥ ಶರಣಬಸವಪ್ಪ ಅಪ್ಪ

ವೀರಶೈವವನ್ನು ಯಾರೂ ಸ್ಥಾಪಿಸಲಿಲ್ಲ

ಡಾ॥ ಜಯಶ್ರೀ ದಂಡೆ

ಮಹಿಳೆಯರ ಕೆಲಸ ಮತ್ತು ಬಿಡುವಿನ ಪರಿಕಲ್ಪನೆ

ಡಾ॥ ಕೆ. ಆರ್. ದುರ್ಗಾದಾಸ

ದಲಿತರ ಪ್ರಾತಿನಿಧಿಕ ಕೃತಿ ಒಡಲಾಳ

ಆರ್. ಎಸ್. ಸ್ವಾಮಿ

ಅಪ್ರಮಾಣ ಕೂಡಲಸಂಗಮದೇವ

ಎ. ವಿ. ನಾವಡ

ಮೌಖಿಕ ಸೂತ್ರಾತ್ಮಕ ಸಿದ್ಧಾಂತ


ಅಲ್ಲದೆ–.. ಎಂ, ಜಿ, ವಾರಿ, ಪುರುಷೋತ್ತಮ ಬಿಳಿಮಲೆ, ವಿಜಯಕುಮಾರ ಸಾಲಿಮಠ, ಪಿ. ಕೆ. ಖಂಡೋಬಾ ಇವರ ಲೇಖನಗಳು

ತೇಜಸ್ವಿನಿ. ಉಮಾ, ಶಂಕ್ರಯ್ಯಾ ಘಂಟಿ, ಬಸವರಾಜ ಜಾನಬೋ, ಪ್ರಭು ಖಾನಾಪುರೆ, ವಿಶು ಸತ್ಯಂಪೇಟೆ, ಮುನೀರ ಪಟೇಲ, ಹೊಳೆಯಣ್ಣನವರ ಇವರ ಕವಿತೆಗಳು

ಸಂಪಾದಕರು : ಡಾ॥ ವೀರಣ್ಣ ದಂಡೆ, ಡಾ॥ ಜಯಶ್ರೀ ದಂಡೆ

ಹೊಸ ಪ್ರತಿಭೆ

ಕು. ತೇಜಸ್ವಿನಿ ಅಂಬಲಗೆ



ಮಾನ್ಯರೆ.

'ಕವಿಮಾರ್ಗ' ಐದನೇ ವರ್ಷಕ್ಕೆ ಕಾಲಿರಿಸಿದೆ. ಅದರ ಪ್ರಥಮ ಹಾಗೂ ದ್ವಿತೀಯ ಸಂಚಿಕೆಗಳನ್ನು ಈ ಮೂಲಕ ಸಂಯುಕ್ತ ಸಂಚಿಕೆಯಾಗಿ ತಮಗೆ ಕೊಡಲಾಗುತ್ತಿದೆ. ಮುಂದೆ ಸಂಚಿಕೆಗಳನ್ನು ನಿಯತವಾಗಿ ತರಲು ಪ್ರಯತ್ನಿಸಲಾಗುವುದು. ಎಂದಿನ ತಮ್ಮ ಸಹಕಾರ ಮುಂದೆಯೂ ಬಯಸುತ್ತೇವೆ.

—ಸಂಪಾದಕರು

ಕ ವಿ ಮಾ ರ್ಗ

೧೭, ೧೮ (ಸಂಯುಕ್ತ ಸಂಚಿಕೆ) ತ್ರೈಮಾಸಿಕ ಪತ್ರಿಕೆ

ಸಂಪಾದಕರು : ಡಾ|| ವೀರಣ್ಣ ದಂಡೆ ಡಾ|| ಜಯಶ್ರೀ ದಂಡೆ

ಸಂಪುಟ ೫, ಸಂಚಿಕೆ ೧, ೨ ಜನೇವರಿ–ಜೂನ ೧೯೯೨

Kavimarga Quarterly. Ed:D. Veeranna Dande Dr.JayashreeDande
Published and Print by: Dr. Veeranna Dande
at: Basawa Mudranalaya. Industrial Estate Gulbarga

ನಮ್ಮ ಗಾರ್ಡನ್ನು

ನಮ್ಮ ಗಾರ್ಡನ್ನಿನಲ್ಲಿ ತನಗೆತಾನೇ
ಟೊಮೇಟೊ ಗಿಡ ಬೆಳೆದಿದೆ
ನನ್ನ ತಮ್ಮ ಬೆಳೆಯಕ್ಕೇ ಬಿಡಲ್ಲ
ನಮ್ಮ ಗಾರ್ಡನ್ನಿನಲ್ಲಿ ಟೆಂಗಿನ ಗಿಡ ನೆಟ್ಟಿದ್ದೀವಿ
ನನ್ನ ತಮ್ಮ ಎಲೆಗಳನ್ನು ಕೀಳದೆ ಬಿಡುವುದಿಲ್ಲ
ನಮ್ಮ ಗಾರ್ಡನ್ನಿನಲ್ಲಿ ಪಪ್ಪಾಯಿ ಗಿಡ ನೆಟ್ಟಿದ್ದೀವಿ
ನೀರು ಗೊಬ್ಬರ ಹಾಕಿದ್ದೀವಿ
ಒಮ್ಮೆ ಎಮ್ಮೆ ಬಂದು ತಿಂದುಬಿಟ್ಟಿತು

ನನ್ನ ಅಕ್ಕ

ನನ್ನ ಅಕ್ಕ ಉಸುಕಿನ ಪೇಂಟ ಮಾಡ್ತಾಳೆ.
ನಮಗೆಲ್ಲ ತೋರಿಸಿ ಖುಷಿ ಪಡಸ್ತಾಳೆ.
ಸಿರ್ಯಾಮಿಕ್ ಪೇಂಟ ಮಾಡ್ತಾಳೆ
ನಮಗೂ ಮಾಡಂತಾಳೆ
ಒಲ್ಲ ಅಂದ್ರೆ ಸಿಟ್ಟು ಮಾಡ್ತಾಳೆ.

ಡಾಕ್ಟರ್ ಸೂಜಿ

ಸೂಜಿ, ಸೂಜಿ ಡಾಕ್ಟರ್ ಸೂಜಿ
ಕಾಯಿಲೆ ಬಂದರೆ ಚುಚ್ಚುವ ಸೂಜಿ
ತಪ್ಪು ಮಾಡಿದರೆ ಹೆದರಿಸುವ ಸೂಜಿ
ಮಕ್ಕಳ ಬಳ ಬಳ ಅಳಿಸುವ ಸೂಜಿ
ಕ್ಷಣದಲಿ ಕಾಯಿಲೆ ಓಡಿಸುವ ಸೂಜಿ

ಬಿಸಿಲು

ಬಿಸಿಲಿದೆ ಬಿಸಿಲಿದೆ
ಈ ಕಲ್ಬುರ್ಗಿಯಲ್ಲಿ ಬಿಸಿಲಿದೆ
ಎಂಥ ಬಿಸಿಲಿದು
ಸೂರ್ಯನ ಬಿಸಿಲಿದು
ಧಗಧಗಿಸುವ ಬಿಸಿಲಿದು
ಹೊರಗೆ ಹೋದರೆ
ಕಪ್ಪಾಗಿ ಬರೋದು ತಪ್ಪಿಲ್ಲ
ಕಪ್ಪಾಗಿ ಬರೋದು ತಪ್ಪಿಲ್ಲ
ಒಳಗೆ ಕೂತರೆ
ಶೆಖೆಯಿಂದ ಒದ್ದಾಡೋದು ತಪ್ಪಿಲ್ಲ
ಒದ್ದಾಡೋದು ತಪ್ಪಿಲ್ಲ

ಹಸಿರುಹುಲ್ಲು

ನಮ್ಮ ಶಾಲೆ
ಶಾಲೆಯ ಪಕ್ಕಕ್ಕೆ ಆಟದ ಮೈದಾನ
ಮೈದಾನದ ಪಕ್ಕಕ್ಕೆ ಆಸ್ಪತ್ರೆ
ಆಸ್ಪತ್ರೆಯ ಪಕ್ಕಕ್ಕೆ ಹಸಿರು ಹುಲ್ಲಿನ ಗಾರ್ಡನ್ನು
ಹುಲ್ಲಿನ ಮೇಲೆ ಕುಳಿತು ಅಂದದ ಹಾಡು ಹಾಡುವೆವು
ನೀನು ಸೋತೆ ನಾನು ಗೆದ್ದೆ
ಎಂದು ಜಗಳಾಡುವೆವು
ಹಾಗೆ ಜಗಳಾಡುತ್ತೇವೆ ಮತ್ತೆ ಒಂದಾಗುತ್ತೇವೆ.

(ತೇಜಸ್ವಿನಿ ಒಂಭತ್ತು ವರ್ಷದ ಬಾಲಕಿ
ಖ್ಯಾತ ಕವಿ ಡಾ! ಕಾಶೀನಾಥ ಅಂಬಲಗೆ ಅವರ ಮಗಳು

ಶಬ್ದಮಣಿ ದರ್ಪಣದ 25 ನೆಯ ಸೂತ್ರ ಮತ್ತು ಮಹಾಪ್ರಾಣಗಳು-ಒಂದು ಪುನರಾವಲೋಕನ

ಎಂ. ಜಿ. ನಾರಿ

ಈ ಹಿಂದೆ ನಾನು ಮಹಾಪ್ರಾಣಗಳ ಕುರಿತು ಬರೆಯುತ್ತ ಹೀಗೆ ಹೇಳಿದ್ದೆ: "ಮಹಾಪ್ರಾಣಗಳು ಕನ್ನಡದಲ್ಲಿ ಸಹಜವಾದವುಗಳೆಂಬ ಮನವರಿಕೆ ಕೇಶಿರಾಜನಿಗೆ ನಾಗವರ್ಮನಿಗಿಂತಲೂ ಹೆಚ್ಚು ಬಿಂಬಿಸಿದೆಯೆಂದು ಕಾಣುತ್ತದೆ. ಅದಕ್ಕೆ ದಾಖಲಾಗಿ ಒಂದು ಶಬ್ದಗಳ ಪಟ್ಟಿಯನ್ನೇ ಕೊಡುತ್ತಾನೆ. ಅವು ಅನ್ಯ ಭಾಷಾ ಸ್ವೀಕೃತ ಪದಗಳೆಂದೂ ಸಾಧಾರವಾಗಿ ಸ್ಥಾಪಿತವಾದ ಮಾತೀಗ. ಆಶ್ಚರ್ಯವೆಂದರೆ ಆ ಶಬ್ದಗಳ ಪಟ್ಟಿಯಲ್ಲಿ ಕೆಲವು ಸಂಸ್ಕೃತದಿಂದ ಬಂದವುಗಳೆನ್ನುವ ಬಗ್ಗೆ ಆತನ ಅಪಭ್ರಂಶ ಪ್ರಕರಣವೇ ಸಾಕ್ಷಿ.

1) ಯಾವ ವ್ಯತ್ಯಾಸವೂ ಇರದೆ ಕಾಣುವ ಶಬ್ದಗಳು

ಸೂತ್ರ : 267 ಭಾಷೆ-ಬಾಸೆ
269 ಧಾರೆ–ದಾರೆ
276 ಪ್ರಕ್ಷಾಳಂ–ಪಖ್ಖಾಳಂ (ಆತನ ಪಟ್ಟಿಯಲ್ಲಿ 'ಪಕ್ಖಾಳಂ'ಎಂದಿದೆ)
291 ಖಾತಿಕೆ–ಖಾರಿಕೆ
310 ಭಂಡಾಗಾರಂ–ಭಂಡಾರಂ

2) ಸ್ವಲ್ಪ ವ್ಯತ್ಯಾಸದೊಂದಿಗೆ

272 (ಕೂಪ) ಸ್ತಂಬಂ–(ಕೂವ) ಕಂಬಂ
292 ಸ್ಥಾನಂ–ತಾಣಂ ಸ್ಥಾಪನಂ–ತಾಪಣೆ
271 ಸ್ಥಾಪಣೆ ತಾವಣೆ
202 ಏಕ (ಶರ)–ಎಕ್ಕ (ಸರಂ)

ತನ್ನ ವ್ಯಾಕರಣ ವಿವರಣೆಯ ಉದ್ದಕ್ಕೂ ಕೇಶಿರಾಜ ಪ್ರಾಮಾಣಿಕತೆಯನ್ನೇ ತೋರಿಸಿಕೊಂಡವನು. ಹಾಗಿರುವಾಗ ಅಪಭ್ರಂಶ ಪ್ರಕರಣದಲ್ಲಿ ಶಬ್ದಗಳ ವ್ಯುತ್ಪತ್ತಿ ವಿವರಿಸುವಾಗ ಈ ಕೆಲವು ಶಬ್ದಗಳು ಹಿಂದಿನ ಪ್ರಕರಣದ ಸಹಜ ಮಹಾಪ್ರಾಣಾಕ್ಷರಗಳ (ಶಬ್ದಗಳ) ಪಟ್ಟಿಯಲ್ಲಿ ಬಂದುವಲ್ಲಾ ? ಎನ್ನುವ ಸಂದೇಹವೇ ಅವನಿಗೆ ಬರಲಿಲ್ಲವೆ ? ಅಥವಾ ಆ ಮಹಾರಾಶಿ ತದ್ಭವಗಳ ಅವಲೋಕನದಲ್ಲಿ ಅಲ್ಲೊಂದು

ಇಲ್ಲೊಂದು ಕಾಣಿಸಿಕೊಳ್ಳುವ ಶಬ್ದಗಳ ವಿಚಾರವನ್ನು ಮರೆತಿರಬಹುದೆ? ಈ ಸಂದಿಗ್ಧ ಪ್ರಶ್ನೆ ಉಂಟಾಗಲು ಕಾರಣ ಒಬ್ಬ ನಿಷ್ಣಾತ ವೈಯಾಕರಣನಿಗೆ ಹಿಂದಿನದಕ್ಕೂ ಮುಂದಿನದಕ್ಕೂ ಹೊಂದಾಣಿಕೆ ಮಾಡಲು ಹೇಗೆ ಸಾಧ್ಯವಾಗಲಿಲ್ಲ ಎಂಬ ಸಂದೇಹ ಉಳಿಯುವುದರಿಂದ."

—ನನ್ನ ಲೇಖನ 'ಮಹಾಪ್ರಾಣಗಳು- ಒಂದು ಟಿಪ್ಪಣಿ'. ಸಾಧನೆ
ಸಂ—11, ಸಂ—3, 1982, ಪುಟ : 134-135

ಈ ಬಗೆಯ ನಿಲುವನ್ನು ಕೂಡ ಇದೀಗ ಬದಲಿಸಿಕೊಳ್ಳಬೇಕಾಗಿ ಬಂದಿದೆ. ಇದಕ್ಕೆ ಕಾರಣವನ್ನು ಹೀಗೆ ವಿವರಿಸಬಹುದು. 25ನೆಯ ಸೂತ್ರದಲ್ಲಿ ಪುರಾವೆಯಾಗಿ ಕೊಡುವ ಶಬ್ದಗಳ ಪಟ್ಟಿಯಲ್ಲಿ ಮೂರು ಶಬ್ದಗಳ ಪ್ರಸ್ತಾಪ ಪುನಃ 31 ಮತ್ತು 35ನೆಯ ಸೂತ್ರಗಳಲ್ಲಿ ಬರುತ್ತದೆ.

ಸೂತ್ರ—31 ಘೋಟಿಕ—ಘೋಟಿಗೆ} (ಅಪಭ್ರಂಶದಲ್ಲಿ)
31 ಝಲ್ಲರಿ—ಝಲ್ಲಳಿ } 'ಟ' ಮತ್ತು 'ರ' ಕಾರಗಳಲ್ಲಿ 'ಳಿ' ಕಾರಗಮನ
35 ಝಳಕಂ— ಇಲ್ಲಿ ಕುಳವೇ ಇದೆ 'ಳ' ಕಾರಾರ ಇರುವುದು ಸಂದೇಹ ಎನ್ನುತ್ತಾನೆ.

ಆದರೆ ಇಲ್ಲಿ 'ಘೋಟಿಗೆ', 'ಝಲ್ಲಳಿ', ಝಳಕಂ (?)—ಈ ಶಬ್ದಗಳು ಸಂಸ್ಕೃತದಿಂದ ಬಂದವು-ಎನ್ನುವ ಅರಿವು 25ನೆಯ ಸೂತ್ರದ ಶಬ್ದಗಳ ಪಟ್ಟಿಯಲ್ಲಿ ನಮೂದಿಸುವಾಗ ಮರೆವಿಗೆ ಕಾರಣವಾಗಿರಬಹುದು ಎನ್ನುವಂತಿಲ್ಲ, ಏಕೆಂದರೆ .ಳ' ಕಾರವಿರುವ ಶಬ್ದವಿದ್ದರೆ, ಸಹಜ ದೇಶೀಯ (ಕನ್ನಡ ಮೂಲ) ಶಬ್ದಗಳಲ್ಲಿಯೇ •ಳ' ಕಾರ ಅಥವಾ ಆ 'ಳ' ಕಾರ ಅಪಭ್ರಂಶಗೊಳ್ಳುವಾಗ ಒಂದು ವರ್ಣದ ಸ್ಥಾನದಲ್ಲಿ ಬಂದ 'ಳ' ಕಾರವು ಎನ್ನುವ ಕುರಿತು ಕೇಶಿರಾಜನು ತುಂಬ ಎಚ್ಚರಿಕೆಯಿಂದ ಗ್ರಹಿಸುತ್ತಾನೆ[1] ಹೀಗಿರುವಾಗ 'ಳ' ಕಾರದ ವಿಷಯದಲ್ಲಿ ಆತ ಮರೆತಿರುವ ಪ್ರಶ್ನೆಯೆ ಬರುವುದಿಲ್ಲ. ಆದುದರಿಂದ ಸೂತ್ರ 25 ರಲ್ಲಿ ಕೊಡುವ ಸುಮಾರು 50 ಶಬ್ದಗಳು ಅನ್ಯ ಭಾಷಾ ಸ್ವೀಕರಣ ಪದಗಳೆಂದು ಪ್ರಜ್ಞಾಪೂರ್ವಕವಾಗಿ ತಿಳಿದಿರುವಂತಿದೆ, ಅಲ್ಲದೆ "ಕಂಭಕ್ಕಂ ಭಾಷೆಗಂ ವಿಕಲ್ಪಂ' ಎಂದು ಹೇಳಿ ಅವೆರಡೂ ರೂಪಗಳನ್ನು ಅಪಭ್ರಂಶ ಪ್ರಕರಣದಲ್ಲಿ ಕೊಟ್ಟುದನ್ನು ಈಗಾಗಲೆ ನೋಡಿಯಾಗಿದೆ. 'ಭಾಷೆ' ಎಂದು ಸೂತ್ರದಲ್ಲಿ ಬಳಸಿ, 'ಭಾಸೆ' ಎಂಬ ರೂಪವನ್ನು ಶಬ್ದಗಳ ಪಟ್ಟಿಯಲ್ಲಿ ಕೊಟ್ಟು. 'ಬಾಸೆ' ಎಂಬ (ಅಲ್ಪ ಪ್ರಾಣದ) ಮೂರನೆಯ ರೂಪವನ್ನು 267 ರ ಸೂತ್ರದಲ್ಲಿ ಕೊಟ್ಟಿರುವುದುಂಟು. ಹೀಗೆ ಭಾಷೆ, ಭಾಸೆ, ಬಾಸೆ— ಈ ಮೂರ್ರು

ರೂಪಗಳ ಪ್ರಸ್ತಾಪ ಆತ ಮಾಡಿರುವಾಗ ಈ ಶಬ್ದ ರೂಪಗಳ ಕ್ರಮಗತಿ ತಿಳಿದಿಲ್ಲ ವೆಂಬ ವಿಚಾರವು ಮೊದಲ ಹಂತದಲ್ಲೆ ಬಿದ್ದು ಹೋಗುತ್ತದೆ.[3]

"ಕನ್ನಡಕ್ಕೆ ಒಗ್ಗಿ ಬಂದ ಮೇಲೆ ಅಂಥ (ಸಂಸ್ಕೃತ) ಪದಗಳೆಲ್ಲ ಕನ್ನಡ ಪದಗಳೇ ಎಂಬುದು ಕೇಶಿರಾಜನ ದೃಢವಾದ ವಿಶ್ವಾಸ.[4] ಇದರಿಂದ ತನ್ನ ಕಾಲದಲ್ಲಿ ಮಹಾಪ್ರಾಣಗಳನ್ನುಳ್ಳ ಶಬ್ದಗಳು ಕನ್ನಡ ಭಾಷೆಯಲ್ಲಿ ಹಾಸುಹೊಕ್ಕಾಗಿ ಮಿಳಿತ ಗೊಂಡದ್ದನ್ನು ಕಂಡಿದ್ದಾನೆ. ಈ ರೀತಿ ಮಹಾಪ್ರಾಣಗಳಿಗೆ ಕನ್ನಡದಲ್ಲಿ ವರ್ಣತ್ವದ ಸ್ಥಾನ ಕಲ್ಪಿಸಿದ್ದು ಕೇಶಿರಾಜನ ಉದಾರ ಮತ್ತು ಪ್ರಗತಿಪರ ವೃಷ್ಟಿಯೇ ಆಗಿದೆ.[5]

ಅಡಿ ಟಿಪ್ಪಣಿಗಳು

1. ಹೀಗೆ 'ಟ' ವರ್ಣದ ವಿಷಯವನ್ನು ಉಚ್ಚರಿಸುವಾಗ ಕೇಶಿರಾಜ ಮೈಯೆಲ್ಲಾ ಕಣ್ಣಾಗಿ ವೀಕ್ಷಿಸುತ್ತಾ ಪರಿಶೀಲಿಸುವನು ಎನ್ನುವುದಂತೂ ನಿಜ.

2. ಈ ರೀತಿ ಇಲ್ಲಿಯ ಶಬ್ದಗಳಲ್ಲಿ ಕೆಲವಾದರೂ ಖಚಿತವಾಗಿ ಸಂಸ್ಕೃತ ಭಾಷೆಯ ಶಬ್ದಗಳೆಂಬ ಅರಿವು ಕೇಶಿರಾಜನಿಗೆ ಇತ್ತೆನ್ನುವುದಾದರೆ ಆಗ ಕೆಲವು ಪ್ರಶ್ನೆಗಳು ತಲೆ ಎತ್ತುತ್ತವೆ.

   i) ಸ್ವೀಕರಣಗೊಂಡ ಶಬ್ದಗಳನ್ನು ಅಥವಾ ಭಿನ್ನಾರ್ಥದಲ್ಲಿ ಬಳಕೆಯಲ್ಲಿರುವ ಶಬ್ದಗಳನ್ನು ದೇಶೀಯಗಳೆಂದು ಭಾವಿಸಿದನೆ ?

   ii) ಹಾಗಾದರೆ ಸ್ವೀಕಾರಗೊಂಡ ಶಬ್ದಗಳು ತನ್ಮೂಲಕ ಸೇರ್ಪಡೆಯಾಗುವ ನೂತನ ವರ್ಣಗಳು (ಉದಾ : ಮಹಾಪ್ರಾಣಗಳೇ) ಇವೆರಡಕ್ಕೂ ಅನ್ವಯಿಸಿ ದೇಶೀಯ ಪದವನ್ನು ಸಮಾನಾರ್ಥಕವಾಗಿಯೋ ಅಥವಾ ಭಿನ್ನ ಅರ್ಥ ಛಾಯೆಯೊಂದಿಗೆ ಬಳಸಿದನೆ ?

3. "ಸಂಸ್ಕೃತ ಪ್ರಾಕೃತಗಳೆರಡರಲ್ಲೂ ಪರಿಣತರಾದ ಜೈನಕವಿಗಳು ಅದರಲ್ಲೂ ಕೇಶಿರಾಜ ಈ ಶಬ್ದಗಳ ಕ್ರಮಗತಿಯನ್ನು, ಒಂದಕ್ಕೊಂದು ಸಂಬಂಧವನ್ನು ಗುರುತಿಸಲಾಗಲಿಲ್ಲವೇ? ಎಂಬುದೇ ಒಂದು ಆಶ್ಚರ್ಯಕ್ಕೆ ಕಾರಣ"
   —ನನ್ನ ಪೂರ್ವೋಕ್ತ ಲೇಖನ ಪುಟ ; 135

4. i) ಎಲ್. ಬಸವರಾಜ ಅವರ ಶಬ್ದಮಣಿ ದರ್ಪಣದ 25ನೆಯ ಸೂತ್ರ ದಲ್ಲಿಯ ವಿವರಣೆ.

   ii) ಇಷ್ಟಿದ್ದರೂ ಆ ಕನ್ನಡ ಪದಗಳೆಲ್ಲ ದೇಶೀಯ ಶಬ್ದಗಳೆಂದು ಭಾವಿಸು ವಂತೆ ಕಂಡುಬರುವುದಿಲ್ಲ. ಸಂಸ್ಕೃತದಲ್ಲಿಲ್ಲದ ಕನ್ನಡಕ್ಕೆ ಮಾತ್ರ

ವಿಶಿಷ್ಟವಾದ 5 ವರ್ಣಗಳ ದೇಶೀಯಾಕ್ಷರಗಳು ಎಂದಿದ್ದರಿಂದ ದೇಶೀಯ ಎಂಬುದನ್ನು ಮೂಲ ಕನ್ನಡಕ್ಕೆ ಅನ್ವಯಿಸಿ ಬಳಸಿದ್ದಾನೆ. ಎಂದು ಭಾವಿಸುವುದು ಸಧ್ಯಕ್ಕೆ ಉಚಿತ. ಇದರಿಂದ ಸಂಸ್ಕೃತದಿಂದ ಬಂದ ಶಬ್ದಗಳನ್ನು ಕನ್ನಡ ಪದಗಳೆಂದರೂ ದೇಶೀಯವೆನ್ನಬೇಕೆ ಎನ್ನುವ ವಿಷಯದಲ್ಲಿ ಕೇಶಿರಾಜನಿಗೆ ಸ್ವಲ್ಪ ಗೊಂದಲ ಉಂಟಾಗಿರುವಂತೆ ತೋರುತ್ತದೆ.

5. i) ಕೇಶಿರಾಜನ ದೃಷ್ಟಿಯಲ್ಲಿ ಅಚ್ಚಗನ್ನಡವೆಂದರೆ ತದ್ಭವ ಪದಗಳೂ ಸೇರಿರುವುದರಿಂದ ಅವನು 'ನಾಲ್ವತ್ತೇೞಱೊತ್ತಿಯ್ತುಳಿ ಶುದ್ಧಗೆಯಚ್ಚಗನ್ನಡಕ್ಕೀ ಕ್ರಮದಿಂ' ಎಂದು ಹೇಳುವುದು ಉಚಿತವಾಗಿದೆ." (ಜಿ. ವರದ ರಾಜರಾವ ಅವರ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಮೂರನೆಯ ಬಿ. ಎ. ಪದವಿಯ ಶಮದದ ಪಾಠಗಳ ಟಿಪ್ಪಣಿ)

ii) ಅಚ್ಚಗನ್ನಡದಲ್ಲಿ ಕಾವ್ಯರಚನೆ ಮಾಡಬೇಕೆಂಬವರಿಗೆ ಅಪಭ್ರಂಶ ಪದಗಳು 'ಅಚ್ಚಗನ್ನಡಂ ಬೇಟ್ವರ ಕೈವೂಕ್ಕ ನಿಧಿ'ಯೆಂದು (ಸೂ. 314) ಅಚ್ಚಗನ್ನಡದೊಡನೆ ಅಪಭ್ರಂಶವನ್ನು ಸೇರಿಸಿಕೊಂಡಿದ್ದಾನೆ. ಆದುದರಿಂದ ಅವನ ಮಾತು ದೋಷಪೂರ್ಣವಾಗುವುದಿಲ್ಲ"

—ಕೆ. ಕುಶಾಲಪ್ಪಗೌಡ, ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ ಪ್ರ. ಮು : 1986 ಪುಟ : 54

ಅಂತಾರೆ ನಮ್ಮ ಅಪ್ಪ

ಅಪ್ಪಾ ಅಪ್ಪಾ ಆಟ ಆಡಿ ಬರತೀನಿ ಅಂದ್ರ
ಓದಿ ಆಟಕ್ಕ ಹೋಗು ಅಂತಾರೆ, ಏನ ಮಾಡ್ಲಿ !
ಅಪ್ಪಾ ಓದಿ ಆಟಕ್ಕೆ ಹೋಗತಿನಿ ಅಂದ್ರ
ಆಟ ಆಡಿ ಓದಲಿಕ್ಕೆ ಬಾ ಅಂತಾರ
ಅಪ್ಪಾ ಅಪ್ಪಾ ಗಿಡಕ್ಕೆ ನೀರು ಹಾಕ್ತಿನಿ ಅಂದ್ರ
ಬೇಡ ಮಗಳೆ ಹೇಳಿದ ಕೆಲಸ ಮಾಡು
ಸಾಕು ಅಂತಾರೆ

—ತೇಜಸ್ವಿನಿ ಅಂಬಲಗೆ

ಅಪ್ರಮಾಣ ಕೂಡಲಸಂಗಮದೇವಾ

ಆರ್. ಎಸ್. ಸ್ವಾಮಿ

'ಶಿಖಾರತ್ನದ ವಚನಗಳು' ಅಥವಾ 'ಶಿಖಾರತ್ನ ಪ್ರಕಾಶ'ದ ವಚನಗಳ ಅಂಕಿತ 'ಅಪ್ರಮಾಣ ಕೂಡಲ ಸಂಗಮದೇವ' ಎಂದು. ಇವನ್ನು ಬರೆದವರು ಬಸವಣ್ಣನವರ ಮಗ ಬಾಲಸಂಗಯ್ಯನೆಂದು ಅಭಿಪ್ರಾಯ, ಈ ಅಭಿಪ್ರಾಯವನ್ನು ಒಪ್ಪಿಕೊಂಡವರು ವಚನಪಿತಾಮಹಾ ಫ. ಗು. ಹಳಕಟ್ಟಿಯವರು. ಇವರೇ ಸಂಪಾದಿಸಿದ 'ವಚನ ಶಾಸ್ತ್ರಸಾರ' ಗ್ರಂಥದಲ್ಲಿ ಬಾಲಸಂಗಯ್ಯನ ವಚನಗಳೆಂದೇ ನಿರ್ಧರಿಸಿದ್ದಾರೆ, ಮತ್ತು ಅದೇ ಗ್ರಂಥದಲ್ಲಿ 26 ವಚನಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಒಂದು ವೇಳೆ ಬಾಲಸಂಗಯ್ಯನ ವಚನಗಳೇ ಆಗಿದ್ದರೆ, ಈತನ ಜೀವನದ ಬಗ್ಗೆ ಸ್ಪಷ್ಟ ಕಲ್ಪನೆ ಬೇಕು.

ಬಸವಣ್ಣನವರ ಮದುವೆ ಬಲದೇವನ ಮಗಳು ಗಂಗಾದೇವಿ ಮತ್ತು ಸಿದ್ಧರಸನ ಮಗಳು ನೀಲಲೋಚನೆಯೊಡನೆ ಆಯಿತು ಎನ್ನುವುದು ಸರ್ವಸಮ್ಮತ. ಆದರೆ ವಿವಾಹವಾದದ್ದು ಕೂಡಲಸಂಗಮದಲ್ಲಿ ಅಥವಾ ಕಲ್ಯಾಣದಲ್ಲಿ ಎನ್ನುವ ಬಗ್ಗೆ ಏಕಾಭಿಪ್ರಾಯವಿಲ್ಲ. ಆದರೆ ಶಿ. ಶಿ. ಬಸವನಾಳರು ತಮ್ಮ 'ಬಸವಣ್ಣನವರ ಷಟಸ್ಥಳದ ವಚನಗಳು' ಎಂಬ ಗ್ರಂಥದಲ್ಲಿ "ಕಲ್ಯಾಣದ ಬಿಜ್ಜಳರಾಜನ ಮಂತ್ರಿಯೂ, ಬಸವಣ್ಣನವರ ಸೋದರಮಾವನೂ ಆದ ಬಲದೇವನು ಬಸವಣ್ಣನವರನ್ನು ಕಲ್ಯಾಣಕ್ಕೆ ಕರೆಯಿಸಿಕೊಂಡು ತನ್ನ ಮಗಳಾದ ಗಂಗಾಂಬಿಕೆಯನ್ನು ಕೊಟ್ಟು ವಿವಾಹ ಮಾಡಿದನು." (ಪುಟ 13) ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಬಸವಣ್ಣನವರು ಕಲ್ಯಾಣಕ್ಕೆ ಬರುವ ಮುಂಚೆ ಮಂಗಳವಾಡದಲ್ಲಿ ಇದ್ದರು. "ಹೀಗೆ ಬಿಜ್ಜಳನು ದಿನದಿಂದ ದಿನಕ್ಕೆ ಬಲಯುತನಾಗುತ್ತಿದ್ದ, ಹೊಸದರಲ್ಲಿ ಬಸವಣ್ಣನವರು ಕೂಡಲಸಂಗಮದಿಂದ ಆತನ ರಾಜಧಾನಿಯಾದ ಮಂಗಳವಾಡಕ್ಕೆ ಕ್ರಿ. ಶ. 1150-51 ರಲ್ಲಿ ಆಗಮಿಸಿದರು." ಮತ್ತು "ಆಗ ಸೋದರಮಾವ ಸಿದ್ಧರಸನು ಬಿಜ್ಜಳನ ಅನುಮತಿ ಪಡೆದು ಬಸವಣ್ಣನವರನ್ನು ಬಾಚರಸನ ಕೈಕೆಳಗೆ ಕರಣಿಕರನ್ನಾದಿ ನಿಯಮಿಸಿದನು" ಎಂದು ಡಾ. ಎಂ. ಎಂ. ಕಲಬುರ್ಗಿಯವರು ಹೇಳಿದ್ದಾರೆ. (ಶ್ರೀ ಬಸವೇಶ್ವರರು : ಬಸವ ಸಮಿತಿ ಬೆಂಗಳೂರು, ಪುಟ 69-70). ಮಂಗಳವಾಡ

ದಲ್ಲಿ ಬಸವಣ್ಣನವರು 5-6 ವರ್ಷ ಇದ್ದಂತೆ ಕಾಣುತ್ತದೆ. ಏಕೆಂದರೆ ಬಸವಣ್ಣನವರು ಕಲ್ಯಾಣಕ್ಕೆ ಬಂದುದು 1156ರಲ್ಲಿ ಆವಾಗ ಇವರ ವಯಸ್ಸು 25-26 ವರ್ಷಗಳು.

"ಹೀಗೆ ಬಹುಮುಖವಾಗಿ ವ್ಯಕ್ತಿತ್ವವನ್ನು ಅರಳಿಸುತ್ತ ಅನಂತ ಶರಣರನ್ನು ಆಕರ್ಷಿಸುತ್ತ, ಬಸವಣ್ಣನವರು ಮಂಗಳವಾಡದಲ್ಲಿ ಒಂದೆರಡು ವರುಷ ಕಳೆಯುವುದರೊಳಗಾಗಿ ತೈಲಪ ಹೇಡಿಯಾದುದರಿಂದ, ಬಿಜ್ಜಳನ ಪಾತ್ರ ರಾಜಧಾನಿ ಕಲ್ಯಾಣದಲ್ಲಿ ಪ್ರಮುಖಗೊಂಡಿತು." (ಅದೇ ಪು. 71), ಇದು ಸುಮಾರು ಕ್ರಿ. ಶ. 1152-53 ರಲ್ಲಿ ನಡೆಯಿತು, ಇದು ಆದ ಕೆಲವೇ ವರ್ಷಗಳಲ್ಲಿ ಅಂದರೆ 4-5 ವರ್ಷಗಳ ನಂತರ ಬಸವಣ್ಣನವರು ಕಲ್ಯಾಣಕ್ಕೆ ಬಂದರು. ಮುಂದೆ "after the death of Baladeva Basavesvara become minister of Bijjala in 1162A.D." (Page 24, (Sri Basavesvara : Commemoration volume). ಬಸವಣ್ಣನವರು ಮಂತ್ರಿಯಾದದ್ದು ಕ್ರಿ. ಶ. 1162 ರಲ್ಲಿ ಬಸವಣ್ಣನವರು ಕಲ್ಯಾಣದಲ್ಲಿ ಇದ್ದುದು 10-11 ವರ್ಷಗಳು ಮಾತ್ರ. ಈ ಅವಧಿಯಲ್ಲಿ ಬಸವಣ್ಣನವರ ಮದುವೆಯಾಗಿದ್ದರೆ ಬಾಲಸಂಗಯ್ಯನ ಜನನವಾಗಿ, ವಚನಗಳ ರಚನೆ ಮಾಡಬೇಕಾದರೆ 6-7 ವರ್ಷ ವಯಸ್ಸಿನಲ್ಲಿಯೇ ಈ ಕಾರ್ಯ ನಡೆಯಬೇಕಾಗುತ್ತದೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಈ ವಚನಗಳು ಬರೆದಿರಬಹುದೆ ? ಎನ್ನುವ ಮತ್ತೊಂದು ಸಮಸ್ಯೆ.

ಎರಡನೆಯದಾಗಿ ಶ್ರೀ ಆರ್. ಆರ್. ದಿವಾಕರರು ತಮ್ಮ 'ವಚನಶಾಸ್ತ್ರ ರಹಸ್ಯವು' ಎಂಬ ಗ್ರಂಥದಲ್ಲಿ, ಮತ್ತು ಶ್ರೀ ಎಂ. ಆರ್. ಶ್ರೀಯವರು ತಮ್ಮ 'ವಚನ ಧರ್ಮಸಾರ' ಗ್ರಂಥದಲ್ಲಿ 'ಅಪ್ರಮಾಣ ಕೂಡಲಸಂಗಮದೇವಾ' ಎನ್ನುವ ಅಂಕಿತದ ಮುಂದೆ ಪ್ರಶ್ನಾರ್ಥಕ ಚಿಹ್ನೆ ಇರಿಸಿದ್ದಾರೆ.

ಮೂರನೆಯದಾಗಿ ಡಾ. ಎಸ್. ಎಮ್. ಹುಣಶ್ಯಾಳ 'ಬಸವಾದಿ ಗಣ ಚರಿತ್ರೆ ಮತ್ತು ಗಣವಚನ ಮಂಜರಿ' ಎಂಬ ಗ್ರಂಥದಲ್ಲಿ ಬಾಲಸಂಗಣ್ಣ ಬಸವೇಶ್ವರರ ಪುತ್ರನು ಎಂದಿದ್ದಾರೆ. ಅವರು ಒಂದು ವಚನ ಉದಾಹರಿಸಿ ಕೆಳಗಿನಂತೆ ಉಲ್ಲೇಖಿಸಿದ್ದಾರೆ. "ಈತನು ಬಸವೇಶ್ವರನ ಪುತ್ರನು. ಬಹಳ ಕಾಲ ಜೀವಿಸಲಿಲ್ಲವೆಂದು ತೋರುತ್ತದೆ. ಸುಂದರ ವಚನಗಳನ್ನು ರಚಿಸಿದ್ದಾನೆ. 'ಕಮಠೇಶ್ವರ ಲಿಂಗ' ಎಂಬುದು ವಚನ ಮುದ್ರಿಕೆಯು, (ಪು: 78)

ನಾಲ್ಕನೆಯದಾಗಿ ಡಾ. ಎಂ. ಚಿದಾನಂದಮೂರ್ತಿಯವರು ತಮ್ಮ 'ವಚನ ಸಾಹಿತ್ಯ' ಎಂಬ ಗ್ರಂಥದಲ್ಲಿ ಕೆಲವು ವಚನಕಾರರು ಮತ್ತು ಅವರ ಅಂಕಿತಗಳು ಎಂಬಲ್ಲಿ ಬಾಲಸಂಗಯ್ಯನ ವಚನಾಂಕಿತ 'ಬಾಲಸಂಗಯ್ಯ ಪ್ರಿಯ ಕೂಡಲ ಸಂಗಮದೇವ ಎಂದು ಹೇಳಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದಿಂದ 1976 ರಲ್ಲಿ 'ಬಾಲಸಂಗಯ್ಯನ ವಚನಗಳು' ಎಂಬ ಗ್ರಂಥ ಮುದ್ರಣವಾಗಿದೆ. ಇದನ್ನು ಸಂಪಾದಿಸಿದವರು ಡಾ. ಎಂ. ಎಸ್. ಸುಂಕಾಪೂರ. ಅದೇ ಗ್ರಂಥದ ಪ್ರಸ್ತಾವನೆಯಲ್ಲಿ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ಈತನು ತನ್ನ ಕೃತಿಯಲ್ಲಿ ಎಲ್ಲೂ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಅನ್ಯರೂ ಈ ವಿಷಯದ ಮಾತೆತ್ತಿಲ್ಲ, ನಾವು ರೂಢಿಯ ಮಾತನ್ನೇ ನಂಬಿ ಈ ವಚನಕೃತಿಗೆ 'ಬಾಲಸಂಗಯ್ಯನ ವಚನಗಳು' ಎಂದು ಕರೆದಿದ್ದೇವೆ' ಎಂದಿದ್ದಾರೆ, ಪ್ರಸ್ತಾವನೆಯನ್ನು ಮುಂದುವರಿಸುತ್ತ ಬಸವಣ್ಣನವರ ಮಗ ಬಾಗಸಂಗಯ್ಯನ ವಚನಗಳು ಅಲ್ಲವೆಂದು ನಿರ್ಧರಿಸಿದ್ದಾರೆ. "ಇತ್ತೀಚಿನ ಸಂಶೋಧನೆಯಿಂದ ಇದೊಂದು ಊಹೆಯೇ ಹೊರತು ಸತ್ಯ ಸಂಗತಿಯಲ್ಲವೆಂಬುದು ತಿಳಿದಿದೆ." ಎಂದಿದ್ದಾರೆ. ಹೀಗೆ ಬಾಲಸಂಗಯ್ಯನ ವಚನಗಳು ಮತ್ತು ವಚನಾಂಕಿತದ ಬಗ್ಗೆ ಬಿನ್ನಾಭಿಪ್ರಾಯಗಳಿವೆ.

ಈ ವಚನಗಳಿಗೆ 'ಶಿಖಾರತ್ನ ಪ್ರಕಾಶ' ಅಥವಾ 'ಶಿಖಾರತ್ನದ ವಚನಗಳು' ಎಂದು ಒಂದು ಹಸ್ತ ಪ್ರತಿಯಲ್ಲಿದೆ. ಈ ವಚನಗಳು ಕೂಡಾ ಬಸವಣ್ಣನವರೇ ಬರೆದಿರಬಹುದು ಎನ್ನುವದಕ್ಕೆ ಕೆಳಗಿನ ಆಧಾರಗಳನ್ನು ನೋಡಬಹುದು:)

1. ಮೊದಲನೆಯದಾಗಿ ಆರ್. ನರಸಿಂಹಾಚಾರ್ಯ ಬರೆದ 'ಕರ್ನಾಟಕ ಕವಿಚರಿತೆ' (ಪ್ರಥಮ ಸಂಪುಟ) ಇದರಲ್ಲಿ ಬಸವಣ್ಣನವರೇ 'ಶಿಖಾರತ ವಚನ'ಗಳು ಬರೆದಿದ್ದಾರೆ ಎಂದು ಕೆಳಗಿನಂತೆ ಉಲ್ಲೇಖಿಸಿದ್ದಾರೆ: "ಬಸವ ಸು. 1160 ಈತನು ಘಟಸ್ಥಲ ವಚನ ಶಿಖಾರತ್ನ ವಚನ, ಕಾಲಜ್ಞಾನ ವಚನ, ಮಂತ್ರಗೋಪ್ಯ ಎಂಬ ಗ್ರಂಥಗಳನ್ನು ಬರೆದಿದ್ದಾನೆ" (ಪು. 186). ಜೊತೆಗೆ 'ಶಿಖಾರತ್ನದ ವಚನ'ದ ಬಗ್ಗೆ ಬರೆಯುತ್ತ "ಇದರಲ್ಲಿ 34 ವಚನಗಳಿವೆ. ಒಂದನ್ನು ಉದಾಹರಿಸುತ್ತೇವೆ." ಎಂದು ಕಲ್ಲು ದೇವರು ದೇವರಲ್ಲ, ಮಣ್ಣು ದೇವರು ದೇವರಲ್ಲ, ಮರದ ದೇವರು ದೇವರಲ್ಲ ಪಂಚಲೋಹದಲ್ಲಿ ಮಾಡಿದ ದೇವರು ದೇವರಲ್ಲ, ಸೇತುರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ ಮೊದಲಾದ ಅಷ್ಟಾಷಷ್ಟಿ ಕೋಟಿ ಪುಣ್ಯ ತೀರ್ಥಂಗಳು, ಪುಣ್ಯಕ್ಷೇತ್ರಂಗಳಲ್ಲಿ ಇಹದೇವರು ದೇವರಲ್ಲ: ತನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವ ನೋಡಾ ಅಪ್ರಮಾಣ ಕೂಡಲಸಂಗಮದೇವಾ." ಒಂದು ವಚನವನ್ನು ಉದಾಹರಣೆಗಾಗಿ ಕೊಟ್ಟಿದ್ದಾರೆ,

2. ಎರಡನೆಯದಾಗಿ ನನಗೆ ದೊರೆತ ಹಸ್ತ ಪ್ರತಿಯಲ್ಲಿ "ಶ್ರೀಸಾಂಬ ಶಿವಾಯ ನಮಃ ಬಸವೇಶ್ವರ ಸ್ವಾಮಿಗಳ ನಿರೂಪಿಸಿದ। ಭಿನ್ನಜ್ಞಾನ ಮೋಕ್ಷ ವಿಲ್ಲೆಂದು। ಸಮ್ಯಕ ಜ್ಞಾನದಲ್ಲಿ ನಿರೂಪಿಸಿದ 'ಶಿಖಾರತ್ನ ಪ್ರಕಾಶ'। ಮುವತ್ತು

ಮೂರು ವಚನಂಗಳು ಲೇಖನಾರಂಭ ॥ ಶುಭವಸ್ತು ॥ ಎಂದು ಹೇಳಿ ವಚನಗಳ ಹಸ್ತಪ್ರ[illegible] ಮಾಡಿಕೊಂಡಿದ್ದಾರೆ, ಮತ್ತು ಕೊನೆಗ ಕೆಳಗಿನಂತೆ ಬರೆದು,

"ಇತಿ [illegible] ಜ್ಞಾನ [illegible]ದು ಸಮ್ಯಕ ಜ್ಞಾನದಲ್ಲಿ ನಿರೂಪಿಸಿದ, ಮುವತ್ತು ಮೂ[illegible] ಗ್ರಂಥ ಸಮಾಪ್ತಿ ಮಂಗಲ ಮಹಾ। ಶ್ರೀ ॥ ಶ್ರೀ॥ ಶಕು 1783 ಕ್ಷಯನಾಮ ಸಂವತ್ಸರದಲ್ಲಿ ಮಿತಿ ಶ್ರಾವಣ ಶುದ್ಧ ನವಮಿ ದಿನಾ ರವಿವಾರ ಸಾಯಂಕಾಲಕ್ಕೆ ಸಮಾಪ್ತಿ" ಎಂದು ಗ್ರಂಥ ಬರೆದು ಮುಗಿಸಿದ್ದಾರೆ.

ಆದರೆ ಕವಿ ಚರಿತೆಕಾರರು ತಮ್ಮ ಗ್ರಂಥದಲ್ಲಿ ಮುವತ್ತುನಾಲ್ಕು ವಚನಗಳೆಂದು ಹೇಳಿದ್ದಾರೆ. ಡಾ. ಎಂ. ಎಸ್. ಸುಂಕಾಪೂರ ಸಂಪಾದಿಸಿದ ಗ್ರಂಥದಲ್ಲಿ ವಚನಗಳ ಸಂಖ್ಯೆ 522 ಮತ್ತು ಅನುಬಂಧದಲ್ಲಿ ಕೊಟ್ಟಿರುವ ಹೆಚ್ಚಿನ ವಚನಗಳು 36 ಒಟ್ಟು 558 ವಚನಗಳಿವೆ. ಆದರೆ ಇಲ್ಲಿ ವಚನಗಳ ಸಂಖ್ಯೆ ಮಹತ್ವವಿಲ್ಲ. ವಚನಗಳ ಅಂಕಿತ ಬಾಲಸಂಗಯ್ಯನದೆ ಅಥವಾ ಬೇರೆಯವರದೇ ?

ಈ ವಚನಗಳು ಬಸವಣ್ಣನವರೇ ಬರೆದಿರಬಹುದೆ ? ಬರೆದಿದ್ದರೆ ಬಸವಣ್ಣನವರು ಈ ವಚನಗಳಿಗೆ 'ಶಿಖಾರತ್ನ ವಚನ' ಅಥವಾ 'ಶಿಖಾರತ್ನ ಪ್ರಕಾಶ' ವೆಂದು ಹೆಸರು ಕೊಡಲು ಕಾರಣವೇನು ? ಒಂದು ವೇಳೆ ಅವರೇ ಬರೆದ ಷಟ್‌ಸ್ಥಲದ ವಚನಗಳಲ್ಲಿ ಮತ್ತು ಶಿಖಾರತ್ನ ವಚನಗಳಲ್ಲಿ ವ್ಯತ್ಯಾಸವಿದ್ದರೂ, ಅಂಕಿತದಲ್ಲಿಯೂ ವ್ಯತ್ಯಾಸವಿದೆ, 'ಅಪ್ರಮಾಣ ಕೂಲಲಸಂಗಮದೇವಾ' ಎಂದು ಹೇಳಲು ಕಾರಣ ವೇನು ? ಇದಕ್ಕೂ ಕಾರಣ ಇರಬಹುದು. ಶರಣರು ಒಂದೊಂದು ಸ್ಥಳಕ್ಕನುಗುಣವಾಗಿ ಆ ಆ ಸ್ಥಳದ ವಚನಗಳನ್ನು ಬರೆದಿದ್ದಾರೆ,

ಶಿಖಾರತ್ನವೆಂದರೆ ಶಿರೋರತ್ನ. ರತ್ನಗಳಲ್ಲಿ ಶ್ರೇಷ್ಠವಾದದ್ದು. ಈ ವಚನಗಳು ಶಿಖಾರತ್ನದ ಬೆಳಗಿನಂತೆ. ಶಿಖಾರತ್ನದ ವಚನಗಳಲ್ಲಿ ಶಿವಯೋಗ ಸಾಧನೆಯಿಂದ ಒಂದೊಂದು ಚಕ್ರದಲ್ಲಿ ಆತ್ಮನಿಗೆ ಆಗುವ ಅನುಭವವನ್ನು ವಿವರಿಸುತ್ತ, ತನ್ನ ತಾನರಿಯುವುದೇ ಜೀವನದ ಗುರಿ ಎಂದು ವಿವರಿಸಿದ್ದಾರೆ. ಅದಕ್ಕಾಗಿಯೇ ಸಮ್ಯಕ್ ಜ್ಞಾನದಲ್ಲಿ ನಿರೂಪಿಸಿದ 'ಶಿಖಾರತ್ನ ಪ್ರಕಾಶ' ಎಂದಿದ್ದಾರೆ.

ಈ ವಚನಗಳು ಪರಮಾತ್ಮನ ಸ್ವರೂಪ, ಅವನೇ ಈ ಜಗತ್ತಿಗೆ ಆಧಾರಭೂತನಾಗಿದ್ದು ಅದರ ಉತ್ಪತ್ತಿ ಸ್ಥಿತಿಲಯಕ್ಕೆ ಕಾರಣನಾಗಿದ್ದಾನೆ ಎನ್ನುವ ಅರ್ಥವನ್ನು ಹೊಂದಿದ್ದು, ಹೆಚ್ಚಾಗಿ ವಚನಗಳು ಅದ್ವೈತ ಪರವಾಗಿವೆ, ಅಂತಿಮ ಸ್ಥಿತಿಯ

ಅನುಭವದಲ್ಲಿದ್ದಾಗ ತನ್ನ ತಾನಾಗಿ ವಿರಾಜಿಸುತ್ತಾನೆ, ಅದೇ ಆತ್ಮ ಸಾಕ್ಷಾತ್ಕಾರದ ಸ್ಥಿತಿ ಅಥವಾ ಲಿಂಗಾಂಗ ಸಾಮರಸ್ಯ, ಒಂಭತ್ತು ಚಕ್ರಗಳಲ್ಲಿ ಒಂದೊಂದು ಅನುಭವ ವಾಗುತ್ತದೆ. ಈ ಅನುಭವವನ್ನು ನಿಜವೆಂದು ನಂಬಿ ಸಾಧಕ ಅದೇ ಅನುಭವ ಅನುಭವಿಸಬಹುದು. ಆ ಅನುಭವ ನಿಜವಾದುದಲ್ಲ. ಇದನ್ನು ಅನುಭವಿಸುವವರು ಭ್ರಾಂತ ಯೋಗಿಗಳು ಎನ್ನುತ್ತಾರೆ ಬಸವಣ್ಣನವರು.

"ಇಂತೀ ಕರ್ಮಯೋಗ, ಲಂಬಿಕಾಯೋಗ. ಧ್ಯಾನ ಯೋಗಂಗಳೆಂಬ ಯೋಗಂಗಳ ಸಾಧಿಸಿ ದೇವರ ಕಂಡೆಹೆನೆಂದು ಸತ್ತ ಭ್ರಾಂತಿಯೋಗಿಗಳಿಗೆ ಕಡೆಯಿಲ್ಲ. ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವ ನೋಡಾ ಅಪ್ರಮಾಣ ಕೂಡಲಸಂಗಮದೇವಾ" ಇಲ್ಲಿ ಜ್ಞಾನ ಮಾರ್ಗವನ್ನು ಹೇಳಿದ್ದಾರೆ, ತನ್ನ ತಾನರಿವುದೇ ಚಿದ್ಬೆಳಗನರಿಯುವ ಸ್ಥಿತಿ. ಈ ಸ್ಥಿತಿ ಅರಿತರೆ ತಾನೇ ಅಗಮ್ಯ ಅಗೋಚರ.

ಒಟ್ಟಾರೆ ಬಸವಣ್ಣನವರು ಈ ವಚನಗಳಲ್ಲಿ ಜ್ಞಾನ ಮಾರ್ಗವನ್ನೇ ಹೇಳಿ ತನ್ನ ತಾನರಿವುದೇ ಮುಖ್ಯ ಗುರಿ ಎಂದಿದ್ದಾರೆ. ಈ ಅನುಭವವನ್ನು ಅನುಭವಿಸಿಯೇ ತಿಳಿಯಬೇಕು, ಅನುಭವಕ್ಕೆ ಬೇರೆ ಪ್ರಮಾಣವಿಲ್ಲ, ಅದಕ್ಕಾಗಿಯೇ 'ಅಪ್ರಮಾಣ' ವೆನ್ನುವದು ಕೂಡಲಸಂಗಮದೇವಾ ಎಂಬ ಅಂಕಿತಕ್ಕೆ ಸೇರಿಸಿರಬೇಕು. ●

ಹೆಣ್ಣು

ಮದುವೆಗೆ ಮುಂಚೆ ನಾ—
ಎಲ್ಲ ಕಡೆಗೆ ನಲಿದಾಡುತ್ತಿದ್ದೆ.
ಸ್ವತಂತ್ರವಾಗಿ-ನಾನಾಡಿಯಂತೆ ನಾನು
ಮದುವೆ ಆದಮೇಲೆ—
ನನ್ನದೆಲ್ಲವನ್ನೂ ಕಳೆದುಕೊಂಡೆ
ಪಂಜರದೊಳಗಿನ ಹಕ್ಕಿಯಂತೆ
ನಾನು—
ಗಂಡನ ಕೈಸೆರೆಯಾದೆ

—ಉಮಾ ಫಿರಂಗಿ

ಸಿಕ್ಕು

ಇತ್ತೀಚಿನ ಹಗಲುಗಳಲ್ಲಿ ಸಾಯುತ್ತಿದ್ದೇನೆ
ಸಂಜೆ ಭಾವನೆಗಳು ಕೆಣಕುತ್ತವೆ
ಕನಸಿನ ಕಾರಂಜಿ ಪುಟಿಯುತ್ತದೆ
ಮತ್ತೆ ಬದುಕುತ್ತೇನೆ...ರಾತ್ರಿ ಮಾತ್ರ

ಬೆಳಗು ಬೈಗಿನ ಮುಖವಾಡಗಳೊಂದಿಗೆ
ರಾತ್ರಿಯ ನಿಶೆ
ಸಿಂದಿಯೊಂದಿಗೆ ಸಂಧಿ ಮಾಡಿಕೊಳ್ಳುತ್ತ
ಚಟ ಸಿಕ್ಕರೆ
ಗಟಾರವನ್ನೇ ಗುಟುಕರಿಸುತ್ತ
ತೂಕಡಿಸುತ್ತವೆ...ಹಲ್ಕಟ ಚಟಗಳು
ಹಿಂದಿನ ದಿನಗಳ ಬಗ್ಗೆ ಮನಸಿನ ಮೆಲಕು

ಒಬ್ಬ ರಾಜನಿಗೆ ಹಲವು ಚಮಚಾ ಕವಿಗಳಂತೆ
ಕೋಗಿಲೆ ಹಾಡುತ್ತವಂತೆ
ನವಿಲು ಕುಣಿಯುತ್ತವಂತೆ
ರಾಜ್ಯದ ಜನ ಸುಖವಾಗಿದ್ದರಂತೆ
ಇವರಿಗೇನು ಗೊತ್ತು ?
ನಮ್ಮ ಸುಖವನ್ನು...ಸ್ವಾತಂತ್ರ್ಯದ ಮೊದಲೇ
ಪರಕೀಯರು ದೋಚಿ ದಕ್ಕಿಸಿಕೊಂಡರಂತೆ ?
ಅಂದ್ರ ಈಗ ಸುಖನ ಇಲ್ಲಂತಲ್ಲ
ಇಷ್ಟ ಇದ್ದದ್ದನ್ನ ಮತ್ತ ಮಾರಕೊಂಡಿಲ್ಲ ಅಷ್ಟೆ

ಇಂದು ನನ್ನ ಒಡಕು ದಿನಗಳೇ
ಮುರುಕಾ ಮನೆಯ
ಚಿಂದಿ ಬಟ್ಟೆಯಲಿ ಒದ್ದಾಡುವಾಗ
ಹರಕು ಚಾದರಿನಲ್ಲೆ ಕಾಲು ಸಿಕ್ಕಿಸಿಕೊಂಡ ಮಗಳು

ನಾ...ವಲ್ಲೊ ನಮ್ಮಪ್ಪಾ
ಮೊದಲ ನನ್ನ ಕಾಲ ಬಿಡಿಸೆಂದು
ಕಿರುಚುವುದು ವಾಸ್ತವ

ಸಿಗದ ಹಗಲುಗನಸುಗಳನ್ನು
ರಾತ್ರಿಗೆ ಮಾರಿಕೊಂಡು
ಬೆಳಗಿನ ಸಕ್ಕರೆ ನಿದ್ದೆಯಲಿ
ಈಕೆ...ಎಬ್ಬಿಸುತ್ತಾಳೆ
ರ್‍ರೀ...ಏಳ್ರಿ ನಳಾ ಹೋಗ್ಯಾವು
ಎಳ್ರಿನ್ನ...ಹಾಲ ಮುಗಿತಾವು
ಲೇಟಾದ್ರ ಚಿಮಣಿ ಎಣ್ಣಿ ಸೈತ ಸಿಗೊದಿಲ್ಲ...
ಹೆಂತಾ ದಿನಮಾನ ಬಂದವೊ ಶಿವನ
ಆಗ ಮನೆಗಷ್ಟೇ ಪ್ರಧಾನಿ ನಾ
ಏ ? ? ? ಏನಾಗದ ನಿನಗ ?
ಯಾಕ ? ಸೆಂಟ್ರಲ್ ಬಜೆಟನ್ಯಾಗ
ಚಿಮಣಿ ಎಣ್ಣಿದೊಂದ ದರ ಕಡಿಮ್ಯಾದದ್ದು ಸಾಕಾಗಿಲ್ಲ ?
ಹಿಂಗಂದು...ಸರ್ಕಾರದ ಇಜ್ಜತ ತೇಗಿಬ್ಯಾಡಗೇ
ಇತ್ತಿತ್ತಲಾಗ ಕಾನೂನು ಬಾಳ ಭಾರೀಕವ...ಹೂಂ...

ಮತ್ತೆ ರಾತ್ರಿ ಕಪ್ಪೆಗೆ ರೆಪ್ಪೆ ಥಳಕು ಹಾಗುವಾಗ
ಬಣ್ಣದ ಕನಸುಗಳು ಮುತ್ತಿಗೆ ಹಾಕುತ್ತವೆ
ಮುತ್ತಿನರಮನೆ ತುಂಬಾ ನಾನೇ ರಾಜಾ
ನನ್ನನ್ನಾಳುವವ ಕೋತಂಬರಿ ಬೀಜ
ವರ್ತಮಾನದಲಿ ಎಲ್ಲಾ ಚಲ್ಲಾ ಪಿಲ್ಲಿ
ನಾನೇ ಕಂಡ ನನ್ನ ಆಸೆಯ ಕನಸುಗಳು
ವಾಸ್ತವದಂಗಳದಲ್ಲಿ ಮಂಗಮಾಯ
ಕಾನ್ವೆಂಟ ಕಂದ ಅರಚುತ್ತದೆ
ಪಪ್ಪಾ...ಹೋಮವರ್ಕ ಬುಕ್ ಬೇಕು
ಈಕೆ ಕಿರುಚುತ್ತಾಳೆ
ರೊಕ್ಕ ಈಸ್ಕೊಂಡು...ಚಾ ಪುಡಿ ತಗೊಂಬಾ

ಪೇಪರಿನ ವರ್ತಮಾನದಲಿ ಭಾರೀ ಸುದ್ದಿ
ಭಾರತಿಯ ವಸ್ತ್ರಾಭರಣಗಳನ್ನು ಮತ್ತೆ ಒತ್ತೆ ಇಡಲಾಗಿದೆ
ನಾಳೆ ನಮ್ಮ ನಿಮ್ಮನ್ನು ಹರಾಜಿಗೆಹಚ್ಚಬಹುದು
ಇಲ್ಲಾ ಮಾರಾಟ ಮಾಡಬಹುದು   ಅಥವಾ
ನಮ್ಮ ವಂಶಜರೇ ಬೇಕೆಂದು
ಇನ್ನೊಬ್ಬರೆದೆಗೆ ಗುಂಡಿಡ ಬಹುದು
ಮತ್ತೊಬ ಹಿಟ್ಲರ್ ಇಲ್ಲಿ ಇಲ್ಲೇ ಜನಿಸಬಹುದು
ಇಲ್ಲಿ ಕೇಳವರಿಲ್ಲ... ಕಿಸಿಯುವರಿಲ್ಲ

ನಮ್ಮತನವನ್ನು ಮೇಲಿನವರಿಗೆ ಮಾರಿಕೊಂಡ,
ವರ್ತಮಾನಕ್ಕೆ ಮುಖ ಒಡ್ಡದ ನಾವು
ಪುಕ್ಕಟೆ ಕನಸಿನ ಸಾಮ್ರಾಜ್ಯದಲ್ಲೇ ಇದ್ದೇವೆ
ಕಹಿ ವಾಸ್ತವವನ್ನೇ ಮಾರಾಟ ಮಾಡುವ
ನಮ್ಮನ್ನಾಳುವ ನಮ್ಮ ಜನ
ನಮ್ಮೊಟ್ಟಿಗೇ ಇದ್ದು...ನಮ್ಮವರಾಗುತ್ತಾರೆ

ಚಲಿಸುತ್ತಿದ್ದೇನೆ ದಾರಿ ಸುಗಮವಿಲ್ಲ
ಸಾವಿರ ನೋವಿನೊಂದಿಗೆ ಕೊಸರಾಡಿದ್ದೇನೆ
ಬಿಗಡಾಯಿಸಿದ ಬದುಕು ಸರಳವಾಗುತ್ತಿಲ್ಲ
ಇತ್ತೀಚಿನ ಹಗಲುಗಳಲ್ಲಿ ಸಾಯುತ್ತೇನೆ ?
ಯಾಕಂದ್ರ
ಇಲ್ಲಿ ಕೇಳವರಿಲ್ಲ...ಕಿಸಿಯುವರಿಲ್ಲ

ಹೆಣ್ಣು

ಸಂಜೆ ವಿಪರೀತ ಚಳಿ
ಎಲ್ಲೆಲ್ಲೂ ಹಿಮ ಬಿದ್ದಿದೆ
ಹಿಮರಾಜ ನದಿಗೆ
ಮುತ್ತು ಕೊಟ್ಟಿರಬೇಕು
ಅದಕ್ಕೇ ಹೆಪ್ಪುಗಟ್ಟಿ ನಿಂತಿದೆ

—ಉಮಾ ಫಿರಂಗಿ

ದಲಿತ ಸಾಹಿತ್ಯದ ಪ್ರಾತಿನಿಧಿಕ ಕೃತಿ-'ಒಡಲಾಳ'

ಕೆ. ಆರ್. ದುರ್ಗಾದಾಸ್

ದೇವನೂರರ 'ಒಡಲಾಳ' ದಲಿತ ಕುಟುಂಬವೊಂದರ ಸ್ಥಿತಿಗತಿಗಳನ್ನು ದಾಖಲಿಸುವುದರೊಂದಿಗೆ ಆ ಕುಟುಂಬ ಪ್ರತಿನಿಧಿಸುವ ಸಂಸ್ಕೃತಿಯನ್ನೂ ಎಳೆಎಳೆಯಾಗಿ ಬಿಡಿಸಿಟ್ಟಿದೆ. ಈ ಸಂಸ್ಕೃತಿಯ ಸ್ವರೂಪ ಏಕಮುಖವಾದದ್ದಲ್ಲ. ಬಡತನದಲ್ಲೂ ಒತ್ತದ ಪ್ರೀತಿಯ ಸೆಲೆ. ದಾರಿದ್ರ್ಯದಲ್ಲೂ ಅರಳುವ ಕಲೆ, ರೋಗಗ್ರಸ್ಥ ಜಡತೆಯಲ್ಲಿಯೂ ಕಾಣುವ ಚಲನೆ ಈ ಸಂಸ್ಕೃತಿಯ ಕಕ್ಷೆಯಲ್ಲಿ ಬರುತ್ತವೆ. ಸಾಕವ್ವ ಕುಟುಂಬದ ಬದುಕಿನ ವಿವರಗಳು ಮತ್ತು ಈ ಬದುಕಿನ ಅವಿಭಾಜ್ಯ ಅಂಗಗಳಾದ ವಸ್ತುವಿಷಯಗಳು ಒಟ್ಟಿಗೇ ಈ ಕಾದಂಬರಿಯಲ್ಲಿ ವರ್ಣಿತವಾಗಿವೆ, ಇಲ್ಲಿ ಚಿತ್ರಣಗೊಂಡಿರುವ ವಸ್ತುವಿಷಯಗಳು ದಲಿತರ ಭೌತಿಕ ಸಂಸ್ಕೃತಿ (Materialistic culture) ಯನ್ನು ಪ್ರತಿನಿಧಿಸಿವರೆ ಪಾತ್ರಗಳ ಮುಖಾಂತರ ಕಂಡರಿಸಿರುವ ಜೀವನ ಅಂಥ ಕುಟುಂಬಗಳು ಹೊಂದಿರುವ ಪಾರಂಪರಿಕ ನಂಬುಗೆಗಳು, ಸಂಪ್ರದಾಯಗಳು ಮತ್ತು ಆಚರಣೆಗಳಲ್ಲಿ ಹುದುಗಿರುವ ಅಭೌತಿಕ ಸಂಸ್ಕೃತಿಯನ್ನು ಧ್ವನಿಸುತ್ತದೆ. ಇದರಿಂದ ಇಡಿಯಾಗಿ ದಲಿತರ ಪರಿಸರ ಮತ್ತು ಜೀವನವನ್ನು ಭಾಷೆಯಲ್ಲಿ ಕಟ್ಟಿಕೊಡುವುದು ದೇವನೂರರಿಗೆ ಸಾಧ್ಯವಾಗಿದೆ. ಈ ಚಿತ್ರಣಕ್ಕೆ ದೇವನೂರರು ದಲಿತರ ಆಡು ಭಾಷೆಯನ್ನೇ ಬಳಸಿಕೊಂಡಿರುವುದರಿಂದ ಆ ಪರಿಸರದ ಜೀವಂತ ಚಿತ್ರಣ ಸಾಧ್ಯವಾಗಿದೆ. ಜನಪದ ನೆಲೆಯ ನುಡಿಗಟ್ಟುಗಳು, ಗಾದೆ, ಧ್ವನಿ ಮುಖಾಂತರ ಆವರ್ತನಗೊಳ್ಳುವ ಲಯ-ಎಲ್ಲವೂ ಸಮ್ಮಿಳಿತಗೊಂಡು ಇಲ್ಲಿನ ಭಾಷೆ ರೂಪುಗೊಂಡಿದ್ದು ಸಹಜ ಸ್ಥಿತಿಯಲ್ಲಿಯೇ ಕಲಾತ್ಮಕವಾಗಿದೆ. ಈ ಕಾದಂಬರಿ ಪ್ರತಿನಿಧಿಸುವ ದಲಿತ ಸಂಸ್ಕೃತಿಯ ಕೆಲವೊಂದು ಮುಖಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಭೌತ ವಸ್ತು ವಿಷಯಗಳು :

ಮಾನವ ಬದುಕಿನ ಜೊತೆ ಜೊತೆಗೆ ರೂಪುಗೊಂಡ ವಸ್ತುಗಳು ಮಾನವ ಸಂಸ್ಕೃತಿಯ ಅಧ್ಯಯನಕ್ಕೆ ಆಕರ ಸಾಮಗ್ರಿಗಳೂ ಆಗಿವೆ. ಒಂದು ಸಮುದಾಯದ ಸೃಷ್ಟಿಗಳೆನಿಸಿಕೊಳ್ಳುವ ದೇವಾಲಯಗಳು ಅಲ್ಲಿನ ವಾಸ್ತುಶಿಲ್ಪ, ಮೂರ್ತಿ ಶಿಲ್ಪಗಳು, ರಾಜರ ಮನೆಗಳು ಮತ್ತು ಅವರ ಸ್ನಾನದ ಗೃಹಗಳು, ಯುದ್ಧೋಪಕರಣಗಳು ಈಗಾಗಲೇ ಸಂಸ್ಕೃತಿಯ ವಸ್ತುಗಳಾಗಿ ಗುರುತಿಸಲ್ಪಟ್ಟಿವೆ, ಇವೆಲ್ಲವೂ ಕೆಲವೇ ಪ್ರತಿಷ್ಠಿತ ಜನರ ವಸ್ತು ವಿಷಯಗಳು ಮಾತ್ರ. 'ಒಡಲಾಳ' ಕಾದಂಬರಿಯಲ್ಲಿ ಬರುವ ವಸ್ತು ವಿಷಯಗಳು ಸಾಮಾನ್ಯ ಕುಟುಂಬವೊಂದರ ಮನೆ, ಆ ಕುಟುಂಬದ ಅಡುಗೆಯ

ಸಾಮಾನುಗಳು, ಬೇಸಾಯದ ಉಪಕರಣಗಳು, ಕುಲದೇವತಾ ಚಿತ್ರ ಮತ್ತು ಹರಕೆಯ ವಸ್ತುಗಳು ಹೀಗೆ ಇಡೀಯಾಗಿ ಒಂದು ಕುಟುಂಬದ ಒಟ್ಟು ಬದುಕಿನಲ್ಲಿ ಪಾಲು ಪಡೆದ ವಸ್ತುಗಳು ಕಥೆಯ ವಸ್ತುವಿಗನುಸರಿಸಿ ವರ್ಣಿತವಾಗಿವೆ. ಒಂದು ಕಾಲಕ್ಕೆ ತುಂಬಿದ ಮನೆಯಾಗಿ ಸಮೃದ್ಧಿಯಾಗಿದ್ದ ಸಾಕವ್ವನ ಹಟ್ಟಿ ಈಗ ಬರಿದೋ ಬರಿದು. ಸಾಕವ್ವ ತಲುಪಿರುವ ಮುಪ್ಪಾವಸ್ಥೆಗೂ, ಆಕೆಯ ಹಟ್ಟಿ ಜೀರ್ಣಾವಸ್ಥೆಗೆ ಇಳಿದಿರುವುದಕ್ಕೂ ಪರಸ್ಪರ ಸಂಬಂಧವಿದೆ, ಕೃತಿಯ ಪ್ರಾರಂಭದ ಸಾಲುಗಳು ಇವು. "ಸಾಕವ್ವನ ನಲ್ಕು ಕಂಬದ ತೊಟ್ಟಿ ಹಟ್ಟಿ ಎನ್ನೋದು ದೇಹವ ಭೂಮಿಗೆ ಇಳಿಬಿಟ್ಟು ಹಂಚು ಹುಲ್ಲು ತೆಂಗಿನ ಗರಿಯ ಚಪ್ಪರೆ ಮುಂಡಾಸು ಮಾಡಿಕೊಂಡು ನಿಂತಿತ್ತು" (ಪು. i)* ಸಾಕವ್ವನ ದೇಹ ತಲುಪಿರುವ ಸ್ಥಿತಿಯನ್ನು ದೇವನೂರರು ಹೀಗೆ ವರ್ಣಿಸುತ್ತಾರೆ. "ಅವಳು ಕುಳಿತಿದ್ದರೂ ಸಪೋರ್ಟಿಗಾಗಿ ತನ್ನ ಜೀಕದ ಕೈಯನ್ನು ನೆಲಕ್ಕೆ ಚೆಲ್ಲಿದ್ದಳು. ಸಾಕವ್ವನ ಚರಮಕ್ಕೂ ಮೂಳೆಗೂ ಹೊಂದಾಣಿಕೆ ತಪ್ಪಿತ್ತಾದ್ದರಿಂದ ಮುಯ್ಯಚರುಮಗಳು ಸ್ವತಂತ್ರವಾಗಿ ಅಲ್ಲಾಡುತ ತಮ್ಮಷ್ಟಕ್ಕೆ ತಾವಿದ್ದುವು, ಅವಳ ನಡುವಾಗಿದ್ದ ಆಸರೆಗೋಲು ತಬ್ಬಲಿಯಾಗಿ ಮುಂದೆ ಬಿದ್ದಿತ್ತು. ಆ ಕೋಲಿಗೆ ನೊಣಗಳು ಸಾಕವ್ವನನ್ನು ಕೇರು ಮಾಡದೆ ಗುಂಪು ಕಟ್ಟಿ ಧಾಳಿ ಮಾಡುತ್ತಿದ್ದವು (ಪು. i).

ಮೇಲಿನ ಎರಡೂ ಚಿತ್ರಗಳು ಒಂದನ್ನೊಂದು ಆಶ್ರಯಿಸಿವೆ. ಆ ಎರಡೂ ಒಂದೇ ಮುಪ್ಪಾವಸ್ಥೆಗೆ ತಲುಪಿ ವಿಕಾರಗೊಂಡಿವೆ. ಇದನ್ನು ವರ್ಣಿಸುವ ಭಾಷೆ ಮತ್ತು ಕಥಾ ವಸ್ತುವಿನ ಪರಿಸರದ ಭಾಷೆ ಎರಡೂ ಒಂದೇ ಆಗಿರುವುದು ವಸ್ತುವನ್ನು ದೇವನೂರರು ಒಳಗಿನಿಂದ ನೋಡಲು ಆ ಮೂಲಕ ಸಾಧ್ಯವಾಗಿದೆ. ಅದನ್ನು ಕೇವಲ ದಾಖಲಿಸುತ್ತಿಲ್ಲ, ಅದನ್ನು ವರ್ಣಿಸುವ ರೀತಿಯಲ್ಲಿಯೇ ತಮ್ಮ ದೃಷ್ಟಿಯನ್ನು ಚೆಲ್ಲುತ್ತಾರೆ. ಇಡೀ ಕೃತಿಯ ತುಂಬ ಸಾಕವ್ವನ ಬದುಕಿಗೆ ನಿರ್ಜೀವ ವಸ್ತುವಾದ ಹಟ್ಟಿ ಪ್ರತಿಕ್ರಿಯಿಸುವ ಸೂಚನೆಗಳಿವೆ, 'ಒಂದು ಕಾಲದಲ್ಲಿ ಪೂರ್ತಿವೇ ಹಂಚು ಹೊದ್ದು ಮಡಗಾರಿಕೆ ಮಾಡಿದ್ದ ಆ ಹಟ್ಟಿಯ ಸ್ಥಿತಿ ಈಗ ಯಾವ ಸ್ಥಿತಿಗೆ ಬಂದಿದೆಯೆಂದರೆ ಹಟ್ಟಿಯ ಹೊತ್ತು ನಿಂತಿದ್ದ ಕಂಬ, ಕವಾನು, ತೊಲೆಗಳು ಕುಗ್ಗಿ ಬಗ್ಗಿ ತಮ್ಮ ನೆರಳಡಿ ಉಸಿರಾಡುತ್ತಿದ್ದ ಜೀವಿಗಳ ಬಗ್ಗೆ ದಯ ತೋರುತ್ತ ನಿಂತಿದ್ದವು (ಪು-8), ಇಂಥ ಸ್ಥಿತಿ ತಲುಪಿದ ಹಟ್ಟಿಯನ್ನು ತುಂಬಿಕೊಂಡಿರುವುದು ಗವ್ವೆನ್ನುವ ಕತ್ತಲು. ಶಿವು ಪುಸ್ತಕಕ್ಕೆ ಕಣ್ಣಾಕಲು, ಕಣ್ಣಾಕಿದರೆ ಆಗಲೇ ಕತ್ತಲು ಎನ್ನುವುದು

---

* ಪುಟ ಸಂಖ್ಯೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟಗೊಂಡ 'ಒಡಲಾಳ' ಕಾದಂಬರಿಯ 1985ರ ಆವೃತ್ತಿಯನ್ನು ಅನುಸರಿಸಿ ಸೂಚಿಸಲ್ಪಟ್ಟವೆ

ಇದ್ದ ಬದ್ದ ಬೆಳಕನೆಲ್ಲ ನೆಲಕ್ಕೆ ತುಳಿದು ಬುಟ್ಟಿತ್ತು (ಪು. 17). ಕಿರುಮನೇಲಿ ಮಾತ್ರ ಆಗ ಹಚ್ಚಿದ್ದ ದೀಪದ ಬೆಳಕು ಕೊಣೆ ಮೂಣೆ ಅಂತ ಕಿರುಮನೆ ವಸ್ತುಲ ಕಡದು ಹೊರಕ್ಕ ಮುಖ ಹಾಕಿ ಒಳಕ್ಕೋಗದು, ಹೊರಕ್ಕೆ ಮೊಖ ಹಾಕಿ ಒಳಕ್ಕೋಗದು ಮಾಡ್ತಿತ್ತು (ಪು. 17). ಸಾಯುತ್ತ ಬದುಕುತ್ತ ಉರಿಯುವ ಈ ದೀಪದ ಸ್ಥಿತಿ, ಆ ಹಟ್ಟಿಯಲ್ಲಿ ಬದುಕುವ ಜೀವಿಗಳ ಸ್ಥಿತಿ ಒಂದೇ ಆಗಿದೆ.

ಎತ್ತಪ್ಪನ ಮಿಲ್‌ನಿಂದ ಕಡಲೆಕಾಯಿ ಕದ್ದು ತಂದ ಕಾಳಣ್ಣ ಹೆಂಡ್ತಿಗೆ ಬೆಳಕು ಮಾಡಲು ಸೂಚಿಸುತ್ತಾನೆ. 'ಆಗ ಅವಳು ಕಿರುಮನೇಲಿ ಜೀವ ಇಟ್ಟುಕೊಂಡು ಉರಿಯುತ್ತಿದ್ದ ಸೊಳ್ಳಿಂದ ಉರಿ ಮಾಡಿಕೊಂಡು ತಂದು ಉರಿಗೆ ಕಸಕಡ್ಡಿ ತರಗು ತುಂಬಲು ಅಲ್ಲಿ ಹೊಗೆಯೊಡನೆ ಬೆಳುಕೆದ್ದಿತು. ಆ ಬೆಳಕಿಂದ ಹಟ್ಟಿ ಹಟ್ಟಿ ಒಳಗಲ ಜನ ಒಂದೇ ಸಲಕ್ಕೆ ಕಾಣುವಂತಾಯ್ತು. ಜೀವ ಹಿಡಿದು ಉರಿಯುತ್ತಿದ್ದ ಸೊಳ್ಳಿಂದ ಮಾಡಿದ ಉರಿ ಬೆಂಕಿಯಾದಿ 'ಆ ಬೆಂಕಿ ಉರಿ ಭೂಮಿ ತಾಯಿ ನಾಲಗೆಯಂತೆ ಹೊಗೆ ಕಕ್ಕುತ್ತ, ಸೊಳ್ಳೆ ಕ್ರಿಮಿ ಕೀಟಾದಿಗಳ ಉಸಿರು ಕಟ್ಟಿಸುತ್ತಾ ಅಲ್ಲಿಂದ ಎದ್ದು ಹಟ್ಟಿಯ ನಾಕಾ ಮೂಲಕೂ ಚಾಚುತ್ತಿತ್ತು' (ಪು, 24). ಸಣ್ಣ ಉರಿಯೊಂದು ಹೀಗೆ ಏನೆಲ್ಲವನ್ನು ತಿಂದು ಅರಗಿಸಿಕೊಳ್ಳುವ ಬೆಂಕಿಯಾದದ್ದು, ಆ ಮೂಲಕ ಸಾಕವ್ವನ ಹಟ್ಟಿ ಬೆಳಕಾದದ್ದು ಸಾಕವ್ವನ ಕುಟುಂಬದ ಹಸಿವಿನ ಬಡಬಾಗ್ನಿ ಎಷ್ಟೊಂದು ಭೀಕರ ಸ್ವರೂಪದ್ದು ಎಂಬುದನ್ನು ಧ್ವನಿಸುತ್ತದೆ.

ಸಹಬಾಳ್ವೆ :

ಸಾಕವ್ವನ ಕುಟುಂಬ ಪ್ರತಿನಿಧಿಸುವ ಬದುಕು ಸಹಬಾಳ್ವೆಯಿಂದ ನಿಯೋಜಿತವಾಗಿದೆ. ಸಾಕವ್ವನಿಗೆ ತಾನು ಕಳೆದುಕೊಂಡ ಹುಂಜದ ಬಗೆಗೆ ಯಾರೂ ಅಪ್ಪಾಟಿ ಹಚ್ಚಿಕೊಳ್ಳದಿರುವುದು ಅವಳಿಗೆ ಎಲ್ಲಿಲ್ಲದ ಕೋಪ ತರಿಸುತ್ತದೆ. ಮಕ್ಕಳ ಮೇಲೆ ಸೊಸೆಯರ ಮೇಲೆ ಕಿಡಿ ಕಾರುತ್ತಾಳೆ, ಇಲ್ಲೆಲ್ಲ ತನ್ನ ಬದುಕು ಹರಿದು ಹಂಚಿ ಮೂರಾಬಟ್ಟೆಯಾದದ್ದರ ಬಗೆಗೆ ನೋವು, ತಿರಸ್ಕಾರ, ವ್ಯಂಗ್ಯಗಳು ಒಟ್ಟಿಗೆ ಆಕೆಯ ಮಾತುಗಳಲ್ಲಿ ಧ್ವನಿತವಾಗುತ್ತವೆ. ಕಾಳಣ್ಣನಿಗೆ ಕೇಳುವ ಮಾತಿದು : 'ಏನಂದೆ ಕಂದಾ ಹೊತ್ತ ಮೂಡ್ಲಿ ಅಂದ್ಯಾ. ಹೊತ್ಮೂಡಿ ಏಡು ಮಾರು ಬಂದ್ರನೂ ನೀನು ಏಳ್ದಿದ್ದದ್ಕಲ್ವ ನನ್ನ ಹಟ್ಟಿ ಮೂರು ಪಾಲಾದದ್ದು'– (ಪು. 3) ಎನ್ನುತ್ತಾಳೆ. ಸೊಸೆ ಚೆಲುವಮ್ಮನ ಜೊತೆ ವಾಗ್ವಾದಕ್ಕೆ ಇಳಿಯುವುದು ಮಗನನ್ನೂ ಕೈಯಲ್ಲಿಟ್ಟುಕೊಂಡು ಆಟ ಆಡಿಸ್ತಾಳೆ ಎಂಬುದು ಕಾರಣವಾಗಿರಬಹುದು. ಹೆಣ್ಣು ಹೆಣ್ಣಿನ ಮೇಲೆ ಅಧಿಕಾರ ಚಲಾಯಿಸುವ ಪರಿಯನ್ನು ದೇವನೂರರು ಈ ಮೂಲಕ ಸೂಚಿಸುತ್ತಿರಬಹುದು. 'ಸೊಸೆಯ ಜೊತೆಯಲ್ಲಿ ಹೀಗೆ ಕದನದಲ್ಲಿ ತೊಡಗಿರುವಾಗ ಚೆಲುವಮ್ಮಳ ಕೂಸು ಅಜ್ಜಿಯ

ಸುತ್ತ ಆಡುತ್ತಿತ್ತು' (ಪು. 10). ಸೊಸೆಯು ಮೇಲಿನ ಸಿಟ್ಟನ್ನು ಸಾಕವ್ವ ಕೂಸಿನ ಮೇಲೆ ಹಾಕಲಾರಳು. ಏಕೆಂದರೆ ಆಕೆ 'ಸಾಕುವ ಅವ್ವ'. ಎಂತಹ ಜಗಳ ಗುದ್ದಾಟಗಳು ನಡೆದರೂ ಕೂಡಿ ಬದುಕುವ ಬಗೆ ದಲಿತರದ್ದು, ಚೆಲುವಮ್ಮ ಅತ್ತೆಯ ಕೂಡ ಜಗಳವಾಡಿ ಊರಿಗೆ ಹೊರಟು ನಿಂತಾಗ ಕಾಳಣ್ಣ ಬಂದು 'ನೀ ಮೊದ್ಲು ಹೋಗು ಇವ್ಳ' ಎಂಬುದಕ್ಕೆ ಅಳಲು ತೋಡಿಕೊಳ್ಳುತ್ತ ಒಳಗೆ ಬಂದ ಚೆಲುವಮ್ಮ ಕಾಳಣ್ಣನ ಹೆಂಡ್ತಿಯ ಜೊತೆಗೆ ಸೌದೆಗೆ ಹೊರಡುತ್ತಾಳೆ. ಭಿನ್ನಾಭಿಪ್ರಾಯ ಜಗಳ ಎಲ್ಲವೂ ಆ ಕ್ಷಣಕ್ಕೆ. ಆನಂತರ ಅವೆಲ್ಲವನ್ನೂ ಮರೆತು ಕೂಡಿ ಬಾಳುವ ಕಡೆಗೆ ಪಾತ್ರಗಳು ಮುಖ ಮಾಡುವುದು ದಲಿತರು ಪಾರಂಪರಿಕವಾಗಿ ಉಳಿಸಿಕೊಂಡು ಬಂದ ಸಹಬಾಳ್ವೆ ಬದುಕನ್ನೂ ಪ್ರತಿನಿಧಿಸುತ್ತದೆ.

ಹೊರಗಿನಿಂದ ಏನೇ ತಿಂಡಿ ತಿನಿಸು ತರಲಿ, ಮನೆಯಲ್ಲಿ ವಿಶೇಷವಾದದ್ದನ್ನು ಮಾಡಿಕೊಳ್ಳಲಿ ಆ ಕುಟುಂಬದ ಸದಸ್ಯರು ಕೂಡಿ ಉಣ್ಣುವ ತಿನ್ನುವ ಪರಿಪಾಠ ಸಾಂಪ್ರದಾಯಕವಾದದ್ದು. ಕಾಳಣ್ಣನ ಹೆಂಡ್ತಿ ಸಾಕವ್ವನಿಗೆ ತಂದು ಕೊಟ್ಟ ನಾಲ್ಕು ಹಿಡಿ ಪುರಿ ಅವಳೊಬ್ಬಳೇ ತಿನ್ನದೆ ಗೌರಿಗೆ. ಆಕೆಯ ರೋಗಗ್ರಸ್ತ ಮಗನಿಗೆ ಹಂಚುವುದು ಸಾಕವ್ವ ಸಾಕುವ ಅವ್ವ ಆಗಿರುವುದನ್ನೂ ಧ್ವನಿಸುತ್ತದೆ.

ದುಡಿಮೆ :

ಸಾಕವ್ವನ ಹಟ್ಟಿಯ ಹೆಣ್ಣುಗಂಡುಗಳೆಲ್ಲ ಮನೆಯಂಗಳದಲ್ಲಿ ಗುಡ್ಡೆ ಹಾಕಿಕೊಂಡಿರುವುದರಿಂದ 'ದುಡಿಮೆ' ಎಂಬ ಕ್ರಿಯೆಯೇ ಇಲ್ಲಿ ಇಲ್ಲವಾಗುತ್ತದೆ[1] ಎಂದು ಅಭಿಪ್ರಾಯ ಪಡುವ ಮನಜ ಅವರು ಕೃತಿಯನ್ನು ಇಡೀಯಾಗಿ ಗಮನಿಸುವುದಿಲ್ಲ. ಕಾಳಣ್ಣ 'ಅಲಾ ಕಣ್ರಮ್ಮ ಹಟ್ಟೀಯಮ್ಮಕ್ಳೆಲ್ಲ ಎತ್ತಾಗು ಹೋಗ್ದೇನೆ ಗುಡ್ಡಾಕ್ಕಂಡಿದ್ದೀರಲ್ಲ...ನಿಮ್ಮ ಉಣ್ಣಾಕ ಬಾನಿಂದ ಇಳ್ದು ಬಂದದಾ'...ಅಂದುದಕ್ಕೆ ಗೌರಮ್ಮ 'ಕೆಲ್ಸಕ ಕರದ್ರಲ್ವಣ್ಣ ವೋಗುದು ನಾವೂನು ಮೇಲ್ಬಿದ್ದು ಮೇಗಲ ಕೇರಿನೆಲ್ಲ ತಿಂಕಂಡು ಬಂದ್ವು. ನೀಯ್ಯಾರ ಅನ್ನೋರಿಲ್ಲ (ಪು.-13)- ಎಂಬ ಮಾತುಗಳೂ, ಮುಂದೆ ಪುಟಗೌರಿ ನವ್ವಲು ಬರೆಯುತ್ತ ಕುಳಿತಿರೋದ ಕಂಡ ಸಾಕವ್ವ 'ತಗಾ ಆದ್ಮ್ಯಾರೋ ಒಬ್ಬಳು ಕುಟ್ಟೋ ಬತ್ತ ಬಿಟ್ಟು ಹುಟ್ಟೋ ಸ್ಯಾಟ ನೋಡ್ಕತಿದ್ಲಂತೆ'—ಅಂದಾಗ ಪುಟಗೌರಿ 'ವ್ಲೂ ಕವೊ ಇಲ್ಲಿ ಬತ್ತ ಕುಟ್ಟಾಕ ಗುಡ್ಡಾಗಿ ಮಡ್ಗದ ('ಪು 17) ಎನ್ನುವ ಮಾತುಗಳು ಸಾಕವ್ವನ ಮಕ್ಕಳು ಹುಟ್ಟಾ ಸೋಮಾರಿಗಳಲ್ಲ, ಕಳ್ಳರೂ ಅಲ್ಲ. ಪರಿಸ್ಥಿತಿ ಸಂದರ್ಭಗಳು ಹಾಗೆ ಸೋಮಾರಿಗಳನ್ನಾಗಿಸಿವೆ ಎಂಬುದಕ್ಕೆ ಸಾಕ್ಷಿ

1. ಮನಜ ಸಾಮಾಜಿಕ ಸಂದರ್ಭ ಮತ್ತು ಬಂಡಾಯ ಸಾಹಿತ್ಯ ವಿಮರ್ಶೆ:ಕರ್ನಾಟಕ ಸಾಹಿತ್ಯ ಅಕಾಡೆಮಿ 1987. ಪು. 101

ಆಗಿದೆ, ಮನೆ ತುಂಬ ದುಡಿಯುವ ಮಂದಿಯಿದ್ದರೂ ಅವರಿಗೆ ಕೆಲಸವಿಲ್ಲ, ದುಡಿಯದೆ ಹೊಟ್ಟೆ ತುಂಬುವ ಪವಾಡವೂ ಇಲ್ಲಿ ನಡೆಯುವುದಿಲ್ಲ. ಹೊಟ್ಟೆಗೆ ಹಿಟ್ಟು ಕಾಣದ ಈ ಪರಿಸ್ಥಿತಿ ಎತ್ತಪ್ಪನ ಮಿಲ್ಲಿನ ಕಡಲೆಕಾಯಿ ಕದಿಯಲು ಪ್ರೇರೇಪಿಸುತ್ತದೆ.* ಸಾಕವ್ವನ ಮನೆ ಜಪ್ತಿ ನಡೆದಾಗ ಬಡತನ ಕಿತ್ತು ತಿನ್ನುತ್ತಿದ್ದರೂ ಮುಂದಿನ ದಿನಗಳಿಗಾಗಿ ಬೂದಿ ಬೆರಸಿಟ್ಟಿದ್ದ ಬಿತ್ತನೆ ಜೋಳ ಜೋಪಾನವಾಗಿರಿಸಿರುವುದು ಕಂಡು ಬರುತ್ತದೆ. ಹೊಟ್ಟೆಗೆ ಬಟ್ಟೆ ಕಟ್ಟಿಕೊಂಡು ಬಿತ್ತನೆ ಜೋಳ ಕಾಪಾಡುವುದು 'ದುಡಿಮೆ' ಯನ್ನೂ ನಂಬಿ ಬದುಕುವ ದುಡಿಮೆಗಾರರಲ್ಲಿ ಮಾತ್ರ ಕಾಣಬಹುದಾದ ನಡಾವಳಿಯಾಗಿದೆ. ಸೋಮಾರಿತನ ಎನ್ನುವುದು ಸಾಕವ್ವನ ಮಕ್ಕಳ ಸ್ವಭಾವದಲ್ಲಿಲ್ಲ, ದೋಷವು ಅವರನ್ನು ಆ ರೀತಿ ಆಗಲು ಒತ್ತಾಯಿಸುವ ವ್ಯವಸ್ಥೆಯಲ್ಲಿದೆ.

ಸಹಪಂಕ್ತಿ ಭೋಜನ :

ಎತ್ತಪ್ಪನ ಮಿಲ್ಲಿನಿಂದ ತಂದ ಕಡಲೆಕಾಯಿಯನ್ನು ಅದು ಕಳ್ಳಮಾಲಾದರೂ ಹಂಚಿ ತಿನ್ನುವ ಪ್ರಸಂಗ ಕೆಳಜಾತಿಗಳು ಇದೂವರೆಗೂ ಉಳಿಸಿಕೊಂಡು ಬಂದಿರುವ ಸಹಭೋಜನ ಪಂಕ್ತಿಯನ್ನು ನೆನಪಿಗೆ ತರುತ್ತದೆ. ಪಕ್ಕದ ಮನೆಯವಳು ಇದೇ ಪರಿಸ್ಥಿತಿಯಲ್ಲಿ ಹೊಟ್ಟೆಗೆ ಏನನ್ನಾದರೂ ಕೇಳಲು ಬಂದಾಗ ಅವಳಿಗೂ ಅದರಲ್ಲೇ ತುಸು ಹಂಚುವುದು ಇಲ್ಲಿ ಗಮನಾರ್ಹ. ಹೆಚ್ಚು ಕಡಲೆಕಾಯಿ ಕೊಡಲು ಹೋದ ಸೊಸೆಯನ್ನು ತಡೆದು ಸಾಕವ್ವ ಅದರಲ್ಲಿ ಸ್ವಲ್ಪ ಕಡಿಮೆ ಮಾಡಿ ಕಳುಹಿಸುವುದೂ ಇಲ್ಲಿ ಚಿತ್ರಣಗೊಂಡಿದೆ. ದ್ಯಾವನೂರರು ಪಾತ್ರಗಳನ್ನು ಸರಳೀಕರಿಸದೆ ಉದಾರತ್ವದ ಜೊತೆಯಲ್ಲಿಯೇ ಸಣ್ಣತನವಿರುವ ದ್ವಂಧ್ವವನ್ನು ಹೇಳುವುದರಿಂದ ಪಾತ್ರಗಳು ಜೀವಂತವಾಗಿ ಓಡಾಡಲು ಸಾಧ್ಯವಾಗಿದೆ.

ಸಾಕವ್ವನ ಕುಟುಂಬ ಕಡಲೆಕಾಯಿ ಬೀಜ ತಿನ್ನುತ್ತ ಸಿಪ್ಪೆಯನ್ನೂ ಬೆಂಕಿಗೆ ಎಸೆಯುವ ಈ ಸಂದರ್ಭವನ್ನು ಅನಂತಮೂರ್ತಿಯವರು ಯಜ್ಞಕ್ರಿಯೆಗೆ ಹೋಲಿ

---

* ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
....
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ
—ದೇವರ ದಾಸಿಮಯ್ಯನ ವಚನಗಳು— (ಸಂ) ಎಲ್. ಬಸವರಾಜ
ತೃತೀಯ ಸಂಸ್ಕರಣ 1978

ಸುತ್ತ 'ಉಣ್ಣುವಂಥ ನಿತ್ಯದ ಒಂದು ಸಾಮಾನ್ಯ ಕ್ರಿಯೆಯು ಇಲ್ಲಿ ಯಜ್ಞಕ್ಕೆ ಸಮಾನವಾದ ರಿಚುಯಲ್. ಹೀಗಾಗಿ ಈ ಹಟ್ಟಿಯಲ್ಲಿ ದೀಪ ಹಚ್ಚುವುದು, ಅದನ್ನು ಹಂಚಿಕೊಳ್ಳುವುದು, ಒಟ್ಟಾಗೆ ಉಣ್ಣುವುದು 'ಸಹನಾವವತು, ಸಹನೌಭುನಕ್ತು ಸಹ ವೀರ್ಯಂ ಕರವಾವಹೈ' ಎಂಬ ಉಪನಿಷತ್ತಿನ ಆದರ್ಶವಾದ, ಮಾನವ ಆದರ್ಶವಾದ ಮಾನವ ಸಾಹಚರ್ಯದ ಕ್ರಿಯೆಗಳೇ' ಎಂದು ಅಭಿಪ್ರಾಯಪಡುತ್ತಾರೆ.[2] ಏನೆಲ್ಲ ಕ್ರಿಯೆಗಳು ವೇದೋಪನಿಷತ್ತುಗಳಿಂದ ರೂಪುಗೊಂಡವು ಎಂದು ತಿಳಿಯುವುದಕ್ಕಿಂತ ಮೂಲತಃ ಸಾಮಾನ್ಯರಲ್ಲಿ ಆಚರಣೆಯಲ್ಲಿದ್ದ ಇಂಥ ಕ್ರಿಯೆಗಳಿಂದ ಉಪನಿಷತ್ತಿನ ಆದರ್ಶಗಳು ರೂಪುಗೊಂಡವು ಎಂದು ತಿಳಿಯುವುದು ಸೂಕ್ತವಾದುದು.

ಇದೇ ಸಂದರ್ಭದಲ್ಲಿ ಸಾಕವ್ವ ಹೇಳುವ ಮಾತುಗಳು ದಲಿತರ ಸಮಷ್ಠಿ ಪ್ರಜ್ಞೆಗೆ ಸಾಕ್ಷಿಯಾಗಿವೆ. ಎತ್ತಪ್ಪ ಸಾಹುಕಾರನ ದನದ ಹಟ್ಟಿಯಲ್ಲಿರುವ ಎಮ್ಮೆಗಳನ್ನು ನೆನಿಸಿಕೊಂಡು 'ಅಂಥ ಒಂದು ಎಮ್ಮೆ ಸತ್ರೀಗಪ್ಪ ನಮ್ಮ ಕೇರಿ ದರಿದ್ರನಾರೂ ಒಂಜಿನ ಹಿಂಗ್ತದ (ಪು, 26) ಎನ್ನುತ್ತಾಳೆ. ಈ ಮಾತುಗಳನ್ನು ಡಾ, ಬಸವರಾಜ ಸಬರದ ಅವರು ಅರ್ಥೈಸೋದು ಹೀಗೆ "ಸಾಕವ್ವನ ಮಾತಿನಲ್ಲಿ ಶತಮಾನಗಳ ಕ್ರೌರ್ಯದ ಹಸಿವಿದೆ, ಎತ್ತಪ್ಪ ಸಾಹುಕಾರರ ಎಮ್ಮೆ ಸತ್ತಾಗ ಮಾತ್ರ ಈ ಜನರ ಒಂದು ದಿನದ ಹಸಿವಾದರೂ ಹಿಂಗುತ್ತದೆ... ಒಬ್ಬರ ಸಾವು ಮತ್ತೊಬ್ಬರ ಬದುಕಾಗುವ ಕ್ರೂರ ವ್ಯವಸ್ಥೆಯಲ್ಲಿರುವ ಅಸಮಾನತೆಯನ್ನು ಕಾದಂಬರಿ ತುಂಬಾ ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಇದು ಕೃತಿಯ ಸಂದರ್ಭವನ್ನು ಸರಿಯಾದಿ ಗ್ರಹಿಸದೇ[3] ಮಾಡಿದ ವಿಕೃತ ವಿಮರ್ಶೆಯಾಗಿದೆ, ಸಾಕವ್ವನಂತಹ ಕುಟುಂಬಗಳಿಗೆ ಅಗತ್ಯವಾಗಿರುವುದು ಎತ್ತಪ್ಪನ ಆಸ್ತಿಗಳಾದ ಕಡಲೆಕಾಯಿ ಮತ್ತು ಎಮ್ಮೆ ಎರಡೂ ಹಸಿವನ್ನೂ ಹಿಂಗಿಸುವ ಆಹಾರ ಸಾಮಗ್ರಿಗಳು. ವಿನಹ ಎತ್ತಪ್ಪನ ಸಾವಲ್ಲ, ಸಾಕವ್ವನ ಮಾತುಗಳು ಆವಳ ಕುಟುಂಬವನ್ನಷ್ಟೇ ಅಲ್ಲ ಇಡೀ ಕೇರಿಯ ಹಸಿವಿನ ದಾರಿದ್ರ್ಯವನ್ನು ಲಕ್ಷಿಸಿವೆ ಎಂಬುದನ್ನು ಗಮನಿಸಬೇಕು. ಇದು ದ್ಯಾವನೂರರ ಸಮಷ್ಠೀ ಪ್ರಜ್ಞೆಗೂ ಸಾಕ್ಷಿಯಾಗಿದೆ.

○

---

2. ಅನಂತಮೂರ್ತಿ ಯು, ಆರ್. ರುಜುವಾತು ಸಂ. 12 ಪುಟ 110-14.
3, ಡಾ. ಬಸವರಾಜ ಸಬರದ, ದಲಿತ ಬದುಕಿನ ಮೂರು ಮಹತ್ವದ ದಾಖಲೆಗಳು– ನಾಲ್ಕು ದಲಿತೀಯ ಕಾದಂಬರಿಗಳು (ಸಂ) ಡಾ, ಅರವಿಂದ ಮಾಲಗತ್ತಿ, 1991 ಪು. 63.

ಕನ್ನಡ ಜಾನಪದಕ್ಕೆ ಸ್ವಾತಂತ್ರ್ಯಪೂರ್ವ ದೇಶೀಯ ವಿದ್ವಾಂಸರ ಕೊಡುಗೆ

ಡಾ. ಪುರುಷೋತ್ತಮ ಬಿಳಿಮಲೆ

'ಕನ್ನಡ ಜಾನಪದಕ್ಕೆ ಸ್ವಾತಂತ್ರ್ಯಪೂರ್ವ ದೇಶೀಯ ವಿದ್ವಾಂಸರ ಕೊಡುಗೆ' ಎಂಬ ವಿಷಯದ ಕುರಿತು ಕನ್ನಡದಲ್ಲಿ ಈಗಾಗಲೇ ಸಾಕಷ್ಟು ಮಾಹಿತಿಗಳು ಪ್ರಕಟವಾಗಿವೆ. 'ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ (1981) ಎಂಬ ಕೃತಿಯಲ್ಲಿ ಡಾ, ನಂ, ತಪಸ್ವೀಕುಮಾರ್ ಅವರು ಈ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ಮಾಡಿದ್ದಾರೆ. ಅವರು ತಮ್ಮ ಕೃತಿಯ ಎರಡನೇ ಮತ್ತು ಮೂರನೇ ಅಧ್ಯಾಯದಲ್ಲಿ ಸ್ವಾತಂತ್ರ್ಯಪೂರ್ವ ದೇಶೀಯ ವಿದ್ವಾಂಸರ ಸಾಧನೆಯನ್ನು ಕಾಲಾನುಕ್ರಮದಲ್ಲಿ ಪರಿಚಯಿಸಿದ್ದಾರೆ. ಈ ಪರಿಚಯ ಭಾಗದಲ್ಲಿ ಸುಮಾರು 26ಕ್ಕೂ ಹೆಚ್ಚು ಜನ ವಿದ್ವಾಂಸರ ಜಾನಪದ ಸಂಗ್ರಹ ಕಾರ್ಯ ಮತ್ತು ವಿಶ್ಲೇಷಣೆಯ ಬಗೆಗೆ ಚರ್ಚಿಸಿ ಕನ್ನಡ ಜಾನಪದದ ಸ್ವಾತಂತ್ರ್ಯಪೂರ್ವ ಕಾಲಘಟ್ಟವನ್ನು ಅರುಣೋದಯ ಕಾಲವೆಂದೂ (1901-1930ರ ವರೆಗೆ), ಪ್ರಥಮ ಸುವರ್ಣ ಸಂಚಯ ಘಟ್ಟ (1931-1950 ರ ವರೆಗೆ) ವೆಂದೂ ಕೀರ್ತಿಸಿದ್ದಾರೆ. ಇವರಿಗೂ ಮುನ್ನ ಸುಶೀಲಾ ಪಟ್ಟಣಶೆಟ್ಟಿ ಎಂಬವರು 'ಕನ್ನಡ ಜಾನಪದ ಸಾಹಿತ್ಯದ ಸಂಕಲನ ಕೃಷಿ' ಎಂಬೊಂದು ಉಪಯುಕ್ತ ಲೇಖನವನ್ನು ಬರೆದು ಪ್ರಕಟಿಸಿದ್ದಾರೆ (1974). ಇತ್ತೀಚಿನ ದಿನಗಳಲ್ಲಿ ಡಾ, ಜೀ. ಶಂ. ಪರಮಶಿವಯ್ಯ (1978) ಡಾ. ಅಂಬಳಿಕೆ ಹಿರಿಯಣ್ಣ (19೦7-89) ಮತ್ತು ಡಾ. ಜವಾಹರಲಾಲ್ ಹಂಡೂ (1989) ಅವರೂ ಈ ಬಗೆಗೆ ಉಪಯುಕ್ತ ಮಾಹಿತಿಗಳನ್ನು ನೀಡುವಂಥ ಲೇಖನಗಳನ್ನು ಬರೆದಿದ್ದಾರೆ. ಹಾಗಾಗಿ ಪ್ರಸ್ತುತ ಪ್ರಬಂಧದಲ್ಲಿ ಆ ಬಗೆಯ ಕೆಲಸವನ್ನು ಮಾಡದೆ ಆ ಕಾಲದಲ್ಲಿ ಕೆಲಸ ಮಾಡಿದ ಕೆಲವು ಮುಖ್ಯ ವಿದ್ವಾಂಸರ ಸಾಧನೆಯ ಸ್ವರೂಪವನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ,

ಸ್ವಾತಂತ್ರ್ಯಪೂರ್ವ ದೇಸೀ ವಿದ್ವಾಂಸರಲ್ಲಿ ಬಹಳ ಪ್ರಮುಖರಾದವರೆಂದರೆ ನಡಿಕೇರಿಯಂಡ ಚಿಣ್ಣಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪ್ರಹ್ಲಾದ ನರೇಗಲ್ಲ, ಬೆಟಗೇರಿ ಕೃಷ್ಣಶರ್ಮ, ಹಲಸಂಗಿ ಚೆನ್ನಮಲ್ಲಪ್ಪ, ಕಾಪಸೆ ರೇವಪ್ಪ, ಪಿ, ಧೂಲಾಸಾಹೇಬ, ಸಿಂಪಿ ಲಿಂಗಣ್ಣ, ಅರ್ಚಕ ಬಿ. ರಂಗಸ್ವಾಮಿ, ವಿಠೋಬ ವೆಂಕಟನಾಯಕ ತೊರ್ಕೆ, ಬಿ. ಎನ್, ರಂಗಸ್ವಾಮಿ, ಎಸ್. ವಿ. ರಂಗಣ್ಣ, ಚೆನ್ನಪ್ಪ ಉತ್ತಂಗಿ, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಎಚ್. ಎಸ್. ಅಚ್ಚಪ್ಪ ಎಲ್. ಗುಂಡಪ್ಪ ಮತ್ತು ದೇವುಡು ನರಸಿಂಹ ಶಾಸ್ತ್ರಿ ಅವರುಗಳು.

ಇವರಲ್ಲಿ ಬಹಳ ಜನ ವಿದ್ವಾಂಸರು ತಮ್ಮ ಜಾನಪದ ಕೆಲಸಗಳ ಬಗೆಗೆ ತಮ್ಮ ಕೃತಿಯ ಮುನ್ನುಡಿಯಲ್ಲೊ. ಸಂಗ್ರಹಿಸಿದ್ದನ್ನು ಪರಿಚಯಿಸುವ ಸಂದರ್ಭದಲ್ಲೋ ಕೆಲವು ಮಾತುಗಳನ್ನು ಹೇಳಿಕೊಂಡಿದ್ದಾರೆ. ಈ ಮಾತುಗಳು ಅವರ ಕೆಲಸದ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಸಹಕರಿಸುತ್ತವೆ, ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ—

1) 1921 ರ ಜುಲೈ ತಿಂಗಳ ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ (ಸಂಪುಟ 6 ಸಂಚಿಕೆ 2) 'ಕನ್ನಡ ಗಾದೆಗಳ ಜೀರ್ಣೋದ್ಧಾರ' ಎಂಬ ಲೇಖನ ಬರೆದ ಶ್ರೀ ಎಚ್. ಕೆ. ಮಲ್ಲಪ್ಪನವರು ಹೇಳುವುದು ಹೀಗೆ– "ಹಿತ್ತಲ ಗಿಡ ಮದ್ದಲ್ಲ" ಎನ್ನುವಂತೆ ನಮ್ಮ ದೇಶದಲ್ಲೇನಿದೆ ? ನಮ್ಮ ಭಾಷೆಯಲ್ಲೇನಿದೆ ? ನಮ್ಮ ನಾಣ್ಣುಡಿಗಳಲ್ಲೇನಿದೆ ? ಇವೆಲ್ಲ ಕಾಕಮ್ಮನ ಕಗ್ಗದ ಕಥೆಗಳೇ ಸರಿಯೆಂದು ಅಲ್ಲಗಳೆದು......ಅನ್ಯರ ನಡೆನುಡಿಗಳನ್ನೇ ಮಿತಿಮೀರಿ ಆಚರಿಸಿ ಈಗ ನಾವು ನಮ್ಮ ಹುಟ್ಟು ಬಣ್ಣವನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬರುತ್ತಾ ಇದ್ದೇವೆ. (ಪು, 134–140). ಈ ಮಾತುಗಳು ಸ್ವದೇಶಾಭಿಮಾನವನ್ನು ಕೆರಳಿಸುವಂತಿರುವುದು ಸ್ಪಷ್ಟ.

2) 1924 ರ ಜನವರಿ ತಿಂಗಳ ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ (ಸಂಪುಟ 8 ಸಂಚಿಕೆ 4) ಹಲಸಂದಿ ಚೆನ್ನಮಲ್ಲಪ್ಪನವರು ಅಂದರೆ ಮಧುರಚೆನ್ನರು ಹೀಗೆ ಘೋಷಿಸಿದ್ದಾರೆ-

"ಹಳ್ಳಿಯ ಸಾಹಿತ್ಯವು ಕನ್ನಡಕ್ಕೆ ಏನೂ ಕಡಿಮೆಯಿಲ್ಲ. ಮೈಸೂರಿನ ಶಾಸನಗಳಂತೆ ಗ್ರಾಮ ಸಾಹಿತ್ಯವು ಕೂಡ ಹಲವು ದೊಡ್ಡ ದೊಡ್ಡ ಪುಸ್ತಕಗಳ ರೂಪದಿಂದ ಮೆರೆಯಬಹುದು. ಅಂತಹ ಕಾಲವು ಇನ್ನೆಂದಿಗೆ ಬರುವುದೋ ಬರಲಿ ಅದರ ಸವಿಸವಿಯನ್ನು ತೋರಿಸಿಕೊಡುವುದೇ ಸದ್ಯದ ಕೆಲಸವಾದುದರಿಂದ ಆ ಕಡೆಗೆ ಹೊರಳುವೆನು," (ಪುಟ 271–278) ಎಂದಿದ್ದಾರೆ. ಹಳ್ಳಿಯ ಸಾಹಿತ್ಯದ ಬಗೆಗೆ ಇಲ್ಲಿ ಪ್ರಶಂಸಾಪರ ಉದಾರವಾದಿ ದೃಷ್ಟಿಕೋನವೊಂದು ಕೆಲಸ ಮಾಡುತ್ತಿರುವುದು ಎದ್ದು ಕಾಣುತ್ತದೆ.

3) 1925 ರ ಜನವರಿ ತಿಂಗಳ ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ (ಸಂಪುಟ 9 ಸಂಚಿಕೆ 4) ಮಾಸ್ತಿ ವೆಂಕಟೇಶ ಐಯ್ಯಂಗಾರ್ ಅವರು ಬರೆದ 'ಕನ್ನಡ ನಾಡಿನ ಲಾವಣಿ ಸಾಂಗತ್ಯಗಳು ಎಂಬ ಲೇಖನದ ಕೊನೆಯಲ್ಲಿ ಈ ಮಾತುಗಳಿವೆ—

"ಇವುಗಳಲ್ಲಿ ಕವಿ ತನ್ನ ಹೃದಯದ ಬಿಂದು ಭಾವನೆಗೆ ರೂಪವನ್ನು ಕೊಡಲು ಯತ್ನ ಮಾಡಿದ್ದಾನೆ. ಆ ಯತ್ನದಲ್ಲಿ ಸಿದ್ಧಿಯನ್ನು ಪಡೆದಿದ್ದಾನೆ. ಇದೇ ಕವಿತೆ. ಈ ರೀತಿಯು ಕವನ ಸಾಮಾನ್ಯರಲ್ಲಿ ಹರಡಿದ ಹಾಗೆಲ್ಲ ಮೇಲಣ ಅಂತಸ್ತುಗಳಲ್ಲಿ ಅತ್ಯುತ್ತಮ ಕಾವ್ಯ ನಿರ್ಮಾಣವಾಗುವ ಸಂದರ್ಭ ಹೆಚ್ಚುವುದು. ಈಗ ಕೆಲವು ವರ್ಷಗಳ ಹಿಂದೆ ನಮ್ಮ ಸೀಮೆಯಲ್ಲಿ ಎಲ್ಲೆಲ್ಲಿಯೂ ಒಬ್ಬೊಬ್ಬರು ಕವಿಯೆಂದು ಹೆಸರನ್ನು ಪಡೆದಿದ್ದಂತೆ ಒಂದು ಹಾಡು, ಒಂದು ಲಾವಣಿ ಒಂದು ಕಗ್ಗವನ್ನೋ ಯಾರಾದರೂ ಬರೆದರೆ ಅವನನ್ನು ಜನ ಕವಿ ಎನ್ನುವರು. ಈಗ ಕವಿ ಎಂದರೆ ಇಂಗ್ಲೀಷ್‌ನಲ್ಲಿ ಮಾತ್ರ ಇರತಕ್ಕ ಒಂದು ರೀತಿಯ ಜನ ಅಥವಾ ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಹಿಂದೆ ಗ್ರಂಥಗಳನ್ನು ಬರೆಯುತ್ತಿದ್ದ ವಿಚಿತ್ರ ವ್ಯಕ್ತಿಗಳು ಎಂದು ಭಾವನೆಯುಂಟಾಗಿದೆ. ನಮ್ಮ ಜನರಲ್ಲಿ ಕಾವ್ಯ ಪರಿಚಯ ಹಿಂದಿನಂತೆ ಮತ್ತೆ ಒಂದಾಗುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ" (ಪು, 233-254). ಇಲ್ಲಿ ಮಾಸ್ತಿಯವರು ಲಾವಣಿಗಳನ್ನು ಸಾಹಿತ್ಯಿಕ ದೃಷ್ಟಿಕೋನದಿಂದ ನೋಡಿದ್ದಾರೆ ಮತ್ತು ಕವಿ ಮತ್ತು ಕವಿತ್ವವನ್ನು ಎಚ್ಚರದಿಂದ ಪರಿಶೀಲಿಸಿರುವುದು ಸ್ಪಷ್ಟ.

4) 1935 ರಲ್ಲಿ ಹೊರಬಂದ ಕರ್ನಾಟಕ ಸಂಸ್ಕೃತಿ ಕೃತಿಯಲ್ಲಿ ದೇವುಡು ನರಸಿಂಹ ಶಾಸ್ತ್ರಿಗಳು ಹೀಗೆ ಹೇಳಿದ್ದಾರೆ–

"ನಾವು ಕರ್ನಾಟಕ ಸಂಸ್ಕೃತಿಯು ವೈದಿಕ ಸಂಸ್ಕೃತಿಯ ರೂಪಾಂತರ ಅಥವಾ ಪ್ರತಿಬಿಂಬವೆನ್ನುತ್ತೇವೆ. ಸಂಗೀತದಲ್ಲಿ ಮಾರ್ಗ ದೇಶಿ ಎಂದು ಎರಡು ಸಂಪ್ರದಾಯಗಳುಂಟು, ಅದರಲ್ಲಿ ಮಾರ್ಗವು ಆದರ್ಶವಾಗಿದ್ದು ಸರ್ವಸಂಪ್ರದಾಯ ಮಾತೃಕೆಯಾಗಿರುವುದು; ದೇಶಿಯು ಆಯಾಯ ದೇಶಗಳ ಪರಿಸ್ಥಿತಿಗಳಿಗೆ ಅನುಗುಣವಾಗಿ ಹೊಂದಿಕೊಂಡಿರುವ ಮಾರ್ಗ. ಈ ದೃಷ್ಟಿಯಿಂದ ವೈದಿಕ ಸಂಸ್ಕೃತಿಯು 'ಮಾರ್ಗ', ಕರ್ನಾಟಕ ಸಂಸ್ಕೃತಿಯು 'ದೇಶಿ' ಎನ್ನಬಹುದು. ಹೇಗಾದರೂ ಎರಡಕ್ಕೂ ಇರುವ ಆತ್ಮೀಯವಾದ ನಿಕಟ ಸಂಬಂಧವನ್ನು ಮಾತ್ರ ಗ್ರಹಿಸದಿರುವುದು ಸಾಧ್ಯವಿಲ್ಲ,"

"ಅಂತು ಈಗಿರುವಂತೆ ಈ ಸಂಸ್ಕೃತಿಯು ಮೇಲಿನಿಂದ ಕೆಳಗಿನವರೆಗೆ ಇರುವ ಎಲ್ಲರನ್ನು ಒಂದೇ ಕಂಬಚ್ಚಿಗೆ ಹಾಕಿ ಒಂದೇ ಗುರಿಗೆ ಎಳೆಯುತ್ತದೆ. ಈ ಸಂಸ್ಕೃತಿಗೆ ಸಿಕ್ಕಿರುವ ಎಲ್ಲರೂ ಒಂದೇ ಅಚ್ಚಿನಲ್ಲಿ ಬಿದ್ದು ಒಂದೇ ಜಾತಿಯ ತಂತಿಯಾಗುವುದಕ್ಕೆ ಸಿದ್ಧವಾಗುತ್ತಿರುವ ಒಂದೇ ಲೋಹದ ತುಂಡುಗಳು" (ಪು. 27). ದೇವುಡು ಅವರ ತರ್ಕವು ಭಾರತೀಯ ಸಂಸ್ಕೃತಿಗೆ ಒಂದು ಬಗೆಯ ಏಕರೂಪವನ್ನು ಕೊಡುವುದಕ್ಕೆ ಬದ್ಧವಾಗಿರುವುದನ್ನು ಗಮನಿಸಬಹುದು.

ತಕ್ಕಮಟ್ಟಿಗೆ ಪ್ರಾತಿನಿಧಿಕ ಎನ್ನಬಹುದಾದ ಮೇಲಿನ ನಾಲ್ಕು ಜನ ವಿದ್ವಾಂಸರ ಹೇಳಿಕೆಗಳಿಂದ ಈ ಕೆಳಗಿನ ಮೂರು ಅಂಶಗಳು ಪ್ರತೀತವಾಗುತ್ತವೆ. ಅವುಗಳೆಂದರೆ—

1) ಈ ಬರಹಗಳಲ್ಲಿ ದೇಸೀ ಸಂಸ್ಕೃತಿಯ ಬಗೆಗೆ ಭಾವುಕವಾದ ಒಲವು ಕಂಡುಬರುತ್ತದೆ. ಈ ಒಲವು ಪ್ರಶಂಸಾಪರವಾಗಿದ್ದು ಉದಾರವಾದೀ ನಿಲುವನ್ನು ಹೊಂದಿದೆ. ಜಾನಪದವು ಇಲ್ಲಿ ದೇಸೀ ಸಂಸ್ಕೃತಿಯ ಅತ್ಯುತ್ತಮ ಮಾದರಿ ಎಂಬಂತೆ ಗ್ರಹೀತವಾಗಿದೆ. ವಾಸ್ತವವಾಗಿ ಈ ಬಗೆಯ ಕೆಲಸಗಳು ಆ ಕಾಲದಲ್ಲಿ ನಡೆಯುತ್ತಿದ್ದ ವಸಾಹತೀಕರಣ ಮೂಲದ ಪಾಶ್ಚಾತ್ತ್ಯೀಕರಣಕ್ಕೆ ಒಂದು ಬಗೆಯ ಪ್ರತಿಕ್ರಿಯೆಯೂ ಹೌದು, ಪ್ರತಿಭಟನೆಯೂ ಹೌದು,

2) ವಿದ್ವಾಂಸರ ದೃಷ್ಟಿಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಕಂಡುಬರುವ ವೈದಿಕ ಸಂಸ್ಕೃತಿಯ ಸ್ವರೂಪಕ್ಕು ಪ್ರಾದೇಶಿಕವಾಗಿ ಕಂಡು ಬರುವ ಜನಪದ ಸಂಸ್ಕೃತಿಗೂ ಮಧ್ಯೆ ಯಾವುದೇ ಸಂಘರ್ಷ ಇಲ್ಲ. ಅಥವಾ ಇವರ ದೃಷ್ಟಿಯಿಂದ ಸಂಘರ್ಷ ಇರಕೂಡದು. ದೇವುಡು ಅವರ ಮಾತಲ್ಲಾದರೆ ಇವೆಲ್ಲವೂ "ಒಂದೇ ಅಚ್ಚಿನಲ್ಲಿ ಬಿದ್ದು ಒಂದೇ ಜಾತಿಯ ತಂತಿಯಾಗುವುದಕ್ಕೆ ಸಿದ್ಧವಾಗುತ್ತಿರುವ ಒಂದೇ ಲೋಹದ ತುಂಡುಗಳು". ಸಂಸ್ಕೃತಿಯ ಸ್ವರೂಪವನ್ನು ಸಂಘರ್ಷಾತೀತಗೊಳಿಸುವ ಪ್ರವೃತ್ತಿಯಿದು.

3) ಇವರಲ್ಲಿ ಬಹಳ ಜನರಿಗೆ ಜಾನಪದ ಎಂದರೆ 'ಜನಪದ ಸಾಹಿತ್ಯ' ಜನಪದ ಸಾಹಿತ್ಯ ಎಂದರೆ ಹಾಡುಗಳು. ಮೂಲತಃ ಭಾವನಾತ್ಮಕವಾದ ಈ ನಿಲುವಿನಲ್ಲಿ ಕವಿತ್ವಕ್ಕೆ ಮನ್ನಣೆ ಸಂದಾಯವಾಗುತ್ತದೆ, ಕವಿಗಳ ಬಗೆಗಿನ ಈ ನಿಲುವು ಲಲಿತ ಸಾಹಿತ್ಯದಿಂದ ನಿಷ್ಪನ್ನವಾಗಿದೆ.

ಸ್ವಾತಂತ್ರ್ಯಪೂರ್ವ ಜಾನಪದ ವಿದ್ವಾಂಸರ ಕೆಲವು ಕೃತಿಗಳಿಂದ ಮೇಲಿನ ಮೂರು ಅಂಶಗಳನ್ನು ಸಮರ್ಥಿಸಲು ಸಾಧ್ಯವಿದೆ,

ಮೊದಲನೆಯದಾಗಿ ದೇಸೀ ಸಂಸ್ಕೃತಿಯ ಬಗೆಗೆ ಗಾಢವಾದ ಒಲವನ್ನು ಪ್ರಕಟಪಡಿಸುವ ಬಹುಮುಖ್ಯ ಕೃತಿ ಎಂದರೆ ನಡಿಕೇರಿಯಂಡ ಚಿಣ್ಣಪ್ಪನವರ 'ಪಟ್ಟೋಲೆ ಪಳಮೆ'. ಹಾಗೆ ನೋಡಿದರೆ ದೇಸೀ ಸಂಸ್ಕೃತಿಯ ಬಗೆಗೆ ಗಾಢವಾದ ಒಲವನ್ನು ವ್ಯಕ್ತಪಡಿಸುವುದರೊಂದಿಗೇ ಕನ್ನಡ ಜಾನಪದ ಅಧ್ಯಯನ ಆರಂಭವಾಯಿತು ಎನ್ನಬಹುದು. ಭೌಗೋಳಿಕವಾಗಿ ಕೊಡಗಿಗೆ, ಸಾಂಸ್ಕೃತಿಕವಾಗಿ ಕೊಡ

ವರೆಗೆ ತನ್ನ ಅಧ್ಯಯನವನ್ನು ಮೀಸಲಿರಿಸಿಕೊಂಡ ಚಿಣ್ಣಪ್ಪನವರು ತಮ್ಮ ಕೃತಿಯ ಆರು ಅಧ್ಯಾಯಗಳಲ್ಲಿ ಕೊಡುವ ಜಾನಪದವನ್ನು ಪರಿಚಯಿಸಿದ್ದಾರೆ. ಕೊಡಗು ವಿವರಣೆ ಎಂಬ ಮೊದಲ ಅಧ್ಯಾಯದಲ್ಲಿ ಕೊಡಗಿನ ಭೌಗೋಳಿಕ ಹಾಗೂ ಐತಿಹಾಸಿಕ ವಿವರಗಳಿವೆ. ಎರಡನೆಯ ಅಧ್ಯಾಯದಲ್ಲಿ ಕೊಡವರ ಜೀವನದ ಬೇರೆ ಬೇರೆ ಘಟ್ಟಗಳನ್ನು ಪರಿಚಯಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ಕೊಡವರ ಹಬ್ಬಗಳನ್ನು, ನಾಲ್ಕು ಮತ್ತು ಐದನೆಯ ಅಧ್ಯಾಯದಲ್ಲಿ ಕೊಡವರ ಧಾರ್ಮಿಕ ಜೀವನವನ್ನು ಕೊನೆಯ ಅಧ್ಯಾಯದಲ್ಲಿ ಕೊಡವರ ಮೌಖಿಕ ಸಾಹಿತ್ಯವನ್ನು ಪರಿಚಯಿಸಲಾಗಿದೆ. ಹೀಗೆ ಪರಿಚಯಿಸುವಾಗ 'ಇಂಥ ಕೆಲಸವನ್ನು ತಾನು ಮೊದಲ ಬಾರಿಗೆ ಮಾಡುತ್ತಿರುವೆನಾದ್ದರಿಂದ ಬಹಳ ಎಚ್ಚರ ಅಗತ್ಯ' ಎಂಬ ಪ್ರಜ್ಞೆ ಅವರನ್ನು ಆವರಿಸಿಕೊಂಡಿತ್ತು. ನಿರಾಕರಣೆಗೆ 'ಒಳಗಾದ' ಅಂದರೆ ಇನ್ನೂ ಅಕ್ಷರ ಮಾಧ್ಯಮದಲ್ಲಿ ಕಾಣಿಸಿಕೊಂಡಿರದ ಜನವರ್ಗದ ಬಗ್ಗೆ ಬರೆಯುವ ಇಂಥ ಪ್ರವೃತ್ತಿಯು ಪಂಜೆ ಮಂಗೇಶರಾಯರ 'ಕೋಟಿ ಚೆನ ಯ'ದಲ್ಲಿಯೂ ಕಾಣಿಸಿಕೊಂಡಿದೆ. 'ಕನ್ನಡ ಗಾದೆಗಳ ಜೀರ್ಣೋದ್ಧಾರ' ಎಂಬ ಲೇಖನವನ್ನು 1921 ರಷ್ಟು ಹಿಂದೆ ಬರೆದ ಎಚ್. ಕೆ. ಮಲ್ಲಪ್ಪನವರಲ್ಲಿ, 'ಹಳ್ಳಿಯ ಹಾಡುಗಳು' ಎಂಬ ಲೇಖನ ಬರೆದ ಹಲಸಂಗಿ ಚನ್ನಮಲ್ಲಪ್ಪನವರಲ್ಲಿ (1929), 1930ರಲ್ಲಿ 'ಹಳ್ಳಿಯ ಹಾಡುಗಳು' ಎಂಬ ಲೇಖನ ಬರೆದ ಬೆಟಗೇರಿ ಕೃಷ್ಣಶರ್ಮ ಅವರಲ್ಲಿ, ಹುಟ್ಟಿದ 'ಹಳ್ಳಿ-ಹಳ್ಳಿಯ ಹಾಡು' (1933) ಬರೆದ ಅರ್ಚಕ ಬಿ. ರಂಗಸ್ವಾಮಿ ಅವರಲ್ಲಿ, 'ಕರ್ನಾಟಕ ಜನಪದ ಸಾಹಿತ್ಯ (1937) ಲೇಖನ ಬರೆದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಲ್ಲಿ, 1944 ರಲ್ಲಿ 'ಕನ್ನಡ ಗಾದೆಗಳು' ಪ್ರಕಟಿಸಿದ ಎಚ್. ಎಸ್. ಅಚ್ಚಪ್ಪ ಅವರಲ್ಲಿಯೂ ಕಾಣಿಸಿಕೊಂಡಿರುವುದು ಇದೇ ಬಗೆಯ ಪ್ರಶಂಸಾಪರ ದೃಷ್ಟಿಕೋನವೇ ಆಗಿದೆ. ಮಾಸ್ತಿಯವರು ಒಂದೆಡೆ ತ್ರಿಪದಿಗಳ ಬಗ್ಗೆ ಬರೆಯುವುದು ಹೀಗೆ "ಇದು ಹರಿಜನರಲ್ಲಿ ಸಿಕ್ಕಿದ ಪದ್ಯ. ಯಾವ ತಪೋವನದಲ್ಲಾಗಲೀ, ಅರಮನೆಯಲ್ಲಾಗಲೀ, ಇದಕ್ಕೆ ಮೀರಿದ ಸಂಸ್ಕೃತಿ ದೊರೆಯಲಾರದು...ಅಸಂಸ್ಕೃತರೆನ್ನಬಹುದಾದ ಜನರಲ್ಲಿ ಕಾಣುವ ಈ ಸಂಸ್ಕೃತಿಯ ಮೆರುಗನ್ನು ನೋಡಿ ಯಾರಾದರೂ ಆಶ್ಚರ್ಯಪಡಬೇಕು" (ಪ್ರಬುದ್ಧ ಕರ್ನಾಟಕ, ಸಂಪುಟ 18, ಸಂಚಿಕೆ 3, ಪುಟ 5, 1937)

ದೇಸೀ ಸಂಸ್ಕೃತಿಯ ಬಗೆಗಣ ಈ ಪ್ರಶಂಸಾಪರ ಉದಾರವಾದಿ ಧೋರಣೆಗಳು, ಪರೋಕ್ಷವಾಗಿ ಕರ್ನಾಟಕ ಸಂಸ್ಕೃತಿಯು ಆ ಕಾಲದಲ್ಲಿ ಪಡೆಯುತ್ತಿದ್ದ ಅವಸ್ಥಾಂತರವನ್ನೇ ಸಂಕೇತಿಸುತ್ತದೆ. ಮೂಲತಃ ಈ ಅವಸ್ಥಾಂತರ ಪ್ರಕ್ರಿಯೆಯು ಅಖಿಲ ಭಾರತದ ಧಾಟಿಯಲ್ಲಿಯೇ ನಡೆದಿರುವುದು ಈಗಾಗಲೇ ವಿಶ್ಲೇಷಣೆಗೆ ಒಳಗಾದ

ಅಂಶವಾಗಿದೆ.[1] ಇಂಗ್ಲಿಷ್ ಶಿಕ್ಷಣ ಕ್ರಮದಲ್ಲಿ ತರಬೇತಾದ ನಮ್ಮ ಉದೀಯಮಾನ ಮಧ್ಯಮ ವರ್ಗದ ಬುದ್ಧಿಜೀವಿಗಳು ರಾಷ್ಟ್ರೀಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಸಂದರ್ಭದಲ್ಲಿ ತಮ್ಮ ಜೀವನ ಕ್ರಮವನ್ನು ಹೊಸತಾಗಿ ಸಮರ್ಥಿಸಿಕೊಂಡ ವಿಧಾನವಿದು. ಜಾನಪದ ವಿದ್ವಾಂಸರ ಆತ್ಮ ಸಮರ್ಥನೆಯ ಧಾಟಿಯಲ್ಲಿ ಇದು ಸ್ಪಷ್ಟ. ಕರ್ನಾಟಕದಲ್ಲಿ ಇದು ಕೊಡಗಿನಲ್ಲಿಯೇ ಮೊದಲು ಕಾಣಿಸಿಕೊಂಡದ್ದು ಆಕಸ್ಮಿಕವೇನೂ ಅಲ್ಲ. ಬದಲು ಚಾರಿತ್ರಿಕವಾಗಿ ಅದು ಸಹಜವೇ ಆಗಿತ್ತು. ಏಕೆಂದರೆ ಟಿಪ್ಪುವಿನ ಪತನಾನಂತರ (1799) ಕೊಡಗು ವಸಾಹತೀಕರಣ ಪ್ರಕ್ರಿಯೆಗೆ ಒಳಗಾಗುತ್ತ ಬಂದು 1834 ರ ಹೊತ್ತಿಗೆ, ಚಿಕ್ಕ ವೀರರಾಜೇಂದ್ರನ ಪತನದೊಂದಿಗೆ ತೀವ್ರ ಸ್ಥಿತಿಗೆ ಅದು ಮುಟ್ಟಿತು. ಕೊಡವರೂ ಪಾಶ್ಚಾತ್ಯೀಕರಣಕ್ಕೆ ಸುಲಭವಾಗಿ ತಮ್ಮನ್ನು ತೆರೆದುಕೊಂಡರು. ಇಂಥ ಸಂದರ್ಭವೊಂದರಲ್ಲಿ ಚಿಣ್ಣಪ್ಪನವರಲ್ಲಿ ದೇಸೀಯ ಸಂಸ್ಕೃತಿಯ ಬಗೆಗೆ ಒಂದು ಬಗೆಯ ಆತಂಕಪೂರಿತ ಕಳಕಳಿ ಕಂಡು ಬಂದರೆ ಆಶ್ಚರ್ಯವೇನಿಲ್ಲ, ಕರಾವಳಿಯಲ್ಲಿ ಮುಳಿಯ ತಿಮ್ಮಪ್ಪಯ್ಯನವರು ಯಕ್ಷಗಾನದ ಬಗ್ಗೆ ಬರೆದಾಗಲೂ ಇಂಥದ್ದೇ ನಿಲುವು ಹೊಂದಿದ್ದರು. ಹಾಗೆ ನೋಡಿದರೆ ಆ ಕಾಲದ ಉದೀಯ ಮಾನ ಮಧ್ಯಮ ವರ್ಗದ ಚಿಂತಕರೆಲ್ಲರೂ ತಮ್ಮ ವರ್ತಮಾನಕ್ಕೆ ಅರ್ಥ ತಂದುಕೊಂಡದ್ದು ಹೀಗೆಯೇ ಆಗಿದೆ. ನಾನು ಈಗಾಗಲೇ ಸ್ಪಷ್ಟಪಡಿಸಿರುವಂತೆ ಈ ಬಗೆಯ ಕೆಲಸಗಳು ವಸಾಹತೀಕರಣ ಪ್ರಕ್ರಿಯೆಗೆ ಒಂದು ಬಗೆಯ ಪ್ರತಿಭಟನೆಯೂ ಹೌದು.

ಈ ನೆಲೆಯಿಂದ ಜನಪದದ ಕೆಲಸಗಳಿಗೆ ಇಳಿದಾಗ 'ದೇಸೀ ಸಂಸ್ಕೃತಿ' ಎಂಬ ಸ್ಥೂಲ ಕಲ್ಪನೆಯ ಒಳಗಿನ ವೈರುದ್ಧ್ಯಗಳೆಲ್ಲ ಗೌಣವಾಗುತ್ತವೆ. ನೈಜ ಜೀವನದ ಸಂಘರ್ಷಗಳೆಲ್ಲ ಭಾಷಿಕ ಲಯದಲ್ಲಿ ಸಂಘರ್ಷಾತೀತಗೊಂಡು, ಸಮನ್ವಯವನ್ನು ಸಾಧಿಸುವ ಕಡೆಗೆ ಚಲಿಸುತ್ತವೆ, ಈ ಸಮನ್ವಯದ ತುರಿಯಾವಸ್ಥೆ ಎಂದರೆ ಭಾರತೀಯ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಎರಡು ತುದಿಗಳನ್ನು ಒಂದೇ ನೆಲೆಯಲ್ಲಿ ನಿಲ್ಲಿಸಿಬಿಡುವುದು. ಮಡಿ ಮತ್ತು ಮೈಲಿಗೆಯ ನಿರಂತರತೆಯನ್ನು (Dumont–1970) ಅಲ್ಲಗಳೆದು ಭಾವುಕ ಸಮನ್ವಯತೆಯನ್ನು ಸಾಧಿಸಿಕೊಂಡು, ಕ್ರೈಸ್ತ ಮಿಶನರಿಗಳಿಗೆ ಉತ್ತರ ಹೇಳಲು ಹೀಗೆ ಮಾಡಲಾಗುತ್ತದೆ. "ಕ್ರೈಸ್ತಮತವೇ ಮತ ಎಂಬ ಭಾವನೆಯಲ್ಲಿ ಹುಟ್ಟಿ ಬೆಳೆದು ಅದಲ್ಲದೆ ಮಿಕ್ಕುವೆಲ್ಲವೂ ಕೀಳೆಂದು ಬಾಯ್ಬಿಟ್ಟು ಹೇಳುವವರ ಅಳತೆಗೋಲಿನಿಂದ ಕ್ರೈಸ್ತರಲ್ಲದ ನಾವೇಕೆ ಅಳೆದುಕೊಳ್ಳಬೇಕು" ಎಂದು ಪ್ರಶ್ನಿಸುವ ದೇವುಡು (1935:20) ಅವರು ಅದೇ ಉಸಿರಿನಲ್ಲಿ ಹೀಗೆ ಹೇಳುತ್ತಾರೆ.: ಸಮಾಜದ ಪುರೋಭಾಗದಲ್ಲಿದ್ದ ಬ್ರಾಹ್ಮಣನಿಂದ ಹಿಡಿದು ಕಾಡನ್ನು ಬಿಟ್ಟು ಊರಿಗೇ ಬಂದಿರುವ ಕಾಡುಕುರುಬನವರೆಗೆ ಇರುವ ಕರ್ನಾಟಕದ ನಾನಾ ಕುಲಗಳ ಆಚಾರ ವ್ಯವಹಾರ,

ಆಟಪಾಠ, ರೀತಿ ನೀತಿ, ನಡೆ ನುಡಿ, ಉಡುಗೆ ತೊಡುಗೆ-ಇವುಗಳನ್ನು ಗಮನಿಸಿ ಕಣ್ಣಿಟ್ಟು ನೋಡಿದರೆ ಸಂಸ್ಕೃತಿಯ ಏಕ ಜಾತೀಯತೆಯು ಕಾಣಬರುತ್ತದೆ" (1935-21). ಇಡೀ ಭಾರತೀಯ ಸಂಸ್ಕೃತಿಯನ್ನು ವೈದಿಕ ಸಂಸ್ಕೃತಿಯ ಚೌಕಟ್ಟಿನಲ್ಲಿಟ್ಟು ಪರಿಭಾವಿಸುವ ದೇವುಡು ಅವರಿಗೆ, ಜಾನಪದ ಸಾಮಗ್ರಿಗಳೂ ವೈದಿಕ ಸಂಸ್ಕೃತಿಯ ಬಿಡಿ ಭಾಗಗಳ ಹಾಗೆ ಗೋಚರಿಸಿವೆ: ಇಂದಿಗೆ ಬಹಳ ಚರ್ಚಾಸ್ಪದವಾಗಿ ಕಂಡು ಬರುವ ಈ ನಿಲುವುಗಳು ಅಂದಿಗೆ ಒಂದು ರೀತಿಯಲ್ಲಿ ಚಾರಿತ್ರಿಕ ಅಗತ್ಯವಾಗಿ ಕಾರ್ಯ ನಿರ್ವಹಿಸಿದವು, 1930 ರಲ್ಲಿ 'ಹಳ್ಳಿಯ ಹಾಡುಗಳು' ಪ್ರಕಟಿಸಿದ ಬೆಟಗೇರಿ ಕೃಷ್ಣಶರ್ಮರಿಗೆ, 1944 ರಲ್ಲಿ ಜನಪದ ಸಾಹಿತ್ಯಗೋಷ್ಠಿಯ ಅಧ್ಯಕ್ಷ ಭಾಷಣ ಮಾಡಿದ ಉತ್ತಂಗಿ ಚನ್ನಪ್ಪನವರಿಗೆ ಜಾನಪದವೆಂದರೆ ಹೀಗೆ ಭಾರತೀಯ ಸಂಸ್ಕೃತಿಗೆ ಏಕರೂಪವನ್ನೀಯುವ ಇಂಥ ಕೆಲಸಗಳೂ ಮೂಲತಃ ಭಾವನಾತ್ಮಕವಾದುದು ಮಾತ್ರವಲ್ಲ ವಸಾಹತೀಕರಣಕ್ಕೆ ಪ್ರತಿಕ್ರಿಯಾತ್ಮಕವಾದುದು.

ಕನ್ನಡ ನವೋದಯಕ್ಕೆ ಬದ್ಧವಾದ ಈ ಬಗೆಯ ಚಿಂತನಾಕ್ರಮವು ವಿದ್ವಾಂಸರನ್ನು ಹಾಡುಗಳಿಗೆ ಸಂಬಂಧಿಸಿದಂತೆ ಮಾತ್ರ ಕೆಲಸ ಮಾಡಲು ಒತ್ತಾಯಿಸುತ್ತದೆ, ಏಕೆಂದರೆ ಇಲ್ಲಿ ವಿದ್ವಾಂಸರಿಗೆ ತಮ್ಮ ಮುಂದಿರುವ ವಸ್ತುವಿನೊಡಗೆ ಯಾವುದೇ ಬಗೆಯ ಜಗಳವಿಲ್ಲ. ಜಾರ್ಜ್ ಆರ್ವೆಲ್ಲನ ಪರಿಭಾಷೆಯಲ್ಲಾದರೆ ವಿದ್ವಾಂಸರಲ್ಲಿ 'ಪ್ರಾಟೆಸ್ಟಂಟ್ ಕಲ್ಚರ್' (ದಾಮೋದರರಾವ್ 1992:24) ಇಲ್ಲ. ಅದಿಲ್ಲದಾಗ ವಿದ್ವಾಂಸರ ಚಿಂತನಾ ವಿನ್ಯಾಸವು ವೈಚಾರಿಕವಾಗುವುದೂ ಇಲ್ಲ, ಗದ್ಯದ ವಿಕಾಸವೂ ನಡೆಯುವುದಿಲ್ಲ. ಹೀಗೆ ನೋಡಿದಾಗ ಸ್ವಾತಂತ್ರ್ಯಪೂರ್ವ ಜಾನಪದ ವಿದ್ವಾಂಸರು ಜಾನಪದದ ಗದ್ಯ ಪ್ರಕಾರಗಳತ್ತ ಯಾಕೆ ಆಕರ್ಷಿತರಾಗಲಿಲ್ಲ ಮತ್ತು ಹಾಡುಗಳತ್ತಲೇ ಏಕೆ ಆಕರ್ಷಿತರಾದರು ಎಂಬ ಸಮಸ್ಯೆಗೆ ಸಮಂಜಸವಾದ ಒಂದು ಉತ್ತರ ದೊರಕುತ್ತದೆ. ತಾವು ಆಯ್ದುಕೊಂಡ ವಸ್ತುವಿನಲ್ಲಿ ತಲ್ಲೀನವಾಗುವ ಗುಣ ಅವರಲ್ಲಿ ಇತ್ತೇ ವಿನಹ, ವಸ್ತುವಿನಿಂದ ನಿರೂಪಣಾ ಪ್ರಜ್ಞೆಯನ್ನು ಬೇರ್ಪಡಿಸಿಕೊಳ್ಳುವ ಪ್ರಾಟೆಸ್ಟಂಟ್ ಮೈಂಡ್ ಅವರಲ್ಲಿ ಇರಲಿಲ್ಲ.

ಸ್ವಾತಂತ್ರ್ಯಪೂರ್ವ ದೇಶೀಯ ಜನಪದ ವಿದ್ವಾಂಸರ ಉತ್ಕೃಷ್ಟ ಕೊಡುಗೆಗಳೆಂದು ಪ್ರಶಂಸೆಗೆ ಪಾತ್ರವಾದ ಹಲಸಂಗಿ ಚನ್ನಮಲ್ಲಪ್ಪ, ಲಿಂಗಪ್ಪ ಮತ್ತು ರೇವಪ್ಪನವರ 'ಗರತಿಯ ಹಾಡು' (1931), ಸಿಂಪಿ ಲಿಂಗಣ್ಣ ಮತ್ತು ಪಿ ಧೂಲಾ ಸಾಹೇಬರ 'ಜೀವನ ಸಂಗೀತ' (1933), ಕಾಪಸೆ ರೇವಪ್ಪನವರ 'ಮಲ್ಲಿಗೆ ದಂಡೆ' (1935)ಇಂಥ ಭಾವುಕ ನೆಲೆಗಳಲ್ಲಿಯೇ ಸಂಪಾದಿಸಲ್ಪಟ್ಟಿವೆ. ತಪಸ್ವೀಕುಮಾರ್ ಮತ್ತು ಹಿರಿಯಣ್ಣನವರು (1981, 1989) ಈ ಕೃತಿಗಳ ಹಿಂದೆ ಕೆಲಸ ಮಾಡಿದ

ಸಾಹಿತ್ಯಿಕ ಧೋರಣೆಗಳನ್ನು ಈಗಾಗಲೇ ಸ್ಪಷ್ಟವಾಗಿ ಗುರುತಿಸಿದ್ದಾರೆ. ಹಿರಿಯಣ್ಣ ಬರೆಯುತ್ತಾರೆ— "ಕನ್ನಡದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆ ಆರಂಭವಾದುದು ಸಾಹಿತ್ಯಿಕ ಆಸಕ್ತಿಯಿಂದಲೇ. ಸಹಜವಾಗಿ ಇಂಥ ಸಾಹಿತ್ಯಾಸಕ್ತಿ ಜನ ಸುಂದರ ಸಾಹಿತ್ಯ ವನ್ನೇ ಆಯ್ದು ವೈಭವೀಕರಿಸಿ ಬರೆದರು. ಇಂಥವರಲ್ಲಿ ಜಾನಪದ ಆಸಕ್ತಿ ಪ್ರಧಾನ ವಾಗಿರದೆ ಸಾಹಿತ್ಯಿಕ ಸಾಧನೆಯತ್ತಲೇ ಅವರ ವಿಶೇಷ ಒಲವು ಹರಿಯುವುದರಿಂದ ಅವರ ಜಾನಪದ ದೃಷ್ಟಿ ಗೌಣವೆನಿಸುತ್ತದೆ. ಮಾಸ್ತಿಯವರ ಗೀತ ಸಾಹಿತ್ಯ ಸಂಬಂಧಿ ಬರಹಗಳಾಗಲೀ, ಗರತಿಯ ಹಾಡು, ಮಲ್ಲಿಗೆ ದಂಡೆ, ನಾಡಪದಗಳು ಸಂಗ್ರಹಗಳಲ್ಲಿ ಪ್ರಕಟಗೊಂಡಿರುವ ಪ್ರಸ್ತಾವನೆಗಳಾಗಲೀ ಶುದ್ಧ ಜಾನಪದ ದೃಷ್ಟಿಯುವಲ್ಲ. ಜಯ ಕರ್ನಾಟಕ, ಜೀವನ, ಸಾಹಿತ್ಯ ಪರಿಷತ್ಪತ್ರಿಕೆಗಳಲ್ಲಿ ಪ್ರಕಟಗೊಂಡ ಬರಹಗಳ ದೃಷ್ಟಿಯೂ ಅದೇ" (1989:72). ಹಿರಿಯಣ್ಣನವರ ಮಾತು ನಿಜ ಎಂಬುದಕ್ಕೆ ಗರತಿಯ ಹಾಡಿಗೆ ಬಿ. ಎಂ. ಶ್ರೀಕಂಠಯ್ಯನವರು ಬರೆದ ಪ್ರಸ್ತಾವನೆಯೇ ಒಳ್ಳೆಯ ಸಾಕ್ಷಿ. ಬಿ. ಎಂ. ಶ್ರೀ ಬರೆಯುತ್ತಾರೆ— *ಕನ್ನಡ ಕವಿತೆ ತನ್ನ ಆಳತೆಯನ್ನೇ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳ ಇತರ ಸಾಹಿತ್ಯಗಳ ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢ ಸಾಹಿತ್ಯದ ವ್ಯಾಸಂಗದ ಜೊತೆಗೆ ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸು ವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ ಪ್ರೌಢ ಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವು ದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳಬೇಕಾದ್ದು ಕನ್ನಡಿಗರ ಕರ್ತವ್ಯವಾಗಿದೆ" (1931:6-7). ಅದೇ ಸಂಕಲನದಲ್ಲಿ ದ. ರಾ. ಬೇಂದ್ರೆಯವರು ಬರೆಯುವುದು ಹೀಗೆ— "ನೃಪತುಂಗನು ಹೇಳುವ ವಿವಿಧ ಪ್ರಾಸಗಳನ್ನು ಪೂರ್ಣವಾಗಿ ಕಾಣಬೇಕಾ ದರೆ ಜನಪದ ಸಾಹಿತ್ಯಕ್ಕೆಯೆ ಶರಣು ಬರಬೇಕು. ಆ ಪ್ರಾಸಗಳಲ್ಲದೆ ಗಾದೆಗಳಲ್ಲಿ ಕಂಡುಬರುವ ಪ್ರಥಮಾಕ್ಷರ ಪ್ರಾಸವೂ ಸಸ್ವರ ಸನಾದ ಪ್ರಾಸಗಳೂ, ಮಾತುಗಳ ಸಮತೂಕದ ಪ್ರಾಸವೂ ಈ ಸಾಹಿತ್ಯದ ವಿಶೇಷ ಲಕ್ಷಣವಾಗಿದೆ. ಸಹಜರೂಪ ಸುಭಗವಾಗಿಯೂ, ಸ್ವಭಾವೋಕ್ತ ಪ್ರಾಣವಾಗಿಯೂ, ನಿರಲಂಕಾರ ಸುಂದರ ವಾಗಿಯೂ, ಅಲಂಕಾರವನ್ನು ತೋರಗೊಡದಂತೆ ಅಲಂಕೃತವಾಗಿಯೂ ಇರುವ ಈ ಪದ್ಯಗಳ ಅಲಂಕಾರ ವಿಷಯಕವಾಗಿ ಹೆಚ್ಚು ಹೇಳಬೇಕಾಗಿಲ್ಲ." (1931:15) ಈ ಮಾತುಗಳ ಹಿಂದೆ 'ಜಾನಪದ' ಎಂದರೆ 'ಜನಪದ ಸಾಹಿತ್ಯ', 'ಜನಪದ ಹಾಡು' ಎಂಬಂಥ ಸರಳ ತರ್ಕವೊಂದು ಅಂತರ್ಗತವಾಗಿರುವುದು ನೆಗೆದು ತೋರುತ್ತದೆ.

ಆ ಕಾಲದಲ್ಲಿ ಪ್ರಕಟವಾದ ಇತರ ಸಂಗ್ರಹಗಳೂ ಇದೇ ಮಾದರಿಯವು. 1928 ರಲ್ಲಿ ಪ್ರಕಟವಾದ ಪ್ರಹ್ಲಾದ ನರೇಗಲ್ಲರ 'ತ್ರಿಪದಿ' ಲೇಖನ ಮತ್ತು

ಅದರಲ್ಲಿರುವ ತ್ರಿಪದಿಗಳು, 1933ರಲ್ಲಿ ಪ್ರಕಟವಾದ ವಿಠೋಬ ವೆಂಕಟ ನಾಯಕರ 'ಹಳ್ಳಿಯ ಹಾಡುಗಳು', 1935ರಲ್ಲಿ ಹೊರಬಂದ ಬಿ. ಎಸ್. ರಂಗಸ್ವಾಮಿಯವರ 'ಹಳ್ಳಿಯ ಹಾಡುಗಳು', ಮತ್ತು 1940 ರಲ್ಲಿ ಹೊರಬಂದ ಅವರದ್ದೇ ಆದ ಹಳ್ಳಿಯ ಪದಗಳು, 1935ರಲ್ಲಿ ಪ್ರಕಟವಾದ ಎಸ್. ವಿ. ರಂಗಣ್ಣನವರ 'ಹಳ್ಳಿಯ ಹಾಡುಗಳು'. 1938 ರಲ್ಲಿ ಪ್ರಕಟವಾದ ಗೋರೂರು ರಾಮಸ್ವಾಮಿ ಅಯ್ಯಂಗಾರರ 'ಹಳ್ಳಿಯ ಹಾಡುಗಳು' ಮತ್ತು 1943 ರಲ್ಲಿ ಹೊರಬಂದ ಅವರ 'ಹಳ್ಳಿಯ ಬಾಳು' 1947 ರಲ್ಲಿ ಹೊರ ಬಂದ ಎಲ್. ಗುಂಡಪ್ಪ ಸಂಪಾದನೆಯ (ಮತಿಘಟ್ಟ ಸಹೋದರರು ಸಂಗ್ರಹಿಸಿದ) ನಾಡ ಪದಗಳು– ಹಾಡುಗಳ ಸಂಗ್ರಹವನ್ನೇ ಗುರಿಯಾಗಿರಿಸಿಕೊಂಡಿವೆ ಮಾತ್ರವಲ್ಲ, ಅವನ್ನು ಸಾಹಿತ್ಯಿಕ ಮಾನದಂಡದಿಂದ ಮೌಲ್ಯ ಮಾಪನ ಮಾಡಿವೆ. ಹಾಗಾಗಿ ಈ ಸಂಕಲನಗಳಲ್ಲಿ ಆ ಕಾಲಕ್ಕೆ ಅತ್ಯುತ್ತಮವಾದುವು ಎಂದು ಕಂಡು ಬಂದ ಹಾಡುಗಳನ್ನು ಹೆಚ್ಚು ಹೆಚ್ಚು ಸೇರಿಸಿಕೊಳ್ಳಲಾಗಿದೆ. ಕೆಲವು ಬಾರಿ ಹಾಡುಗಳನ್ನು ತಿದ್ದಿ ನಾಗರಿಕಗೊಳಿಸುವ ಕೆಲಸವನ್ನೂ ಮಾಡಲಾಗಿದೆ.

ಈ ಶತಮಾನದ ಕೊನೆಯಲ್ಲಿ ನಿಂತು, ಈ ಶತಮಾನದ ಪೂರ್ವಾರ್ಧದಲ್ಲಿ ನಡೆದ ಜಾನಪದ ಕೆಲಸಗಳನ್ನು ಅವಲೋಕಿಸಿದಾಗ ಅವುಗಳಲ್ಲಿ ಸಾಕಷ್ಟು ದೋಷಗಳು ಕಂಡು ಬರುವುದು ಸಹಜ. ತಂತ್ರಜ್ಞಾನ ಇನ್ನೂ ಜನಜೀವನವನ್ನು ಪೂರ್ಣವಾಗಿ ಆಕ್ರಮಿಸಿಕೊಳ್ಳದ ಸಂದರ್ಭ ಆದಾದ್ದರಿಂದ, ಅಂದಿನ ಸಂಗ್ರಹಗಳು ಬಹಳ ಬಾರಿ ಅವೈಜ್ಞಾನಿಕವಾಗಿರುವುದು ಅನಿವಾರ್ಯವಾಯಿತು. ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಅವರು ಕೆಲಸ ಮಾಡುತ್ತಿದ್ದುದರಿಂದ ಆ ಕಾಲದ ನೈತಿಕತೆಗೆ ಅನುಗುಣವಾಗಿ ಪಠ್ಯಗಳನ್ನು ಪರಿಷ್ಕರಿಸಿಕೊಳ್ಳಲೇಬೇಕಾಯಿತು. ಜಾನಪದ ವ್ಯಾಪ್ತಿಯ ಬಗೆಗೆ ಖಚಿತವಾದ ಅಭಿಪ್ರಾಯ ಮೂಡಲು ಸಹಾಯಕವಾಗುವಂಥ ಗ್ರಾಂಥಿಕ ಮತ್ತು ಸಾಂಘಿಕ ಸಹಾಯಗಳು ಅವರಿಗೆ ದೊರೆಯುತ್ತಿರಲಿಲ್ಲ. ಇಂದು ನಾವು ಅಪೇಕ್ಷಿಸುವ ನಿರೂಪಕರ ವಿವರ, ಪಠ್ಯವೊಂದರ ಸಾಂದರ್ಭಿಕ ವಿವರ ಮೊದಲಾದುವುಗಳನ್ನು ಆ ಕಾಲದ ಸಂಗ್ರಹಗಳು ನೀಡುವುದಿಲ್ಲ, ಹೀಗಾಗಿ ಇಂದಿಗೆ ಆ ಕಾಲದ ಸಂಗ್ರಹಗಳು ಬಹಳ ಸೀಮಿತವಾಗಿ ಮಾತ್ರ ಸಹಕರಿಸುತ್ತವೆ. ಜಾನಪದದ ಪಾಠ ಕಲ್ಪನೆ, ಪ್ರಕಾರ ಕಲ್ಪನೆಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಸಂಭವಿಸಿದ ಈ ಕಾಲದಲ್ಲಿ ನಾವು ಸ್ವಾತಂತ್ರ್ಯ ಪೂರ್ವ ದೇಸೀ ವಿದ್ವಾಂಸರ ಸಂಗ್ರಹಗಳನ್ನು ಬಹಳ ಜಾಗ್ರತೆಯಾಗಿ ಉಪಯೋಗಿಸಬೇಕಾಗುತ್ತದೆ. ಜೊತೆಗೆ ಎಷ್ಟೋ ಸಂಗ್ರಹಗಳನ್ನು ಅನುಮಾನದಿಂದಲೂ ನೋಡಬೇಕಾಗುತ್ತದೆ.

ಈ ಮಾತುಗಳು ಸ್ವಾತಂತ್ರ್ಯಪೂರ್ವ ದೇಸೀ ಜಾನಪದ ವಿದ್ವಾಂಸರ

ಚಾರಿತ್ರಿಕ ಸಾಧನೆಯನ್ನು ಅಲ್ಲಗಳೆಯುವುದಿಲ್ಲ. ಅವರೆಲ್ಲರೂ ಕನ್ನಡ ಜಾನಪದದ ಮೇಲೆ ಪ್ರೀತಿ ಮತ್ತು ಗೌರವ ಹುಟ್ಟುವಂತೆ ಕೆಲಸ ಮಾಡಿದ್ದಾರೆ. ನಿರಾಕರಣೆಗೆ ಒಳಗಾದ ಕ್ಷೇತ್ರವೊಂದರಲ್ಲಿ ಕೆಲಸ ಮಾಡುವ ಮೂಲಕ ಸಾಂಪ್ರದಾಯಿಕರನ್ನು ಬೆಚ್ಚಿಸಿದ್ದಾರೆ. ದೇಸೀ ಸಂಸ್ಕೃತಿಯ ಬಗೆಗೆ ಮಾತಾಡುತ್ತಾ ಪಾಶ್ಚಾತ್ಯೀಕರಣಕ್ಕೆ ವಿರೋಧವನ್ನು ಸೂಚಿಸಿದ್ದಾರೆ, ಇಂದಿಗೂ ನಾವೆಲ್ಲ ಮೆಲುಕು ಹಾಕುವಂಥ ಹಾಡುಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ, ಮೇಲಾಗಿ ತಾವು ಬದುಕಿದ ಕಾಲ ಘಟ್ಟದ ಅವಶ್ಯಕತೆಗಳನ್ನು ಬಹಳ ಜವಾಬ್ದಾರಿಯಿಂದ ಅರ್ಥ ಮಾಡಿಕೊಂಡು ಅದಕ್ಕೆ ಪ್ರತಿಕ್ರಿಯಿಸಿದ್ದಾರೆ. ಈ ನಿಟ್ಟಿನಲ್ಲಿ ನಾವೆಲ್ಲ ಅವರಿಂದ ಕಲಿಯಬೇಕಾದ ಅಂಶಗಳು ಹಲವಿವೆ.

ಕೊನೆ ಟಿಪ್ಪಣಿಗಳು

1. ಈ ಬಗೆಯ ವಿವರಗಳಿಗೆ ನೋಡಿರಿ ; ಬಿ. ದಾಮೋದರರಾವ್ 1992 ಶಿವರಾಮ ಭಟ್ಟ ಪಡಿಕ್ಕಲ್ 1987

ಗ್ರಂಥ ಋಣ

1. ತಪಸ್ವಿಕುಮಾರ್ ನಂ, 1981, ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

2, ದಾಮೋದರರಾವ್ ಬಿ. 1992, ಆಯಾಮಗಳು : ಶಿವಮೊಗ್ಗ ಪರಿಸರ ಸಾಹಿತ್ಯ ಪ್ರಕಾಶನ.

3. ಪರಮಶಿವಯ್ಯ ಜಿ. ಎಸ್. 1978: ಜಾನಪದ, ಮೈಸೂರು ಸಾಹಿತ್ಯ ಸದನ,

4, ಶಿವರಾಮ ಭಟ್ ಪಡಿಕ್ಕಲ್ 1987, ಕನ್ನಡ ಕಾದಂಬರಿಯ ಮೊದಲ ಘಟ್ಟ (ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ–ಅಪ್ರಕಟಿತ) ಮಂಗಳಗಂಗೋತ್ರಿ.

5. ಸುಶೀಲಾ ಪಟ್ಟಣಶೆಟ್ಟಿ 1974, ಕನ್ನಡ ಜನಪದ ಸಾಹಿತ್ಯದ ಸಂಕಲನ ಕೃಷಿ (ಜಾನಪದ ಸಾಹಿತ್ಯ ದರ್ಶನ1) ಧಾರವಾಡ :ಕನ್ನಡ ಅಧ್ಯಯನ ಪೀಠ ಕ.ವಿ.ವಿ.

6. ಹಿರಿಯಣ್ಣ ಅಂಬಳಿಕೆ 1989, ಕರ್ನಾಟಕದಲ್ಲಿ ಜಾನಪದ ಅಧ್ಯಯನ ನಡೆದು ಬಂದ ದಾರಿ (ಇದರಲ್ಲಿ : ಕರ್ನಾಟಕ ಜಾನಪದ (ಪ್ರ. ಸಂ) ಕರೀಂಖಾನ್ ಎಸ್. ಕೆ.) ಬೆಂಗಳೂರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,

7. ಹಿರಿಯಣ್ಣ ಅಂಬಳಿಕೆ 1987, ಜಾನಪದ ವೀಕ್ಷಣೆ : ಮೈಸೂರು. ಪ್ರಜ್ವಲ ಪ್ರಕಾಶನ.

8. Javaharalal Hundoo 1989, Folklore An Introdueiion Mysore Central Institute of Indian Langnages.

"ಪರಿಸ್ಥಿತಿ"

ಬಸವರಾಜ ಜಾನಬೊ

ಅಶಿಸ್ತು, ಅನ್ಯಾಯ
ಭೀತಿ ಭಯ
ತಾಂಡವ ನೃತ್ಯವಾಡುತಿವೆ
ಅರಾಜಕತೆ ಅವಿಶ್ವಾಸ
ಮೈದೋರಿ ನಿಂತಿವೆ
ಅಧಿಕಾರ, ಸತ್ಕಾರ
ಭೀಕರ ಬರ
ಕರೆಯುತಿವೆ ಕೈ ಮಾಡಿ

ಬೆಲೆಗಳು ಏರತಿವೆ
ಗಗನದಲಿ ತೇಲುತಿವೆ
ನಿಲುಕದೆ ಮಾನವಗೆ ಅಣಕಿಸುತೆ ।
ಸೆಣಸಾಡುತಿಹ ಸಾಮಾನ್ಯರು
ಎಷ್ಟೋ ಚೀರಾಡಿದರೂ
ಕರುಳೆಲ್ಲಾ ಬಾಯಲಿ ಬಂದರೂ

ಎಲ್ಲಿದೆ ಕರುಣೆ ?
ವ್ಯಾಪಾರಿ. ಪುಢಾರಿ, ತಲೆಹಿಡುಕರಿಗೆ......

ನೋವಿಲ್ಲದೆ
ಕಾರುಗಳಲ್ಲಿ ಬಾರುಗಳಲ್ಲಿ
ಕೊಲ್ಲಿಯ ಜಗಳಗಳಲ್ಲಿ
ಸದ್ದಿಲ್ಲದೆ ತಲೆಕೊಟ್ಟು
ತಮ್ಮನ್ನೇ ಒತ್ತೆ ಇಟ್ಟು
ಪರಂಪರೆಯ ಸಂಪ್ರದಾಯವನ್ನು
ಗುತ್ತಿಗೆ ಕೊಟ್ಟು
ಅವರ ಋಣದಲ್ಲಿ ಮುಂದಿನ.........

ಪೀಳಿಯನ್ನು ಬಿಟ್ಟು
ಕೈಯಲಿ ಸಾಲವ
ಬಾಯಲಿ, ಸಾಗರದಲಿ, ನಿಸರ್ಗದ ಒಡಲಲಿ
ಇಂಧನ ಬಾವಿಗಳಲಿ ಗುಂಡುಮದ್ದನು ಇಟ್ಟು
ನರ ಜೀವ ಜಂತುವನ್ನೇ
ಧಂ......ಧಂಧಂ......ಎನ್ನಿಸಲು
ಹೊರಟ ಪಿಶಾಚಿಗಳು !
ತಲ್ಲಣಿಸುತಿದೆ, ವಾಯು ಭೂ ಜಲವೆಲ್ಲ
ಕಪ್ಪೇರಿ ಕುದಿಯುತಿದೆ
ಕೆಂಪೇರಿ ಕಾಯುತಿವೆ
ಸದ್ದಿಲ್ಲದೆ "ಸದ್ದಾಮ"ನು
ಕೆಂಪು ಮೋತಿಯ "ಬಚಾವ"ನು
ಮುಗ್ಧ ಜೀವಿಗಳನು ಹೊಸಕಿ
ಬುಶ್‌ನ ಪರಸ್ಥಿತಿ
ಟುಸ್ss......ಎನ್ನುವ
ಪಟಾಕಿಯ......ಸ್ಥಿತಿ
"ಲೆನಿನ್"ನಂತೆ......ಅಧೋಗತಿ !

"ಮಹಾಲಕ್ಷ್ಮೀ ಬಾವಿ" ಒಂದು ಐತಿಹ್ಯ

ವಿಜಯಕುಮಾರ ಸಾಲಿಮಠ

ನರಬಲಿಗೆಯ ಬಗೆಗೆ ನಾವು ಅನೇಕ ಐತಿಹ್ಯ. ಕಥೆಗಳನ್ನು ಕೇಳುತ್ತೇವೆ. ಕೆರೆಗೆ ಹಾರ, ಕೆರೆ ಹೊನ್ನಮ್ಮ, ಹಲಸಂಗಿಯ ಕೋಟೆ, ಡ್ಯಾಮ ಕಟ್ಟುವಾಗ ಬಲಿ. ಹೀಗೆಯೇ ಮಹಾಲಕ್ಷ್ಮಿಯದೂ ಒಂದು ಐತಿಹ್ಯವಾಗಿದೆ,

"ಕೆರೆಗೆ ಹಾರ"ದ ಐತಿಹ್ಯದಂತೆ ಈ ಕಥೆಯು ಸಾಗಿಕೊಂಡು ಬಂದಿದೆ. ಜನರು ನಂಬಿಕೊಂಡು ಬಂದಿದ್ದರಿಂದಲೇ ಬಲಿಗಳು ಹಾಗೇ ಉಳಿದುಕೊಂಡು ಬರುತ್ತಲಿವೆ. ಇಲ್ಲಿ ನಂಬಿಕೆ ಬಹು ಮುಖ್ಯವಾಗಿದೆ ಎನ್ನಬಹುದು. ನಂಬಿಕೆಗಳನ್ನು ಅಳಿಸಿ ಹಾಕುವದು ಯಾರಿಂದಲೂ ಸಾಧ್ಯವಾಗಿಲ್ಲ. ಹಳೆಯ ನಂಬಿಕೆಗಳನ್ನು ತಿರಸ್ಕರಿಸಬೇಕೆಂದು ಹೇಳಿರುವ ಸಾಕ್ರಟಿಸ್ ಮತ್ತು ರಾಬರ್ಟ ಬ್ರೂನೋ ಅವರನ್ನು ಮರಣ ದಂಡನೆಗೂ ಗೆಲಿಲಿಯೋನನ್ನು ಚಿತ್ರಹಿಂಸೆಗೂ ಗುರಿ ಮಾಡಿದ ಪ್ರಸಂಗಗಳು ಜಗದ್ವಿಖ್ಯಾತವಾಗಿವೆ.

ನಂಬಿಕೆಯು ಬಲಿಗೆ ಬುನಾದಿಯಾಗಿದೆ. ಹೀಗೆ ಬಲಿ ಕೊಟ್ಟರೆ ನಮಗೆ ಒಳ್ಳೆಯದಾಗುತ್ತದೆಯೆಂದು ತೋಳನೂರದಲ್ಲಿ ಬಾವಿಗೆ ಬಲಿ ಕೊಟ್ಟ ಹುಡುಗಿಯ ಕಥೆಯಿದು. ಇಂತಹ ಅನೇಕ ಕಥೆಗಳನ್ನು ನಾವು ಕೇಳಿದಾಗ ಈ ಕಥೆಯು ಕೂಡಾ ಅದರಂತೆ ಸಾಗಿಕೊಂಡು ಬಂದದ್ದು ಎಂದು ತಿಳಿಯುತ್ತದೆ. ಇದನ್ನು ಸುಳ್ಳೆಂದು ತಳ್ಳಿ ಹಾಕಲು ಬರುವದಿಲ್ಲಾ. ಇಂತಹ ನೂರಾರು ಕತೆಗಳು ಇರುವದರಿಂದ ಇದು ಕೂಡಾ ಸತ್ಯವೆಂದು ನಂಬಿಕೊಳ್ಳುವದು ಮುಖ್ಯವಾಗಿದೆ. ಊರಿನ ಹಿರಿಯರ ಮಾತಿಗೆ ತನ್ನ ಕರುಳನ್ನೆ ಊರಿನ ಹಿತಕ್ಕಾಗಿ ಬಲಿ ಕೊಟ್ಟ ಇಂತಹ ಕಥೆಗಳು ಸಿಗುತ್ತವೆ. ಮಹಾಲಕ್ಷ್ಮೀ ಬಾವಿಗೆ ಬಲಿ ಕೊಟ್ಟ ಕಾರಣ ಆ ಬಾವಿಗೆ ಅಂದಿನಿಂದ ಮಹಾಲಕ್ಷ್ಮಿ ಬಾವಿ ಎಂದು ಹೆಸರಿಟ್ಟರು. ಈಗ ಆ ಹೆಸರು ಜನರ ಬಾಯಿಯಲ್ಲಿ "ಮಾಲಾಶ ಬಾವಿ" ಎಂದು ಪರಿವರ್ತನೆಯಾಗಿದೆ. ಈ ಕತೆ ಕೇಳಿದಾಗ ಬಹಳ ಆಶ್ಚರ್ಯ ಎನಿಸಬಹುದು. ಆದರೆ ಇದು ಸತ್ಯ ಎಂಬುದು ತಿಳಿದು ಬರುತ್ತದೆ,

ಮಹಾರಾಷ್ಟ್ರದ ಸೊಲ್ಲಾಪೂರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ತೋಳನೂರ ಗ್ರಾಮದದಲ್ಲಿ ಈ ಮಹಾಲಕ್ಷ್ಮಿಯ ಬಗ್ಗೆ ಐತಿಹ್ಯಗಳು ಹಬ್ಬಿಕೊಂಡಿವೆ. ಸುಮಾರು 110 ವರ್ಷಗಳ ಹಿಂದೆ ತೋಳನೂರದಲ್ಲಿ ಒಂದು ಬಲಿದಾನ ಜರುಗಿತು. ಅದರ ಬಗ್ಗೆ ಜನರಲ್ಲಿರುವ ವದಂತಿಯನ್ನು ತಿಳಿದು ಇಲ್ಲಿ ಚಿತ್ರಿಸಲಾಗಿದೆ. 3000 ಜನ

ಸಂಖ್ಯೆಯುಳ್ಳ ಈ ಊರಿನಲ್ಲಿ ಅಂದು ಬಹಳ ಸುಖದಿಂದ ಜೀವನ ಸಾಗಿಸುತ್ತಿರುವಾಗ ಒಂದು ವರ್ಷ ಭೀಕರ ಬರಗಾಲ ಬಿದ್ದಿತು. ಊರಿನ ಗೌಡ ಪಂಚರು ಸೇರಿ ಊರಿನ ಹಿತಕ್ಕಾಗಿ ಊರಿನ ಪೂರ್ವ ದಿಕ್ಕಿಗೆ ಒಂದು ಬಾವಿಯನ್ನು ತೆಗೆಸಲು ವಿಚಾರ ಮಾಡಿದರು, ಒಂದು ದಿನ ಒಳ್ಳೆಯ ಮುಹೂರ್ತ ನೋಡಿ ಬಾವಿ ತೋಡಲು ಪ್ರಾರಂಭಿಸಿದರು. ಎಷ್ಟು ಆಳವಾಗಿ ಬಾವಿ ಹೊಡೆದರೂ ನೀರು ಹತ್ತದೆ ಇರುವದನ್ನು ಕಂಡು ಊರಿನ ಪಂಚರು ಗಾಬರಿಸಿ ಹಣ ಖರ್ಚು ಮಾಡಿದ್ದಕ್ಕೆ- ಊರಿನ ಜನರಿಗೆ ನೀರು ದೊರಕಿಸಿಕೊಟ್ಟರೆ ಪುಣ್ಯ ಬರುತ್ತದೆ, ಆದರೆ ನಾವು ಏನೇ ಪ್ರಯತ್ನ ಮಾಡಿದರೂ ನೀರು ಬರುತ್ತಿಲ್ಲವೆಂದು ಅರಿತು ಊರಿನ ಸ್ವಾಮಿಗಳ ಹತ್ತಿರ ಹೋಗಿ, ನಾವು ಬಾವಿ ಅಗಿಯಲು ಸುರು ಮಾಡಿದ್ದೇವೆ, ನೀರೇ ಬರುತ್ತಿಲ್ಲ, ಕಾರಣ ಹೊತ್ತಿಗೆ ತೆಗೆದು ನೋಡಿ ಪರಿಹಾರ ಸೂಚಿಸಬೇಕು ಎಂದು ಬೇಡಿಕೊಂಡರು. ಆಗ ಹೊತ್ತಿಗೆ ತೆಗೆದು ನೋಡಲಾಗಿ ಬಲಿ ಕೊಡಬೇಕೆಂದು ಬಂತು, ಅಂದರೆ "ಒಳ್ಳೆ ಸುಸಂಸ್ಕೃತ ಮನೆತನದ. 13 ವರ್ಷದ ಬಾಲಕಿ. ಒಬ್ಬಳೇ ಮಗಳು ಇದ್ದು ಪೂರ್ವ ದಿಕ್ಕಿಗೆ ಮನೆ ಬಾಗಿಲಿರುವ, ದೇವಿಯ ನಾಮಾಂಕಿತ ಹೊಂದಿರುವ ಹುಡುಗಿಯನ್ನು ಬಲಿ ಕೊಡಬೇಕು." ಎಂಬುದನ್ನು ಕೇಳಿದಾಕ್ಷಣ ಎಲ್ಲಾ ಪಂಚರು ಗಾಬರಿಯಾದರು. ಅಂತಹ ಹುಡುಗಿ ಯಾರು ಎಂದು ವಿಚಾರ ಮಾಡುತ್ತ ಕುಳಿತುಕೊಂಡು ಮತ್ತೆ ಏನಾದರೂ ಪರಿಹಾರ ವಿದೆಯೇ ಎಂದು ಕೇಳುವರು. ಸ್ವಾಮಿ ಮತ್ತೆ ಹೊತ್ತಿಗೆ ತೆಗೆದು ನೋಡಲಾಗಿ ಏನೂ ಇರಲಿಲ್ಲಾ. ಅಂತಹ ಮಗು ಯಾರೆಂದು ವಿಚಾರಿಸಲಾಗಿ ಊರಿನ ನೇಕಾರ ಜನಾಂಗದ, ಊರಿನ ದಕ್ಷಿಣ ಭಾಗದಲ್ಲಿ ಮನೆಯಿರುವ, ಒಂದೇ 13 ವರ್ಷದ ಹೆಣ್ಣು ಮಗುವಿರುವ ಮನೆಯೆಂದರೆ ನಡಗೇರಿ ಸರದಾರ ಅವರದು. ಅವರ ನೆಚ್ಚಿನ ಪುತ್ರಿಯನ್ನು ಬಲಿ ಕೊಟ್ಟರೆ ನೀರು ಬರುವದೆಂದು ತಿಳಿದು ಎಲ್ಲರೂ ಗಾಬರಿಯಾಗಿ ಕುಳಿತರು, ನಂತರ ನಿರಾಶೆಯಿಂದ ಸ್ವಾಮಿಗಳ ಮನೆಯಿಂದ ಹೊರಬಂದರು. ಮತ್ತೆ ಬೇರೆಡೆಗೆ ಕೇಳಿ ನೋಡಿದರೂ ಕೂಡ ಅದೇ ಬಂದಿತು. ಆಗ ಅವರು ವಿಚಾರ ಮಾಡುತ್ತಾ ಪಂಚರ ಕಟ್ಟೆಯ ಮೇಲೆ ಕುಳಿತಿದ್ದರು.

ನಡಗೇರಿ ಸರದಾರನು ತೋಳನೂರದಲ್ಲಿ ಒಬ್ಬ ಪ್ರತಿಷ್ಠಿತ ವ್ಯಕ್ತಿಯಾಗಿದ್ದನು, ಈತನು ಯಾವಾಗಲೂ ಪಂಚರೊಡನೆ ಕೂಡಿ ತಿರುಗುತ್ತಿದ್ದನು. ಸರದಾರನು ಬಂದು ಪಂಚರ ಹತ್ತಿರ ಕಟ್ಟೆಗೆ ಕುಳಿತಾಗ ಗೌಡ ಪಂಚರು ಸಪ್ಪಗೆ ಮುಖ ಮಾಡಿ ಕುಳಿತಿರುವದನ್ನು ನೋಡಿ "ಯಾಕೆ ಗೌಡರೆ ಮುಖ ಸಪ್ಪಗೆ ಮಾಡಿರುವಿರಿ" ಎಂದು ಕೇಳುವನು. ಆಗ ಗೌಡರು– ಯಾಕೂ ಇಲ್ಲಾ ತಲೆ ನೋವು ಎಂದು ಹೇಳಿ ವಿಷಯ ಮರೆಸಲು ಪ್ರಯತ್ನಿಸುವರು, ಸರದಾರನು ಅಲ್ಲಿಂದ ಎದ್ದು ಬಾವಿಯ ಕಡೆ ಬಂದು ನೋಡಿ ನೋಡಿ, ನೀರಿನ ಬಗ್ಗೆ ಸ್ವಾಮಿಯವರಿಗೆ ಹೊತ್ತಿಗೆ ಕೇಳಬೇಕೆಂದು

ಹೊರಟು ಮಠಕ್ಕೆ ಬಂದನು. ಸ್ವಾಮೀಗಳಿಗೆ ನಮಸ್ಕರಿಸಿ ಬಾವಿಯು ಬಗ್ಗೆ ಕೇಳಿದಾಗ. ಆಗಲೇ ಪಂಚಾಂಗ ನೋಡಿ ಅವನ ಮಗಳೇ ಬಾವಿಗೆ ಆಹಾರ ಆದರೆ ನೀರು ಬರುವ ದೆಂದು ತಿಳಿದಿದ್ದ ಸ್ವಾಮಿಗಳು ಸಂಕೋಚಪಟ್ಟರು. ಆಗ ತಾನೇ ಆ ಹೊತ್ತಿಗೆಯನ್ನು ತೆಗೆದು ನೋಡಲಾಗಿ "ಒಳ್ಳೆ ಸುಸಂಸ್ಕೃತ ಮನೆತನದ 13 ವರ್ಷದ ಬಾಲಕಿ ಒಬ್ಬಳೇ ಮಗಳಿದ್ದವಳು ಪೂರ್ವ ದಿಕ್ಕಿಗೆ ಮನೆ ಬಾಗಿಲಿರುವ ದೇವರ ನಾಮಾಂಕಿತ ಹೊಂದಿ ರುವ ಬಾಲಕಿಯನ್ನು ಬಲಿ ಕೊಟ್ಟರೆ ನೀರು ಬರುವದೆಂದು ತಿಳಿದು. ಅಂತಹಳು ಯಾರು ಎಂದು ಸ್ವಾಮಿಯುವರಿಗೆ ವಿಚಾರಿಸಿದ, ಆಗ ಅವರು ಏನನ್ನೂ ಹೇಳದೆ ಇದ್ದಾಗ, ತಾನೇ ವಿಚಾರ ಮಾಡತೊಡಗಿದ, ಒಮ್ಮೆಲೇ ಆ ಬಾಲಕಿ ತನ್ನ ಮಗಳೇ ಎಂದು ತಿಳಿದಾಗ ಆಕಾಶವೇ ಕಳಚಿ ಬಿದ್ದಂತಾಯಿತು. ಆದರೂ ಎದೆಗುಂದದೆ ಸ್ವಾಮಿಯುವರಿಗೆ ಸಮಸ್ಕರಿಸಿ ಅಲ್ಲಿಂದ ಹೊರಟು ಬಾವಿಯು ಕಡೆ ಬಂದು ನೋಡಿ ಊರಿನ ಎಲ್ಲಾ ಜನರ ಹಿತಕ್ಕಾಗಿ ನಾನು ನನ್ನ ಮಗಳ ಬಲಿದಾನಕ್ಕೆ ಸಿದ್ಧನಾಗಲೇ ಬೇಕೆಂದು ಛಲವಂತನಾಗಿ, ಧೈರ್ಯ ತಂದುಕೊಂಡು, ತನ್ನ ಕರುಳಿನ ಏಕೈಕ ಕುಡಿ ಯನ್ನು ಇಡೀ ಸಮಾಜದ ಉನ್ನತಿಗಾಗಿ ಮೀಸಲಿಡಲು ಬಯಸಿದ. ಪಂಚರ ಕಟ್ಟೆಗೆ ಬಂದು "ನೀವೆಲ್ಲಾ ಚಿಂತಾಕ್ರಾಂತರಾಗಿ ಏತಕ್ಕಾದಿ ಕುಳಿತಿರುವಿರಿ ನನಗೆ ಅರ್ಥವಾಗಿದೆ" ಎಂದು ಎಷ್ಟು ದುಃಖ ನುಂಗಿ ಮಾತನಾಡಿದರೂ ದುಃಖ ಉಮ್ಮಳಿಸಿ ಅಳತೊಡಗಿ ದನು. "ಊರಿನ ಹಿತಕ್ಕಾಗಿ ನಾನು ನನ್ನ ಕರುಳಿನ ಕುಡಿಯನ್ನು ಬಲಿ ಕೊಡಲು ಸಿದ್ಧನಿದ್ದೇನೆ. ಇದ್ದೊಬ್ಬ ಮಗಳನ್ನು ಊರಿನ ಜನರ ನಿರಂತರ ಸೇವೆಗೆ ಹೆಸರಾಗು ವಂತೆ ಅವಳ ಹಣೆಬರಹದಲ್ಲಿ ಬರೆದಿದೆ. ಯಾರು ಏನು ಮಾಡಲು ಸಾಧ್ಯವಿಲ್ಲ. ಊರಿನ ಹಿತಕ್ಕಾಗಿ ನನ್ನ ಮಗಳಿಗೆ ಬಲಿ ಕೊಡಲು ಸಿದ್ಧ" ಎಂದು ದುಖಃ ನುಂಗಿ. ಈ ಸುದ್ದಿ ಯಾರಿಗೂ ತಿಳಿಯದಿರಲಿ. ನನ್ನ ಹೆಂಡತಿ, ಬೀಗರು, ಬಜ್ಜರಿಗೆ, ಯಾರಿಗೂ ತಿಳಿಸಬೇಡಿರಿ. ನಾಳೆ ಬರುವ ರವಿವಾರ ಅಮವಾಸ್ಯೆ ದಿವಸ ಒಳ್ಳೆಯ ಸಮಯ ನೋಡಿ ಕಾರ್ಯಕ್ರಮ ಇಟ್ಟುಕೊಳ್ಳಿರಿ ಎಂದು ಹೇಳಿ ಹೊರಟನು.

ಕಲ್ಲನ ಕೇರಿ ಮಲ್ಲನ ಗೌಡನ ಬಲಿದಾನದಂತೆಯೇ ಈ ಐತಿಹ್ಯ ಹುಟ್ಟಿದೆ ಎಂದು ನಾವು ತಿಳಿದುಕೊಳ್ಳಬಹುದು, ಕೆರೆ ಹೊನ್ನಮ್ಮನ ಕತೆಯೂ ಹಾಗೆಯೇ ಇದೆ. ಅದರಂತೆ ಮಹಾಲಕ್ಷ್ಮೀ ಬಾವಿಯ ಕತೆಯೂ ಬೆಳೆದುಕೊಂಡು ಬಂದಿದೆ.

ಕೆರೆಗೆ ಹಾರದ ಐತಿಹ್ಯದಲ್ಲಿ ಸೊಸೆಯನ್ನು ಬಲಿ ಕೊಡುವದು ಇದೆ. ಅದು ಅವಳ ಗಂಡ ಇಲ್ಲದಾಗ ಅವಳಿಗೆ ಬಲಿ ಕೊಡುತ್ತಾರೆ. ಆ ಕಥೆ ಜನರ ಮನಸ್ಸಿನ ಮೇಲೆ ಉಳಿದುಕೊಂಡು ಬಂದಿದೆ, ಈ ಮಹಾಲಕ್ಷ್ಮೀ ಬಾವಿಯಲ್ಲಿ ಊರಿನ ಜನರ ಹಿತಕ್ಕಾಗಿ ತಾನೇ ಮುಂದೆ ನಿಂತು ತನ್ನ ಮಗಳು ಮಹಾಲಕ್ಷ್ಮೀಯನ್ನೇ ಬಲಿ ಕೊಡುವ

ದೃಶ್ಯ ನೋಡಿದರೆ ಎಂತಹ ಕಲ್ಲೆದೆಯವರಿಗೂ ದುಃಖ ಬರುವದುಂಟು. ಆ ಬಾಲಿಕಿ ಲಕ್ಷ್ಮಿಗೆ ಯಾವ ಅರಿವನ್ನೂ ಕೊಡದೆ ಅವಳಿಗೆ ಬಲಿ ಕೊಡುತ್ತಾರೆ.

ಯಾರಿಗೂ ಬಲಿ ಕೊಡುವ ಸುದ್ದಿ ತಿಳಿಸದೆ ಅಂದು ಡಂಗುರ ಸಾರಿದರು. ನಾಳೆ ಅಮಾವಾಸೆ ದಿವಸ ಮಧ್ಯಾಹ್ನ 12 ಗಂಟೆಗೆ ಬಾವಿಯ ಪೂಜೆ ನೆರವೇರುವದು. ಕಾರಣ ಎಲ್ಲರೂ ಬರಬೇಕೆಂದು ಹೇಳಿದರು. ಅಲ್ಲದೆ ಎಲ್ಲಾ ಮುತ್ತೈದೆಯರು ಆರತಿ ತೆಗೆದುಕೊಂಡು ಬರಬೇಕೆಂದು ಸಾರಿದರು.

ಮರುದಿವಸ ನಡಗೇರಿ ಸರದಾರನು ತನ್ನ ಹೆಂಡತಿಗೆ ಬೇಗನೆ ಎಚ್ಚರಗೊಳಿಸಿ ನಮ್ಮ ಮಗಳು ಲಕ್ಷ್ಮಿಗೂ ಬಾವಿ ಪೂಜೆಗೆ ಕಳಿಸೋಣ ಬೇಗ ಅವಳಿಗೆ ಸ್ನಾನ ಮಾಡಿಸು ಎಂದು ಹೇಳಿ ನಸುಕಿನ ಸಕ್ಕರೆ ನಿದ್ದೆಯಲ್ಲಿದ್ದ ಮಗಳು ಲಕ್ಷ್ಮಿಗೆ ಎಚ್ಚರಿಸಿ ಬೇಗನೆ ಸ್ನಾನ ಮಾಡಿ ಎಲ್ಲಾ ದೇವರಿಗೂ ಹೋಗಿ ಬಾ ಎಂದು ಹೇಳಿ ಮಗಳ ಮುಖವನ್ನೇ ನೋಡುತ್ತಾ, ಮುದ್ದಿಸುತ್ತಾ ತನಗಾದ ದುಃಖವನ್ನು ನುಂಗಿ ಧೈರ್ಯ ತಂದು ಕೊಂಡನು,

ಮನೆಯ ಮುಂದೆ ಹಲಿಗೆ, ಬಾಜಿ ಬಜಂತ್ರಿಯವರ ಸಪ್ಪಳ ಕೇಳಿ ಎದೆಯೊಳಗೆ ಅಪಾರ ಸಂಕಟವಾಯಿತು. ಆದರೂ ಮಗಳ ಮುದ್ದು ಮುಖಕ್ಕೆ ಕೊನೆಯ ಚುಂಬನವಿತ್ತು ದುಃಖ ತಡೆಯದೆ ಬಂದ ಕಣ್ಣೀರಿನ ಹನಿಗಳನ್ನು ಒರೆಸುತ್ತಾ ಮಗಳಿಗೆ ಮೆರವಣಿಗೆಯಲ್ಲಿ ಪಾಲುಗೊಳ್ಳಲು ತಿಳಿಸಿದನು. ಗಂಡನ ಮುಖದ ಭಾವನೆ ಬದಲಾಗಿರುವದನ್ನು ಕಂಡು ಗಂಡನಿಗೆ ಯಾಕ್ರಿ ಹೀಗೇಕೆ ಎಂದು ವಿಚಾರಿಸಿದಾಗ ದುಃಖದ ಮಡುವಿನಿಂದ ಎಚ್ಚೆತ್ತು–ಏನಿಲ್ಲಾ ಕಣ್ಣಲ್ಲಿ ಧೂಳು ಬಿತ್ತು ಅದಕ್ಕೆ ಕಣ್ಣೀರು ಎಂದು ಮರೆಮಾಚಿದನು, ಮೆರವಣಿಗೆ ಊರಿನ ಪ್ರಮುಖ ರಸ್ತೆಗಳ ಮೂಲಕ ಸಾಗುತ್ತಿತ್ತು.

ಊರಿನ ಪಂಚ ಕಮೀಟಿಯವರು ಇಬ್ಬರು ಮುತ್ತೈದೆಯರಿಗೆ ಪೂಜೆಯ ವಿಧಾನ ಹಾಗೂ ಒಳಗಡೆ ಲಕ್ಷ್ಮಿಯ ಮೂರ್ತಿಯ ವಿಚಾರ ಹಾಗೂ ಪೂಜೆ ಮಾಡಿ ಲಕ್ಷ್ಮಿಗೆ ಮೇಲೆ ಹೋಗಲು ತಿಳಿಸಿ, ಆ ಮೂರ್ತಿಯ ಕೈಯಲ್ಲಿ ಕುಂಕುಮ ಭರಣಿ ಹಾಗೂ ತಾಮ್ರದ ತಂಬಿಗೆ ಬಿಟ್ಟು ಬಂದು ಲಕ್ಷ್ಮಿಗೆ ಅವುಗಳನ್ನು ತರಲು ತಿಳಿಸಿರಿ ಎಂದು ಮೊದಲೇ ಸೂಚನೆ ಕೊಟ್ಟಿದ್ದರು.

ಊರ ತುಂಬಾ ಮುತ್ತೈದೆಯರ ಹಾಗೂ ಲಕ್ಷ್ಮಿಯ ಮೆರವಣಿಗೆ ಬರುತ್ತಲಿತ್ತು. ಊರಿನ ಸಿದ್ಧರಾಮೇಶ್ವರ, ಮಲ್ಲಿಕಾರ್ಜುನ. ಚೌಡೇಶ್ವರಿ ದೇವಿಗೆ

ಟೆಂಗು, ಎಣ್ಣೆ ಕೊಟ್ಟು ಮೆರವಣಿಗೆ ಬಾವಿಯ ಕಡೆ ಹೊರಟಿತು. ಭರದಿಂದ ಬಾರಿಸುತ್ತಿರುವ ಡೊಳ್ಳಿನ ಪೆಟ್ಟು ಆ ಸರದಾರನ ಎದೆಯೊಳಗೆ ಬಾರಿಸಿದಂತಾಗುತ್ತಿತ್ತು. ಮದ್ಯಾಹ್ನ 12–30 ಗಂಟೆಗೆ ಸ್ವಾಮಿಯವರ ಆದೇಶದಂತೆ ಪೂಜೆ ಪ್ರಾರಂಭವಾಯಿತು,

ಮೊದಲೇ ತಿಳಿಸಿದ ಕಾರಣ ಊರಿಗೆ ಊರೇ ಎಲ್ಲಾ ಜನರು ಬಾವಿ ಪೂಜೆಯ ಸಲುವಾಗಿ ಬಂದು ನಿಂತಿದ್ದರು. ಒಳ್ಳೆಯ ಕಟ್ಟಡವಿರುವ ಬಾವಿ, ತುಂಬಾ ವಿಶಾಲವಾಗಿರುವದು. ಹೆಣ್ಣು ಗಂಡು ಎನ್ನದೆ ಸಾವಿರಾರು ಜನರು ಪೂಜೆ ನೋಡಲು ನೆರೆದಿದ್ದರು. ಮಹಾಲಕ್ಷ್ಮಿಯ ತಾಯಿ ಹತ್ತಿರ ಕೆಲವು ಪಂಚರು ಇವಳ ರಕ್ಷಣೆಗೆ ನಿಂತಿದ್ದರು, ಕೆಲವರು ಸರದಾರನ ಹತ್ತಿರ ನಿಂತಿದ್ದರು, ಊದು ವದು, ಭಾರಿಸುವದು ಹಾಗೇ ನಡೆದಿತ್ತು. ಮಹಾಲಕ್ಷ್ಮಿಯ ಮುಖದಲ್ಲಿ ಕಾಂತಿ ಚಿಮ್ಮುತ್ತಲಿತ್ತು. ತಾಯಿ ಲಕ್ಷ್ಮಿಯನ್ನು ಹಾಗೇ ನೋಡುತ್ತಲೆ ನಿಂತಿದ್ದಳು. ನಡಗೇರಿ ಸರದಾರನು ತನ್ನ ಮಗಳ ಅಂತಿಮ ದರ್ಶನಕ್ಕಾಗಿ ನೋಡುತ್ತಲೇ ಇದ್ದ. ಮುತ್ತೈದೆಯರಿಂದ ಆ ಲಕ್ಷ್ಮೀ ಮೂರ್ತಿಗೆ ಪೂಜೆ ವಿಜೃಂಭಣೆಯಿಂದ ನಡೆದಿತ್ತು, ಆ ಲಕ್ಷ್ಮಿಯ ಮೂರ್ತಿಯ ಬಲಗೈಯಲ್ಲಿ ಕುಂಕುಮ ಭರಣಿ ಹಾಗೂ ಎಡಗೈಯಲ್ಲಿ ತಾಮ್ರದ ತಂಬಿಗೆಯಿಟ್ಟು ಪೂಜೆ ಮಾಡಿ, ಮುತ್ತೈದಿಯರು ಲಕ್ಷ್ಮೀ ಕಡೆಯಿಂದ ಊಟ ಬಡಿಸಿಕೊಂಡು ಊಟ ಮಾಡಿ. ಲಕ್ಷ್ಮೀಗೂ ಊಟ ಬಡಿಸಿ ಎಲ್ಲರೂ ಆ ಮೂರ್ತಿಗೆ ನಮಸ್ಕಾರ ಮಾಡಿ ಲಕ್ಷ್ಮಿಗೆ ಮೇಲೆ ಹೋಗಲು ತಿಳಿಸಿ, ಕುಂಕುಮ ಭರಣಿ ಹಾಗೂ ತಾಮ್ರದ ತಂಬಿಗೆ ಮರೆತು ಬಂದವರಂತೆ ನಟಿಸಿ ಮೇಲೆ ಬಂದು, ಲಕ್ಷ್ಮೀ ಒಳಗಡೆ ಕುಂಕುಮ ಭರಣಿ ಹಾಗೂ ತಾಮ್ರದ ತಂಬಿಗೆ ಬಿಟ್ಟು ಬಂದಿದ್ದೇವೆ. ತಗೆದುಕೊಂಲು ಬಾ ಎಂದು ಕಳಿಸಿದರು. ಕಾಂತಿ ತುಂಬಿದ ಮುಖ ನಗುತ್ತಾ ಓಡುತ್ತಾ ಓಡುತ್ತಾ ಬಾವಿಯ ಮೆಟ್ಟಲು ಇಳಿಯುತ್ತಿರುವಾಗ ತಂದೆ ನಡಗೇರಿ ಸರದಾರ ಮತ್ತೊಮ್ಮೆ ಮಗಳ ಮುಖ ನೋಡಿ ದೂರ ಸರಿದು ನಿಂತನು.

"ಲಕ್ಷ್ಮೀಯು ಎದೆಗುಂದದೆ ಓಡುತ್ತಾ ಓಡುತ್ತಾ ಮೆಟ್ಟಲು ಇಳಿದು ಒಳಗೆ ಹೋಗಿ ಆ ಲಕ್ಷ್ಮೀ ಮೂರ್ತಿಯ ಕೈಯಲ್ಲಿದ್ದ ಕುಂಕುಮ ಭರಣಿ ಬಲಗೈಯಲ್ಲಿ ತಾಮ್ರದ ತಂಬಿಗೆ ಎಡಗೈಯಲ್ಲಿ ಹಿಡಿದು ಮೊದಲನೇ ಮೆಟ್ಟಿಲು ಏರುವವರೊಳಗೆ ಪಾದಕ್ಕೆ ನೀರು. ಎರಡನೇ ಮೆಟ್ಟಿಲು ಏರುವವರೊಳಗೆ ಟೊಂಕಿಗೆ ನೀರು, ಮೂರನೇ ಮೆಟ್ಟಿಲು ಏರುವದರಲ್ಲಿ ಲಕ್ಷ್ಮಿಯು ಗಂಗೆಯಲ್ಲಿ ಐಕ್ಯವಾದಳು." ಅದನ್ನು ಕಂಡ ಸಾವಿರಾರು ಜನರು ಗಾಬರಿಯಾದರು, ಮಹಾಲಕ್ಷ್ಮಿಗೆ ಜೈವಾಗಲಿ ಎಂದು ಜೈಕಾರ ಹಾಕಿದರು.

ಈ ದೃಶ್ಯವನ್ನು ನೋಡಿ ತಾಯಿಯ ಗೋಳು ಹೇಳತೀರದಾಯಿತು. ಒಂದೇ ಸವನೆ ಚೀರುತ್ತ ತಾನು ಭಾವಿಯಲ್ಲಿ ಹಾರಲು ಪ್ರಯತ್ನಿಸುತ್ತಿದ್ದಳು. ಪಂಚರು ಅವಳನ್ನು ರಕ್ಷಿಸಿ, ತಾಯಿ ಅವಳು ಮಾಡಿದ ಈ ಬಲಿ ಇಡೀ ಜೀವಕೋಟಿಗೆ ನೀರು ಣಿಸಿದ ಮಹಾಪುಣ್ಯ ನಿಮ್ಮದು, ಸರದಾರರು ಊರಿನ ಹಿತಕ್ಕಾಗಿ ತನ್ನ ಕರುಳನ್ನೆ ಧಾರೆ ಎರೆದು ಕೊಟ್ಟ ಮಹಾ ದಾನಿ. ಅವನು ನಮ್ಮ ಊರಿನ ಪೂಜ್ಯ ವ್ಯಕ್ತಿ. ಈ ಲಕ್ಷ್ಮೀಯ ಹೆಸರು ಅಜರಾಮರವಾಗಲಿಕ್ಕೆ ಈ ಭಾವಿಗೆ "ಮಹಾ ಲಕ್ಷ್ಮೀ ಬಾವಿ" ಎಂದು ನಾಮಕರಣ ಮಾಡೋಣ. ಯಾರು ಮಾಡದ್ದನ್ನು ನನ್ನ ಮಗಳು ಮಾಡಿದ್ದಾಳೆ ಊರಿನ ಹಿತದ ಸಲುವಾಗಿ ನನ್ನ ಮಗಳು ಸಾರ್ಥಕವಾಗಿದ್ದಾಳೆ. ಎಂದು ಹೇಳಿ ತನ್ನ ದುಃಖದ ಒಡಲನ್ನು ಮುಚ್ಚಿ ಜನರೆದುರು ದಂಗುಬಡಿದವರಂತೆ ಕುಳಿತರು.

ಊರಿನ ಹಿತಕ್ಕಾಗಿ ಸರದಾರ ಎಂತಹ ಕೆಲಸ ಮಾಡಿದ್ದಾನೆ ಎಂಬುವದು ಊರಿನ ಜನರಿಗಲ್ಲದೆ ಸುತ್ತಲಿನ ಊರುಗಳ ಜನರಿಗೂ ಈ ಸುದ್ದಿ ಹಬ್ಬಿ ಊರಿನ ಅಭಿಮಾನ ಯಾವ ರೀತಿ ಇತ್ತು ಎಂದು ಹಾಗೂ ನಡಗೇರಿ ಸರದಾರನ ತ್ಯಾಗಮಯ ಜೀವನದ ಬಗ್ಗೆ ಪ್ರಶಂಸೆ ಪ್ರಾರಂಭವಾಗಿತ್ತು. ಇಂತಹ ಐತಿಹ್ಯಗಳು ಅನೇಕ ಇದ್ದರೂ ತನ್ನ ಸ್ವಂತ ಮಗಳನ್ನೇ ಬಲಿ ಕೊಟ್ಟ ಐತಿಹ್ಯಗಳು ಸಿಗುವದು ವಿರಳ, ಇಂತಹ ಮಹತ್ವದ ಕಾರ್ಯ ಮಾಡಿದ ನಡಗೇರಿ ಹಟಗಾರ ಮನೆತನದ ಸರದಾರನನ್ನು ಊರಿನ ಜನರು ಒಳ್ಳೆಯ ದೃಷ್ಟಿಯಿಂದ ನೋಡತೊಡಗಿದರು. ಸರದಾರನು ಸರಿ ಹೋಗಿ 30, 35 ವರ್ಷಗಳೇ ಆಗಿವೆ ಎಂದು ವಕ್ತಾರರು ಹೇಳಿದ್ದಾರೆ. ಅಂದಿನಿಂದ ಆತನಿಗೆ ಊರಿನ ಯಾವುದೇ ಕಾರ್ಯದಲ್ಲೂ ಒಂದು ಸ್ಥಾನಖಾಲಿಯಾಗೇ ಇರುತ್ತಿತ್ತು. ಜನರು ಗೌರವ ಕೊಡುತ್ತಿದ್ದರು.

ಅಂದಿನಿಂದ ಆ ಭಾವಿಗೆ "ಮಹಾಲಕ್ಷ್ಮೀ ಬಾವಿ" ಎಂದು ಕರೆಯುತ್ತಾರೆ. ಆದರೆ ಅದು ಈಗ ಜನರ ಬಾಯಲ್ಲಿ 'ಮಹಾಲಾಶ ಬಾವಿ' ಎಂದಾಗಿದೆ. ಈ ಭಾವಿಗೆ ಒಳ್ಳೆ ಕಟ್ಟಡವಿದೆ, ನೀರು ಒಳ್ಳೆ ರುಚಿಕಟ್ಟಾಗಿವೆ. ಅಂದಿನಿಂದ ಇಂದಿನವರೆಗೂ ಬಾವಿ ನೀರು ಸರಿದಿಲ್ಲಾ. ಈಗ ಅದರ ನೀರು ಊರಿನ ನೀರು ವಿತರಣೆಗಾಗಿ ನಳಗಳಿಗೆ ಬಿಡುತ್ತಾರೆ. ಈ ಬಾವಿಯ ಬಗ್ಗೆ ಒಳ್ಳೆ ಭಕ್ತಿ ಜನರಲ್ಲಿ ಮೂಡಿದೆ. ಈಗಲೂ ಈ ಭಾವಿಗೆ ಯಾವಾಗಲೂ ಪೂಜೆ ಪುನಸ್ಕಾರ. ಅದರಲ್ಲೂ ಅಮವಾಸ್ಯೆಗೆ ವಿಶೇಷ ಪೂಜೆ ಎಲ್ಲಾ ಇಲ್ಲೆ ನಡೆಯುತ್ತವೆ. ಊರಿನ ಜನರಲ್ಲಿ ಈ ಭಾವಿಯ ಬಗ್ಗೆ ಭಯ ಭಕ್ತಿ ತುಂಬಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುತ್ತಿದೆ.

ಅನಾಥ ಮರ

ಪ್ರಭು ಖಾನಾಪುರೆ

ನಾನು—
ಹಾದಿ ಬದಿಗೆದ್ದ ಅನಾಥ ಮರ
ಹೆತ್ತವರೆ ನನ್ನ ಸುತ್ತ ಬೇಲಿ ಬಡಿಯಬೇಕೆ ?

ನಿತ್ಯ ಸಾವಿರ ಜನ ನನ್ನ ಹತ್ತಿರ ಬರುತ್ತಾರೆ
ಯಾರೊಬ್ಬರೂ ನನ್ನೊಡನೆ ಮಾತನಾಡುವುದಿಲ್ಲ
ನನ್ನ ಸುಖ ದುಃಖಗಳನ್ನೊಂದೂ ವಿಚಾರಿಸುವುದಿಲ್ಲ.

ಬಂದವರು ಕತ್ತಲೆಯ ಹುತ್ತಿನೊಳಗೆ ಸತ್ಯವನ್ನು ಮುಚ್ಚಿಟ್ಟು
ತಮ್ಮ ಕ್ರೂರ ಮನಸ್ಸಿನ ಅಸಂಗತ ಭಾವನೆಗಳನ್ನು
ನನ್ನ ಹೊಟ್ಟೆಗೆ ತುರುಕಿ ಮರೆಯಾಗುತ್ತಾರೆ.
ತಮ್ಮ ನೆರಳಿಗೂ ತಾವು ಹೊರೆಯಾಗುತ್ತಾರೆ

ಹಾದಿ ಹೋಕರೆಲ್ಲ ನನ್ನ ನೆರಳಿಗೆ ಬಂದು ಕೂತು
ಪ್ರೀತಿ ವಿಶ್ವಾಸಗಳನ್ನು ಅಲ್ಲಿಯೆ ಹೂತು
ಇಳಬಿದ್ದ ಟೊಂಗೆಗಳಿಗೆ ಜೀಕಿ ಆಯಾಸದಿಂದ ತೇಕಿ
ಒಂದೊಂದೆ ಎಲೆಗಳನ್ನು ಕಡಿದು ಕೊಲ್ಲುತ್ತಾ ಹೋಗುತ್ತಾರೆ.

ಯಾರು ನೆಟ್ಟು ನೀರುಣಿಸಿ ಬೆಳಸಿದರೋ ನನ್ನ
ಯಾವ ತಪ್ಪಿಗೆ ಶಿಕ್ಷಿಸುವರೋ ಹಿಂಗ

ಈ ಹಿಂದೆ ನನ್ನ ಕಥೆ ಕೇಳಿ
ಅತ್ತವರೆಷ್ಟೋ ಸತ್ತವರಷ್ಟೋ ಲೆಕ್ಕವಿಲ್ಲ
ಆದರೀಗ ನಾ ಕಟ್ಟಿದ ನನ್ನ ಕಥೆಯನ್ನು
ನಾನೇ ಹೇಳಬೇಕು, ನಾನೇ ಕೇಳಬೇಕು.

ನನ್ನ ಬದುಕಿನಲ್ಲಿ ಹೊಕ್ಕ ಸಂಗತಿಗಳೆಲ್ಲ
ಕಾವ್ಯ ಪುರಾಣ ಪುಣ್ಯಕಥೆ ಇತಿಹಾಸವಾಗಿ
ಜನರ ಮನಸ್ಸು ಸೇರಿ ಹೋಗಿವೆ

ದಶರಥರಾಜ ನನ್ನ ನೆರಳಿಗೆ ನಿಂತೇ
ಶಬ್ದಭೇದಿಬಾಣ ಬಿಟ್ಟು
ಶ್ರವಣಕುಮಾರನ ಪ್ರಾಣ ತಿಂದ

ಅವತಾರಿ ಪುರುಷ ರಾಮ
ಇಲ್ಲೇ ಮರೆಯಾಗಿ ನಿಂತು ವಾಲಿಯನ್ನು ಕೊಂದ
ಗೋಡ್ಸೆ ನನಗೆ ಗುಂಡಿಟ್ಟೇ ಗುರಿ ಕಲಿತ
ಏಕಲವ್ಯ ಮಾಡಿದ ದ್ರೋಣನ ಮೂರ್ತಿ
ಇನ್ನೂ ನನ್ನ ಬುಡದ ಆಸರೆ ಪಡೆದೆ ಬದುಕುತ್ತಿದೇ

ನನ್ನ ಈ ಕಥೆಗಳು ಕೇಳಿ
ನಿಮ್ಮ ಮನಸಿಗೆ ವ್ಯಥೆಯಾಗಬಹುದು
ಸತ್ಯ ಯಾರಿಂದಲೂ ಮುಚ್ಚಿಡಲು ಸಾಧ್ಯವಿಲ್ಲ
ಕಾಲಗರ್ಭದಿಂದಯೆತ್ತಿ ತಂದ ನನ್ನ ಜೀವ
ಬಯಲು ಬಂಧಿಖಾನೆಯಲ್ಲಿ ಉಸಿರುಗಟ್ಟಿದೆ,

ನನ್ನ ಕೆಳಗೆ ಹಾದು ಹೋದವರೆಲ್ಲ
ಭಯದ ಪುಂಗಿಯೂದುತ್ತ ಮನೆ ಸೇರುತ್ತಾರೆ.
ಅಳುವ ಮಕ್ಕಳಿಗೆ ಅಂಜಿಸುವ ಭೂತ ಮಾಡುತ್ತಾರೆ
ಹೀಗಾಗಿ ನನ್ನ ಹತ್ತಿರ ಯಾರೂ ಸುಳಿಯುವುದಿಲ್ಲ.
ಸುಳಿದರೂ ಹೆಚ್ಚು ಹೊತ್ತು ಉಳಿಯುವುದಿಲ್ಲ.

ನನ್ನಲ್ಲಿ ಎಷ್ಟೇ ಒಳ್ಳೆಯದಿದ್ದರೂ
ಅದು ದುಷ್ಟರ ಪಾಲ್ಲೆ

ರಾಜಕೀಯ ಅಂದು-ಇಂದು

ವಿಶು ಸತ್ಯಂಪೇಟೆ

ಅಂದು
ದುರ್ಬಲನ ಮೇಲೆ ಸಬಲನದೇ ಅಧಿಪತ್ಯ
ಯಾರದೋ ಸಿಂಹಾಸನಕ್ಕೆ ಮತ್ತ್ಯಾರದೋ ಕಣ್ಣು
ಕರುಳು ಬಳಿಯುನ್ನು ಮೀರಿದ ರಾಕ್ಷಸತ್ವ

ಇಂದು
ಅಂದಿನ ತಂತ್ರಕ್ಕೆ ಹೊಸ ರೂಪು
ರೇಶ್ಮಿಯ ಎಳೆಯಲ್ಲಿ ಕುತ್ತಿಗೆಗೆ ಹಗ್ಗ
ಪ್ರಜಾಪ್ರಭುತ್ವದಲ್ಲೂ ಹಿಟ್ಲರಗನದ್ದೇ ರಾಜ್ಯ

ಅಂದು
ಬಾನಾಡಿ ಹಕ್ಕಿಗಳ ರೆಕ್ಕೆ ಕತ್ತರಿಸಿದ್ದು
ಕಾರ್ಗತ್ತಲಲ್ಲೇ ಕೊಳೆ ಹಾಕಿದ್ದು
ಜೀವಚ್ಛವಗಳಿಂದಲೇ ಅರಮನೆಗಳ ಕಟ್ಟಿದ್ದು ಕತೆ ಅಲ್ಲ

ಇಂದು
ಅಡಕತ್ತಿನಲ್ಲಿ ಸಿಕ್ಕಿಸಿ ನಾಲಿಗೆ ಕತ್ತರಿಸುತ್ತಾರೆ
ಕೇಳಿ ನೋಡಿಯೂ ಬಾಯ್ಬಿಡದ ದಿಗ್ಬಂಧನ
ನಮ್ಮ ಅವನತಿಯಲ್ಲೇ ಅವರ ಏಳಿಗೆ

ಅಂದು
ವೇದ ಶಾಸ್ತ್ರ ಉಪನಿಷತ್‌ನ ತಾಳ ಮೇಳಗಳ
ಲಯಕ್ಕೆ ಹೆಜ್ಜೆ ಇಕ್ಕಿದವನೆ ಅರಸ
ಸರ್ವಕ್ಕೂ ಶಾಸ್ತ್ರಿಗರನೇ ಸೂತ್ರದಾರ !

ಇಂದು
ಕಾಯ್ದೆ ಕಟ್ಟಳೆಗಳ ಜೇಡ ಬಲೆ ಹೆಣೆದು
ಉಸುರುಸುರಿಗೂ ನಿರ್ಬಂಧದ ಕಟ್ಟು ಕಟ್ಟಿ
ಪಟ ಹಾರಾಡಿಸುವ ಸೆಕರೇಟ್ರಿಗಳದ್ದೇ ದರ್ಭಾರು

ಸೃಜನಶೀಲತೆ-ಒಂದು ಕ್ರಿಯಾ ವಿವೇಚನೆ

ಡಾ. ಪಿ. ಕೆ. ಖಂಡೋಬಾ

ಮಾನವನ ಬದುಕಿನ ನಿರಂತರತೆಯಲ್ಲಿ ಆತನ ಮನಸ್ಸಿನಲ್ಲಿನ ಭಾವನೆಗಳು ಅಭಿವ್ಯಕ್ತಗೊಂಡು ತನ್ಮೂಲಕ ಮನಸ್ಸು ಹಗುರಗೊಳ್ಳುವಿಕೆಯ ಕ್ರಿಯೆ ನಡೆಯುವಂಥ ನೂತನ ಸೃಷ್ಟಿಯ ಒಂದು ಕ್ರಿಯೆಯನ್ನೇ ನಾವು 'ಸೃಜನ' ಎನ್ನುತ್ತೇವೆ. ಯಾವುದೇ ಒಂದು ಘಟನೆ. ವಸ್ತು ಸಂಗತಿಗಳು ಮನಸ್ಸಿನ ಮೇಲೆ ಪ್ರಭಾವ ಬೀರಿ, ಆ ಪ್ರಭಾವದ ಪ್ರತಿಯಾತ್ಮಕ ವ್ಯಕ್ತರೂಪವಾಗಿ ಹೊರಬರುವ ಅಭಿವ್ಯಕ್ತಿಯು ಮಾಧ್ಯಮಕ್ಕೆ ಅಳವಡಿಸಲ್ಪಡುವ ಕ್ರಿಯೆಯೇ 'ಸೃಜನಶೀಲತೆ'ಯಾಗಿದೆ.

ಅನುಭವ ಎಂಬುದು ಸಾರ್ವತ್ರಿಕವಾಗಿದ್ದು, ಎಲ್ಲ ಜೀವಿಗಳಲ್ಲೂ ವೇದ್ಯವಾಗುತ್ತದೆ. ಆದರೆ ಅನುಭವಿಸಿದ್ದೆಲ್ಲವನ್ನೂ ಅಭಿವ್ಯಕ್ತಿಸಲು, ಅದರಲ್ಲೂ ಕಲಾತ್ಮಕವಾಗಿ ಅಭಿವ್ಯಕ್ತಿಸಲು ಕೆಲವು ವಿಶಿಷ್ಟ ಪ್ರೇರಣಾತ್ಮಕ ಅಂಶಗಳು ಬೇಕಾಗುತ್ತವೆ. ಇಂಥಲ್ಲಿ ಮೂಡಿಬಂದ ಈ ಸೃಜನ ಕ್ರಿಯೆ ವಿವಿಧ ಮಾಧ್ಯಮಗಳ ಮೂಲಕ ಹೊರಬೀಳುತ್ತದೆ.

ತಾನು ಕಂಡುಂಡ ಅನುಭವ ಆನಂದ ಇತರರಿಗೂ ಲಭಿಸಿ, ತನ್ಮೂಲಕ ಅದು ತನ್ನ ಸಾರ್ಥಕತೆಯನ್ನು ಪಡೆದುಕೊಳ್ಳುವಲ್ಲಿ ಈ ಸೃಜನ ಸಹಕಾರಿಯಾಗಿದೆ. ಅಭಿವ್ಯಕ್ತಿ ಎಂಬ ಮಾನವನ ಮೂಲಭೂತ ಗುಣಕ್ಕೆ ಕಾರಣವಾಗಿರುವ ಒಂದು ಶಕ್ತಿಯಾಗಿ ಈ ಸೃಜನ ರೂಪುಗೊಳ್ಳುತ್ತದೆ.

'ರಸಾನುಭವದ ಸುಂದರ ಅಭಿವ್ಯಕ್ತಿ'ಯೆಂದೊ, ಶಬ್ದಾರ್ಥಗಳ ಸುಮಧುರ ದಾಂಪತ್ಯದಿಂದ ಭಾವನೆ ಎಂಬ ಹೆರಿಗೆಯೇ ಸಾಹಿತ್ಯ (ಬೇಂದ್ರೆ)ವಾಗುವಂಥ ಈ ಪ್ರಕ್ರಿಯೆಗೆ ಸೃಜನವೇ ಮೂಲಾಕಾರವಾಗಿದೆ, ಇಂಥ ಸೃಜನ ತಾನು ಹೊರಬರಲು ವಿವಿಧ ಮಾರ್ಗಗಳನ್ನು ಅನುಸರಿಸುತ್ತದೆ. ಇಲ್ಲಿ ಮೂಲ ಕಾರಕಶಕ್ತಿಯಾಗಿರುವ 'ಗ್ರಹಿಕೆ'ಯ ಪ್ರಮಾಣವನ್ನು ಅವಲಂಬಿಸಿದೆ.

ಮಾನವನ ಮನಸ್ಸಿನ ಭಾವನೆಗಳು ಶಬ್ದ-ಬಣ್ಣ-ಆಂಗಿಕದಂಥ ಮಾರ್ಗಗಳ ಮೂಲಕ ಈ ಸೃಜನಶೀಲತೆಯಿಂದಾಗಿ ಹೊರಹೊಮ್ಮುತ್ತವೆ. ಶಬ್ದಸೃಜನ ಶಿಲ್ಪ ಸೃಜನ, ಅಭಿನಯಾತ್ಮಕ ಸೃಜನ ಎಂದು ಮೂರು ಮುಖ್ಯ ಪ್ರಕಾರಗಳಾಗಿ ವಿಂಗಡಿಸಬಹುದು.

ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ ಇವುಗಳು ಮುಖ್ಯವಾಗಿ ಶಬ್ದ ಸೃಜನದ ರೂಪಗಳಾಗಿವೆ, ಒಂದು ಘಟನೆ ಕಾವ್ಯಕ್ಕೆ ಪ್ರೇರಣೆ ನೀಡಿದರೆ ಅದರ ಕಾರಣಗಳು ಕಥೆಗೆ ಪ್ರೇರಣೆ ನೀಡುತ್ತವೆ, ಆ ಘಟನೆಯನ್ನಾವರಿಸಿರುವ ಎಲ್ಲ ಮಜಲುಗಳನ್ನು ಅವಲೋಕಿಸುತ್ತ ಹೋದಾಗ 'ಕಾದಂಬರಿ' ರಚನೆಗೊಳ್ಳುತ್ತದೆ. 'ನಾಟಕ' ಎಂಬುದು ಶಬ್ದ ಮತ್ತು ಅಭಿನಯಾತ್ಮಕ ಸೃಜನಗಳೆರಡಕ್ಕೂ ಅನ್ವಯಿಸುತ್ತದೆ. ವಿಡಂಬನಾತ್ಮಕ ಹರಟೆಗಳೂ ಶಬ್ದ ಸೃಜನದಿಂದಾಗಿಯೇ ಮೂಡಿ ಬರುತ್ತವೆ. ಕಥೆ ಎಂಬುದು ಸಾಹಿತ್ಯ ಲೋಕದ ಬೆಳ್ಳಿಚುಕ್ಕೆಯಾಗಿದ್ದು, ಕುತೂಹಲವೇ ಅದರ ಸಾರವಾಗಿದೆ, ಸಣ್ಣಕತೆ ಎಂಬುದು ಇದರಲ್ಲಿ ಒಂದು ವಿಶಿಷ್ಟ ಪ್ರಕಾರವಾಗಿದ್ದು 'ಕಿರಿದರೊಳ್ ಪಿರಿದರ್ಥಂ ಪೇಳ್ವಂತೆ' ಎಂಬ ಮಾತಿಗೆ ಸಾಕ್ಷಿಯಾಗಿದ್ದು ತನ್ನ ಪುಟ್ಟ ಬಾಯಲ್ಲೆ ಈ ಕಥೆ ಮತ್ತು ಅದರ ಪರಿಣಾಮದ ಗಾತ್ರವನ್ನು ಸಾದೃಶ್ಯವಾಗಿ ನೀಡಲಾಗಿದೆ. ಇದ್ದಿದ್ದೆಲ್ಲವನ್ನು ಹೇಳಿಬಿಡೋಣ ಎಂಬಂಥ ಸ್ಥಿತಿಯಲ್ಲಿ 'ಮಹಾಕಾವ್ಯ'ದ ರಚನೆ ಸಾಧ್ಯವಾಗಿ, ಅದು ತನ್ನ ಸಮಕಾಲೀನ ಜನಾಂಗದ ಸಮಸ್ತ ಸತ್ವವನ್ನು ತನ್ನಲ್ಲಿ ಅಡಗಿಸಿಕೊಂಡೇ ಮೂಡಿ ಬಂದಿರುತ್ತದೆ. ಒಳ್ಳೇ ಕಾದಂಬರಿ ರಚನೆಗಿಂತ ಉತ್ತಮ ಪರಿಣಾಮ ಬೀರುವ ಸಣ್ಣಕತೆಯ ರಚನೆ ಕಷ್ಟ ಸಾಧ್ಯ ಎಂಬ ಮಾತು ಸಣ್ಣಕತೆಯ ರಚನಾ ಕೌಶಲ್ಯದ ಮಹತಿಯನ್ನು ಪ್ರತಿಪಾದಿಸುತ್ತದೆ. ಭವ್ಯತೆಗೆ ಪ್ರತೀಕವಾಗಿರುವ ಗೊಮ್ಮಟನ ಸೃಷ್ಟಿಗಿಂತಲೂ ಒಬ್ಬ ಶಿಲಾಬಾಲಿಕೆಯ ಸೃಷ್ಟಿ ಅತ್ಯಂತ ಕಷ್ಟವಾದದ್ದು; ಸೂಕ್ಷ್ಮವಾದದ್ದು, ಇನ್ನು ಮಹಾಕಾವ್ಯ ಎನ್ನುವುದು ಭವ್ಯತೆಯ ದರ್ಶನವಾದಾಗಲೇ ಮೂಡಿ ಬಂದು ಮಹೋನ್ನತಿಯ ಹಂತವನ್ನು ತಲುಪುತ್ತದೆ. ಹೀಗೆ ಕಾವ್ಯ, ಕಥೆ, ಕಾದಂಬರಿ ಮತ್ತು ಪ್ರಬಂಧಗಳ ಶಬ್ದಸೃಜನದ ಮುಖ್ಯ ರೂಪಗಳಾಗಿ ಮೂಡಿ ಬಂದಿವೆ. ಕಾವ್ಯವೇ ಸಾಹಿತ್ಯವೆಂಬಂತಿದ್ದ ಕಾಲದ ನಂತರ ಪಾಶ್ಚಾತ್ಯರ ಪ್ರಭಾವದಿಂದಾಗಿ ಇತ್ತೀಚೆಗೆ ಈ ವೈವಿಧ್ಯಮಯ ಪ್ರಕಾರಗಳು ಹುಟ್ಟಿಕೊಂಡುಬಂದಿವೆ. ವೈವಿಧ್ಯತೆಯಲ್ಲಿ 'ಏಕತೆ' ಎಂಬಂತೆ ಸೃಜನಶೀಲ ಭಾವನೆಗಳೇ ಈ ಎಲ್ಲ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡಿವೆ.

ಶಿಲ್ಪಸೃಜನಕ್ಕೆ ಶಿಲಾಬಾಲಿಕೆಯರು ಪುರಾಣ ಪುರುಷರುಗಳ ಚಿತ್ರಗಳು ಮೂಡಿಬಂದಿವೆ, ಕಗ್ಗಲ್ಲಲ್ಲೂ ಕಲೆಯನ್ನು ತುಂಬಿ ಅದನ್ನು ಕಲೆಯು ಬಲೆಯಾಗಿಸಿದ್ದು ಈ ಶಿಲ್ಪ ಸೃಜನದ ವಿಶಿಷ್ಟತೆಯಾಗಿದೆ. ಇಲ್ಲಿನ ಸೂಕ್ಷ್ಮತೆ-ನಯಗಾರಿಕೆ-ತಲ್ಲೀನತೆಗಳು ಮನಸೆಳೆಯುತ್ತವೆ, ಮುದ ನೀಡುತ್ತವೆ, ಅನಕ್ಷರಸ್ಥರಿಗೆ ಇದು ತುಂಬಾ ಪ್ರಯೋಜನಕಾರಿಯಾಗಿದೆ, ಮೂಕ ಸಾಕ್ಷಿಗಳಾಗಿ ನಿಂತು ಕಲೆಯ ವೈಭವದ ಪ್ರತೀಕಗಳಾಗಿ ಮೂಡಿಬರುವಲ್ಲಿ ಈ ಶಿಲ್ಪಸೃಜನದ ಪ್ರಭಾವವನ್ನು ನಾವು ಕಾಣಬಹುದಾಗಿದೆ. 'ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ, ಶಿಲೆಯಲ್ಲಿವೀ

ಗುಡಿಯು ಕಲೆಯು ಬಲೆಯು' ಎಂಬ ರಾಷ್ಟ್ರಕವಿ ಕುವೆಂಪುರವರ ಸಾಲುಗಳು 'ಶಿಲ್ಪ ಸೃಜನದ' ಪ್ರಹೋನ್ನತಿಗೆ ಸಾಕ್ಷಿಯಾಗಿ ಮೂಡಿ ಬಂದಿವೆ.

ಅಂಗೀಕವಾಗಿ ಸೃಜನ ಅಭಿನಯದ ಮೂಲಕ ತನ್ನ ಭಾವನೆಗಳನ್ನು ಹೊರ ಹಾಕುತ್ತದೆ, ನಾಟ್ಯ ಇದಕ್ಕೆ ಉತ್ತಮ ಉದಾಹರಣೆಯಾಗಿದ್ದು ಮುಂದೆ ಇದರ ಪ್ರೇರಣೆಗನುಸರಿಸಿ ಚಲನಚಿತ್ರ ಮಾಧ್ಯಮ ಬೆಳೆದುಬಂದಿತು.

ಹೀಗೆ ಸೃಜನವು ಶಬ್ದ-ಶಿಲ್ಪ-ಅಂಗಿಕ ಎಂದು ಮುಖ್ಯವಾಗಿ ಮೂರು ಪ್ರಕಾರಗಳಲ್ಲಿ ಹೊರ ಹೊಮ್ಮುತ್ತದೆ. ಇದು ಕೆಲವರಲ್ಲಿ ಮಾತ್ರವೇ 'ಏಕೆ ಸಾಧ್ಯ ವಾಗುತ್ತದೆ ಎಂದರೆ ಇದಕ್ಕೆ ಬೇಕಾದಂಥ ಅರ್ಹತೆಗಳು ಅವನಲ್ಲಿರುವುದೇ ಮೂಲ ಕಾರಣವಾಗಿದೆ. ಅಮೂರ್ತದಲ್ಲಿ ಮೂರ್ತವನ್ನು ಸೃಷ್ಟಿಸುವಂಥ ವೈಶಿಷ್ಟತೆಗೆ ಸೃಜನಶೀಲ ವ್ಯಕ್ತಿ ಹೆಸರಾಗಿದ್ದಾನೆ. ಅವನಲ್ಲಿ ಸಂವೇದನಾಶೀಲತೆ, ಪ್ರಪಂಚದ ಪರಿಸರ ಪ್ರಜ್ಞೆ, ಧ್ಯಾನ, ಮನನ, ಚಿಂತನ ಮಂಥನ ಹಾಗೂ ಸ್ಪಂದನಶೀಲತೆ ಮೊದ ಲಾದವುಗಳು ಇರಬೇಕಾಗುತ್ತದೆ, ಇವುಗಳಿಗೆ ಪ್ರತಿಭೆ ವ್ಯತ್ಪತ್ತಿ ಮತ್ತು ಸತತಾಭ್ಯಾಸ ಗಳು ಮೂಲ ಅಂಶಗಳಾಗಿವೆ. ಇವುಗಳನ್ನು ತನ್ನ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡಾಗ ಸೃಜನಶೀಲತೆ ಮೂಡಿಬರುತ್ತದೆ, ಕಲ್ಪನಾಶಕ್ತಿ ಎಂಬುದು ಇಲ್ಲಿ ಪ್ರಾಮುಖ್ಯತೆ ಯನ್ನು ಪಡೆದುಕೊಳ್ಳುತ್ತದೆ.

ಸೃಜನಶೀಲನಾದವನು ಮೂಲತಃ ಸೂಕ್ಷ್ಮಸಂವೇದನಾ ಶಕ್ತಿಯನ್ನು ಹೊಂದಿರಬೇಕಾಗುತ್ತದೆ. ಸಮಾಜಕ್ಕೆ ಸೃಜನಶೀಲ ವ್ಯಕ್ತಿಯಷ್ಟು ಮತ್ತಾರೂ ಸ್ಪಂದಿಸಲಾರರು, ಸೂಕ್ಷ್ಮಸಂವೇದನೆ. ಚಿಂತನಶೀಲ ಪ್ರವೃತ್ತಿ, ತುಡಿತ-ಮಿಡಿತಗಳು ಪ್ರತಿಕ್ರಿಯಾತ್ಮಕ ಜಾಗ್ರತಿಗಳು ಈತನ ಅರ್ಹತೆಗಳಲ್ಲಿ ಸೇರಿವೆ. ಕಲೆಯ ಬಲೆಯನ್ನು ನಿರ್ಮಿಸಿ ಹೊರಡುವುದು ಸುಲಭದ ಮಾತೇನಲ್ಲ. ಪ್ರತಿಭೆಯ ಕಾರ್ಯ ಇಲ್ಲಿ ಮಹತ್ವ ದ್ದಾಗಿದೆ. ಇದು ಸೃಜನ ಶೀಲರನ್ನು ಸಾಮಾನ್ಯರಿಂದ ಬೇರ್ಪಡಿಸಿ ಅವರಿಗೆ ಒಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಡುವಲ್ಲಿ ಸಹಾಯಕಾರಿಯಾಗಿದೆ.

ಸೃಜನಶೀಲನಾಗಲು ಕನಿಷ್ಟ ಐದು ಸಾವಿರ ಪದಗಳ ಸಂಗ್ರಹವಾದರೂ ಆತನಲ್ಲಿರಬೇಕಾದುದು ಅಗತ್ಯವೆಂಬುದನ್ನು ಡಾ. ದೇವೇಂದ್ರಕುಮಾರ ಹಕಾರಿ ಅವರು ಒಂದೆಡೆ ಅಭಿಪ್ರಾಯಪಟ್ಟಿರುವುದು ತುಂಬಾ ಸೂಕ್ತವಾದ ವಿಚಾರವಾಗಿದೆ, ಏಕೆಂದರೆ ಶಬ್ದ ಸಂಗ್ರಹ ಅಪರಿಮಿತವಾಗಿದ್ದಲ್ಲಿ ಮಾತ್ರ ಕಾವ್ಯದ ಸೃಷ್ಟಿ ಸಾಧ್ಯವಾಗು ತ್ತದೆ. ಶಬ್ದಭಂಡಾರ ಬೆಳೆದಷ್ಟೂ ಸೃಜನಶೀಲತೆ ಜಾಗ್ರತವಾಗುತ್ತ ಹೋಗುತ್ತದೆ. ಸೃಷ್ಟಿಯ ಪ್ರತಿಸೃಷ್ಟಿಕರ್ತನಾಗಿರುವ ಸೃಜನಶೀಲ ವ್ಯಕ್ತಿಯಲ್ಲಿ ಜಾಗ್ರತಿ ಅತ್ಯವಶ್ಯಕ

ವಾಗಿದೆ. ಸಾಮಾನ್ಯವಾಗಿ ಹಿಂದಿನ ಅನುಭವ, ಮುಂದಿನ ಕಲ್ಪನೆಗಳಾನ್ನಾದರಿಸಿ ಸೃಜನಶೀಲತೆ ಮೂಡಿ ಬರುತ್ತದೆ. "ಬಾಲ್ಯದಲ್ಲಿನ ಅನುಭವಗಳು ಶ್ರೀಮಂತವಾದಿದ್ದರೆ ಮಾತ್ರ ಸೃಜನ ಶೀಲನಾಗಲು ಸಾಧ್ಯವಾಗುತ್ತದೆ ಎನ್ನುವ ಚಿತ್ತಾಲರ ಮಾತು ಗಮನಾರ್ಹವಾಗಿದೆ.

ಹೀಗೆ, ಸೃಜನಶೀಲನಾಗಲು ಮುಖ್ಯವಾಗಿ ನಿರ್ಮಲವಾದ ಮನಸ್ಸು, ವ್ಯವಸ್ಥಿತವಾದ ಆಲೋಚನಾಕ್ರಮ, ಸ್ಪಂದನ, ತುಡಿತಮಿಡಿತ, ಸ್ವಾನುಭವ ಮೊದಲಾದವುಗಳು ಅವನ ಅರ್ಹತೆಗಳಾಗಿದ್ದು ಇವುಗಳಿಂದ ಒಂದು ವಿನೂತನ ನಿತ್ಯನೂತನ ಸೃಷ್ಟಿಸಾಧ್ಯವಾಗಿ ಮನಸ್ಸಿನ ಹಗುರಗೊಳ್ಳುವಿಕೆ ನಡೆದು ಬರೀಬೇಕು, ಇಲ್ಲಾ ಬರೀಬೇಕು. ಎನ್ನುವ ಸ್ಥಿತಿಯಲ್ಲಿ ನಿಲ್ಲುತ್ತಾನೆ. 'ಹಾಡದಿರೆನಾ ತಾಳಲಾರೆನು' ಎಂಬ ಅಕ್ಕಮಹಾದೇವಿಯ ಸ್ಥಿತಿಯಲ್ಲಿ ಈ ಸೃಜನಶೀಲತೆ ಮೂಡಿ ಬರುತ್ತದೆ. ●

ಭಾರತದ ಹರಕೆ

ತೇಜಸ್ವಿನಿ ಅಂಬಲಗೆ

ಓದು ಓದು ಪಾಠ ಓದು
ಯಾವ ಪಾಠ, ಕನ್ನಡ ಪಾಠ
ಯಾವ ಕನ್ನಡ, ಕರ್ನಾಟಕ ಕನ್ನಡ
ಯಾವ ಕರ್ನಾಟಕ. ವೀರಕರ್ನಾಟಕ
ಯಾವ ವೀರ, ಭಾರತ ವೀರ
ಯಾವ ಭಾರತ, ಗಾಂಧೀ ಭಾರತ
ಯಾವ ಗಾಂಧಿ, ಮಕ್ಕಳ ಗಾಂಧಿ
ಯಾವ ಮಕ್ಕಳು ದೇಶದ ಮಕ್ಕಳು
ಯಾವ ದೇಶ, ಜನರ ದೇಶ
ಯಾವ ಜನರು, ನಮ್ಮ ಜನರು

ಅಂತರ

ಮುನೀರ ಪಟೇಲ

ನಾವು ಹಿಂದುಗಳು ! ನಾವು ಮುಸ್ಲೀಮರು
ನಾವು ಜೈನರು ! ನಾವು ಬೌದ್ದರು
ಯಾಕೆ ಧರ್ಮದ ಹೆಸರಿನಲ್ಲಿ
ನಮ್ಮಲ್ಲಿ ಈ ಮತಾಂತರ ॥೧॥

ರಾಮನೆಂದರೆ ದೇವರು
ಮಸಿದೆಯೆಂದರೆ ದೇವರಮನೆ
ದೇವರ ಮನೆಯಲಿ ರಾಮನಿರುವನು
ನಿಮಗ್ಯಾಕ ಗಂಡಾಂತರ ॥೨॥

ಕೂಡಿ ದುಡಿದು ಕೂಡಿ ಮಡಿದು
ಕೂಡಿ ಇದ್ದು ಕೂಡಿ ನಡೆದು
ಯಾಕೆ ಧರ್ಮದ ಹೆಸರಿನಲ್ಲಿ
ನಮ್ಮಲ್ಲಿ ಅಭಿಯಂತರ
ಸ್ವಾತಂತ್ರದ ನಂತರ ॥೩॥

ನಡೆಯಲಿಕ್ಕೆ ಕಾಲು ಎರಡು
ಕೇಳಲಿಕ್ಕೆ ಕಿವಿಗಳೆರಡು
ನೋಡಲಿಕ್ಕೆ ಕಣ್ಣು ಎರಡು
ಹೆಣ್ಣು ಗಂಡು ಜಾತಿ ಎರಡು
ಯಾಕೆ ಇದು ಅಂತರ ॥೪॥

ನಾವು ದೀನರೂ । ನಾವು ದಲಿತರು
ನಾವು ಹರಿಜನ । ನಾವು ಗಿರಿಜನ
ಯಾಕೆ ಸಂವಿಧಾನ ಹೆಸರಿನಲ್ಲಿ
ನಮ್ಮಲ್ಲಿ ಈ ಅಂತರ ॥೫॥

ನಡೆಯಲಿಕ್ಕೆ ಭೂಮಿ ಒಂದು
ಕುಡಿಯಲಿಕ್ಕೆ ನೀರು ಒಂದು

ಕಾಣುವ ಆಕಾಶ ಒಂದು
ದೇವನೊಬ್ಬ ನಾಮ ಹಲವು
ಯಾಕೆ ಈ ಅಂತರ ॥೬॥

ನಮಗೆ ಟಿ, ವ್ಹಿ. ಬೇಕು ! ನಮಗೆ ವಿಡಿಯೋ ಬೇಕು
ಹೆಣ್ಣು ಹಡೆದವನ । ಪೂರ್ಣ ಆಸ್ತಿಬೇಕು
ಯಾಕೆ ಮದುವೆ ಹೆಸರಿನಲ್ಲಿ
ನಿಮ್ಮದೆಲ್ಲಾ ಕುಂತರ ॥೭॥

ಇದು ಬಿಡಿವಿರಿ ಅದು ಕಟ್ಟಿರಿ
ಅದು ಬಿಡಿವಿರಿ ಇದು ಕಟ್ಟಿರಿ
ಯಾಕೆ ಮತವನ್ನು ಪಡೆಯಲಿಕ್ಕೆ
ನಿಮ್ಮದೆಲ್ಲ ಕುತಂತರ ॥೮॥

ಪಂಜಾಬದ ಉಗ್ರಗಾಮಿಗಳು
ಇಂದಿರಾಗಾಂಧಿಗೆ ಗುಂಡು ಹಾಕಿದರು
ತಮಿಳನಾಡಿನ ಎಲ್.ಟಿ.ಟಿ.ಇಗಳು
ರಾಜೀವಗೆ ಬಾಂಬ ಹಾರಿಸಿದರು
ಆಂದ್ರದ ನಕ್ಸಲವಾದಿಗಳು
ಕರ್ನಾಟಕದ ಜಲ ವಿವಾದವೂ
ಏನು ತಂದು ಇಟ್ಟರೊ
ದೇಶಕ್ಕೆ ಗಂಡಾಂತರ ॥೯॥

ಹಂಬಲ

ನನ್ನ ಸ್ಥಿತಿ ಈಗ
ಸಾಗರದ ಮಧ್ಯ ಇದ್ದರೂ
ನೀರಿಗಾಗಿ ಹಂಬಲಿಸೋ
ಹಾಗಾಗಿದೆ.

—ಉಮಾ ಫಿರಂಗಿ

ಒಂದು ನೆನಪು

ಚನಬಸಪ್ಪ ಬ. ಹೊಳಿಯಣ್ಣವರ

ಮೂಲೆಯೊಂದೂರಿನಲ್ಲಿ
ಬಂದೈತೆ ಬರಗಾಲ
ನೋಡುತ್ತ ನಿಂತಾಗ
ಜೀವ ಮಿಡಿದೈತೆ ಕೆಲಕಾಲ
ಸುರುವಾಗುತ್ತೈತೇ......ಮನದೊಳಗೆ
ಹಿಂದಿನ ನೆನಪೆಲ್ಲ

ಮೆರೆದಿತ್ತು ಈ ಊರೇ
ವೈಭವದ ಹಾದಿಯಲ್ಲಿ
ಕಂಡಿತ್ತು ಈ ಮೇರೇ
ಹಸಿರೆಲ್ಲ ಹೊನಲಿನಲ್ಲಿ
ಹರಿದಿತ್ತು ಹಳ್ಳ-ಕೊಳ್ಳ......
ಉತ್ಸಾಹದ ಚಿಲುಮೆಯಲ್ಲಿ
ಕೂಡುವ ಪ್ರೇಮಿಗಳಿಗೆ
ಹೊಳೆದಿತ್ತು ಸಿಹಿ ರಾಗವಲ್ಲಿ

ಹಕ್ಕಿಗಳ ನಾದ ಕೇಳಿ
ಕುಣಿದಿತ್ತು ಮೈಮನವೆಲ್ಲ
ಸುಗ್ಗಿನ ಕಾಡ ಕಂಡು
ಅರಳಿತ್ತು ಹೃದಯವೆಲ್ಲಿ
ಕಂಡಿತು ಕಣ್ಣೆಲ್ಲ
ಕನಸಿನ ಹರುಷವೆಲ್ಲ
ಬಯಸಿತ್ತು ಜೀವಭಾವ
ಚಿಗುರಿದ ಸುಖವೆಲ್ಲ

'ಕುರುದ್ವೀಪದ ಬ್ರಾಹ್ಮಣ ಸಮಾಜದ'

ಮಹಿಳೆಯರ ಕೆಲಸ ಮತ್ತು ಬಿಡುವಿನ ಪರಿಕಲ್ಪನೆ ಹಾಗೂ ಸಂಪ್ರದಾಯಗಳು

ಡಾ. ಜಯಶ್ರೀ ದಂಡೆ

ಪ್ರವೇಶಿಕೆ :

ದಿನಾಂಕ 12, 13, 14, ಎಪ್ರಿಲ್, 1992 – ಈ ಮೂರು ದಿನಗಳಂದು "ಮರವಂತೆ" ಯ ವರಾಹಸ್ವಾಮಿ ದೇವಸ್ಥಾನದ ಆವರಣದಲ್ಲಿ "ಮಹಿಳಾ ನಿಷ್ಠ ಜಾನಪದ" ಕಮ್ಮಟ ಒಂದು ನಡೆಯಿತು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ ಮತ್ತು ಪ್ರಾದೇಶಿಕ ವ್ಯಾಸಂಗ ಕುಂದಾಪೂರ ಇವುಗಳ ಸಂಯುಕ್ತ ಆಶ್ರಯದಲ್ಲಿ ಈ ಕಮ್ಮಟ ಏರ್ಪಟ್ಟಿತ್ತು. ಡಾ॥ ಜೀ. ಶಂ. ಪರಮಶಿವಯ್ಯ, ಡಾ॥ ವಿಜಯಾ ದಬ್ಬೆ, ಡಾ॥ ವಿವೇಕ ರೈ, ಡಾ॥ ಪುರುಷೋತ್ತಮ ಬಳಿಮಲೆ, ಡಾ॥ ಚಿನ್ನಪ್ಪಗೌಡ ಇವರು ಉಪನ್ಯಾಸಕರಾಗಿ ಆಗಮಿಸಿದ್ದರು. ಈ ಕಮ್ಮಟದ ಯೋಜನೆಯನ್ನು ರೂಪಿಸಿ, ಅದನ್ನು ಯಶಸ್ವಿಯಾಗಿ ನಡೆಸಿಕೊಟ್ಟವರು ಪ್ರೊ॥ ಎ. ವ್ಹಿ. ನಾವಡಾ ಹಾಗೂ ಶ್ರೀಮಂತಿ ಗಾಯತ್ರೀ ನಾವಡಾ ಅವರು

17 ನೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ, ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರದಿಂದ ಉತ್ತರಕ್ಕೆ 16 ಕಿ. ಮೀ. ದೂರ ಕ್ರಮಿಸುವಷ್ಟರಲ್ಲಿಯೇ ಬರುತ್ತದೆ ಸುಂದರ ಪ್ರವಾಸಿಕೇಂದ್ರ "ಮರವಂತೆ". ಕುಂದಾಪುರದಿಂದ ಮರವಂತೆಗೆ ಬರುವಾಗ ಎಡಕ್ಕೆ ಅರಬ್ಬಿ ಸಮುದ್ರ, ಬಲಕ್ಕೆ ಸಮುದ್ರದ ಒತ್ತು ಜೊತೆಗೆ "ಸೌಪರ್ಣಿಕಾ" ನದಿ ಸೇರಿ ಹರಿಯುತ್ತಿರುವುದು. ನದಿ ಮತ್ತು ಸಮುದ್ರದ ಒತ್ತುಗಳ ಮಧ್ಯ 40 ಎಕರೆ ವಿಸ್ತೀರ್ಣದ ಒಂದು ದ್ವೀಪ ಉಂಟಾಗಿದೆ. ಇದೇ "ಕುರುದ್ವೀಪ". ಇದರ ಎದುರುಗಡೆ ಒಂದು ದ್ವೀಪಕಲ್ಪ, 70 ಎಕರೆಯ "ಪಡುಕೋಣೆ". ಕುರು ದ್ವೀಪದಲ್ಲಿ ವೀರಶೈವ ಮೂಲದವರೆಂದು ಹೇಳಿಕೊಳ್ಳುವ ನಾಲ್ಕೈದು ಹರಿಜನ ಕುಟುಂಬಗಳು. ಹಾಗೂ ಒಂದೇ ಮನೆತನಕ್ಕೆ ಸೇರಿದ– ಈಗ ಒಡೆದು ನಾಲ್ಕೈದು ಕುಟುಂಬಗಳಾದ ಬ್ರಾಹ್ಮಣಜಾತಿಯ ಹೆಬ್ಬಾರ ಕುಟುಂಬಗಳು ಪಡುಕೋಣೆ ದ್ವೀಪದಲ್ಲಿ ಮೀನುಗಾರಿಕೆ ಉದ್ಯೋಗವುಳ್ಳ ಮೊಗವೀರರ ಕುಟುಂಬಗಳೇ ಜಾಸ್ತಿ.

ಕಮ್ಮಟ ನಡೆದ ವರಾಹಸ್ವಾಮಿ ದೇವಸ್ಥಾನ ಸಮುಂದ್ರದ ಒತ್ತು ಮತ್ತು ಸಮುದ್ರದ ನಡುವಿನ ಸ್ಥಳದಲ್ಲಿದ್ದರೆ, ಈ ನೀರಿನ ಒತ್ತುವಿನ ಆಚೆ ಒಂದು ಕೂಗಳತೆ ದೂರದಲ್ಲಿ ಈ ಎರಡೂ ವಿಶಿಷ್ಟ ಪ್ರದೇಶಗಳಿವೆ. ವರಾಹಸ್ವಾಮಿ ದೇವಸ್ಥಾನದ ಹತ್ತಿರದಿಂದ ಇವೆರಡೂ ಸ್ಥಳಗಳಿಗೆ ಸಾಗಲು ಸಣ್ಣ ಸಣ್ಣ ದೋಣಿಗಳ ವ್ಯವಸ್ಥೆ ಇದೆ. ಮಳೆಗಾಲದಲ್ಲಿ ಕುರುದ್ವಿಪದ ಜನ ಹೊರಗೆ ಬರುವಂತೆಯೇ ಇಲ್ಲ. ಆರಾರು ತಿಂಗಳು ಅಲ್ಲಿಯೇ ವಾಸವಾಗಿರಬೇಕು. ಅದಕ್ಕಾಗಿ ಅರ್ಧವರ್ಷಕ್ಕೆ ಬೇಕಾಗುವ ಉಡುವ–ತೊಡುವ, ಉಣ್ಣುವ–ತಿನ್ನುವ ಇತ್ಯಾದಿ ಸರಕು ಸಾಮಗ್ರಿಗಳನ್ನೆಲ್ಲ ಸಂಗ್ರಹಿಸಿಕೊಂಡಿರುತ್ತಾರೆ. ಒಂದೆರಡೇ ಜಾತಿಯವರು ಅಲ್ಲಿ ವಾಸಿಸಿರುವುದರಿಂದ ಅವರ ಜೀವನ ಪರಸ್ಪರ ಅವಲಂಬಿತವಾಗಿರುತ್ತದೆ. ಹಾಗೆಯೇ ಪಡುಕೋಣೆಯ ಜೀವನವೂ ಕೂಡ ವಿಶಷ್ಟವಾಗಿದೆ. ಅಂತೆಯೇ ಕಮ್ಮಟದ ಕ್ಷೇತ್ರಕಾರ್ಯದ ಅಧ್ಯಯನಕ್ಕೆ ಈ ಸ್ಥಳಗಳನ್ನು ಆಯ್ಕೆ ಮಾಡಲಾಗಿತ್ತು.

ದಿನಾಂಕ 13 ರಂದು ಮಧ್ಯಾಹ್ನ ಕ್ಷೇತ್ರಕಾರ್ಯಕ್ಕಾಗಿ ವಿವಿಧಭಾಗಗಳ 13 ಜನ ಮಹಿಳಾ ಜಾನಪದ ಅಧ್ಯಯನಕಾರ್ತಿಯರನ್ನು ಮೂರು ತಂಡಗಗಲ್ಲಿ ವಿಂಗಡಿಸಲಾಯಿತು:

"ಕುರು" ತಂಡ ಒಂದು – ಡಾ॥ ಸಂಧ್ಯಾರೆಡ್ಡಿ, ಡಾ॥ ಪದ್ಮಾಶೇಖರ, ಶ್ರೀಮತಿ ಎ. ಸಿ. ಲಲಿತಾ, ಶ್ರೀಮಂತಿ ಶೋಬನಾ ಬಿಳಿಮಲೆ.

"ಕುರು" ತಂಡ ಎರಡು – ಡಾ॥ ಜಯಶ್ರೀ ದಂಡೆ, ಕುಮಾರಿ ವೀಣಾ ಬನ್ನಂಜೆ, ಶ್ರೀಮತಿ ಜಯಲಕ್ಷ್ಮಿ ಸೀತಾಪುರ, ಶ್ರೀಮತಿ ಶಾಂತಿ ನಾಯಕ.

ತಂಡ ಮೂರು (ಪಡುಕೋಣೆ)-ಡಾ॥ ಶಾಂತಾ ಇಮ್ರಾಪೂರ, ಶ್ರೀಮಂತಿ ಗಾಯತ್ರೀ ನಾವಡಾ, ಡಾ॥ ಸುಶೀಲಾ ನೆಲ್ಲಿಸರ್, ಶ್ರೀಮತಿ ವೈ. ಸಿ. ಭಾನುಮತಿ, ಶ್ರೀಮತಿ ಚೇತನಾ.

ಈ ಮೂರು ತಂಡಗಳಿಗೆ ಮೂವರು ಸಂಚಾಲಕರನ್ನು ನೇಮಿಸಲಾಗಿತ್ತು. ಕುರು ತಂಡ ಒಂದಕ್ಕೆ – ಶ್ರೀ ಎ. ವಿ. ನಾವಡಾ ಅವರು, ಕುರು ತಂಡ ಎರಡಕ್ಕೆ ಡಾ॥ ಬಿಳಿಮಲೆ ಪುರುಷೋತ್ತಮ ಅವರು, ತಂಡ ಮೂರಕ್ಕೆ – ಡಾ॥ ಬಿ. ಎ. ವಿವೇಕ ರೈ ಅವರು ಸಂಚಾಲಕರಾಗಿದ್ದರು. ಮೂರೂ ತಂಡದವರಿಗೆ ಬೇರೆ ಬೇರೆ ಜನಾಂಗದ ಮಾಹಿತಿ ಸಂಗ್ರಹಕ್ಕೆ ತೊಡಗಿಸಲಾಯಿತು.

"ಕುರು" ತಂಡ ಒಂದು : ಹರಿಜನ ಸಮಾಜದ ಮಹಿಳೆಯರ ಕೆಲಸ ಮತ್ತು ಬಿಡುವಿನ ಪರಿಕಲ್ಪನೆಯ ಮಾಹಿತಿ ಸಂಗ್ರಹ.

"ಕುರು" ತಂಡ ಎರಡು : ಬ್ರಾಹ್ಮಣ ಸಮಾಜದ ಮಹಿಳೆಯರ ಕೆಲಸ ಮತ್ತು ಬಿಡುವಿನ ಪರಿಕಲ್ಪನೆಯ ಮಾಹಿತಿ ಸಂಗ್ರಹ.

ತಂಡ ಮೂರು : "ಪಡುಕೋಣೆ" ಯ ಮೊಗವೀರ ಸಮಾಜದ ಮಹಿಳೆಯರ ಕೆಲಸ ಮತ್ತು ಬಿಡುವಿನ ಪರಿಕಲ್ಪನೆಯ ಮಾಹಿತಿ ಸಂಗ್ರಹ.

"ಕುರು ತಂಡ" ಎರಡರಲ್ಲಿ ಪಾಲ್ಗೊಂಡ ನಾಲ್ಕು ಜನ ಭಾಗಿಗಳೂ "ಕುರು ದ್ವೀಪ" ದ ಬ್ರಾಹ್ಮಣ ಸಮಾಜದ ಮಹಿಳೆಯರನ್ನು ಭೇಟಿಯಾಗಿ ಪ್ರತ್ಯೇಕವಾಗಿಯೇ ಮಾಹಿತಿ ಸಂಗ್ರಹಕ್ಕೆ ತೊಡಗಿದೆವು.

ಮಹಿಳೆ – ಕೆಲಸ ಮತ್ತು ಬಿಡುವಿನ ಪರಿಕಲ್ಪನೆ :

ಸಂದರ್ಶನ ಮತ್ತು ವೀಕ್ಷಣೆಗಳ ಮೂಲಕ ಮಹಿಳೆಯರಲ್ಲಿರುವ ಕೆಲಸ ಮತ್ತು ಬಿಡುವಿನ ಪರಿಕಲ್ಪನೆಯನ್ನು; ಸಮಾಜ, ಸಂಸ್ಕೃತಿ, ಪುರುಷಕೇಂದ್ರಿತ ರಚನೆಯಲ್ಲಿ ನಂಬಿಕೆಯಿರುವ ಸ್ತ್ರೀಯರ ಮನೋಸ್ಥಿತಿ, ನಡಾವಳಿಕೆ, ಸುಪ್ತಭಾವನೆಗಳು, ಭಾವುಕ ಸಮಸ್ಯೆಗಳು, ಸಾರ್ವಜನಿಕ ಅಸಮತೋಲನದಿಂದ ಎದುರಿಸುವ ಅನಂತಾನಂತ ಸಮಸ್ಯೆಗಳು, ಜೊತೆಗೆ ಸ್ತ್ರೀಸಹಜವಾದ – ಸ್ತ್ರೀಯುತ್ವ, ಸ್ತ್ರೀಪಾತ್ಮಕತೆ, ಸ್ತ್ರೀವಾದಿತ್ವದ ಅಂಶಗಳು ಗಮನಕ್ಕೆ ಬಂದವು.

ಸಂದರ್ಶನದ ವೇಳೆಗೆ ಮಹಿಳೆ ನಡೆದುಕೊಳ್ಳುವ ರೀತಿ, ಅವಳು ಯಾವ ಸ್ಥಾನದಲ್ಲಿ ನಿಂತು ನಮ್ಮನ್ನೆಲ್ಲ ನಿರೀಕ್ಷಿಸುತ್ತಿದ್ದಳು ಎಂಬುದನ್ನು ಆಯಾ ಸಂದರ್ಭಗಳ (ಮುಟ್ಟಾಗಿ ಹೊರಗೆ ಇದ್ದವಳ, ಮನೆಯ ಒಳಗೆ ಇದ್ದವಳ, ವಿಧವೆಯ) ಹಿನ್ನೆಲೆಯಲ್ಲಿ ಗಮನಿಸಿದಾಗ ಹಲವಾರು ಅಂಶಗಳು ಕಂಡುಬರುತ್ತಿದ್ದವು. ಹೀಗೆ ನೋಡುವಾಗ ಅವಳಲ್ಲಿ ತನ್ನದೇ ಆದ ಜಾಗತಿಕ ಪ್ರಜ್ಞೆ ಇದೆಯೋ ಇಲ್ಲವೋ ? ಲೋಕ ದೃಷ್ಟಿ ಹೇಗಿದೆ ? ಎಂಬುದನ್ನು ಅವಲೋಕಿಸಿದಾಗ – ಸಂಕುಚಿತತೆ ಎದ್ದು ತೋರಿತು. ಗಂಡಸರು ಎದುರಿಗಿದ್ದರೆ ಬಾಯಿ ಮುಚ್ಚಿಕೊಂಡಿರುತ್ತಿದ್ದ ಸ್ತ್ರೀಯರು ಗಂಡಸು ಆಚೆ ಸರಿದಾಗ, ನಿರ್ಭಯದಿಂದ ತಮ್ಮ ಮನದ ವಿಕ್ಷಯವನ್ನು ಬಿಚ್ಚಿ ಹೇಳುತ್ತಿದ್ದರು. ತಾನು ಮಾತನಾಡುವಾಗ ಮಧ್ಯ ಗಂಡ ಬಂದು ಹೆಚ್ಚು ಮಾತನಾಡುವುದನ್ನು ಕೇಳಿ – ಮುಖಸಿಂಡರಿಸುತ್ತಿದ್ದಳಾದರೂ ಪ್ರತಿಕ್ರಿಯೆಯಿಲ್ಲದೇ

ಮೌನಿಯಾಗಿರುತ್ತಿದ್ದಳು. "ಗಂಡಸರು ಮನೆಯಲ್ಲಿ ಇಲ್ಲದಿದ್ದಾಗ ಗಂಡೋ, ಹೆಣ್ಣೋ ಒಟ್ಟಿನಲ್ಲಿ ನಿಮ್ಮ ಮನೆಗೆ ಅತಿಥಿಗಳು ಬಂದರೆ ನೀವು ಅವರ ಜೊತೆ ಮಾತನಾಡುತ್ತೀರಾ" ? ಎಂದು ಕೇಳಲು – "ಹೌದು, ಮಾತನಾಡುತ್ತೇವೆ. ಆದರೂ ನಮ್ಮ ಗಂಡಸರಿಗೆ ನಾವು ಸ್ವಲ್ಪ ಹೆದರುತ್ತೇವೆ. ಹೀಗಾಗಿ ಸುಮ್ಮನಿದ್ದುಬಿಡುತ್ತೇವೆ" ಎಂದರು. ಇದೇ ಮಾತನ್ನು ಗಂಡಸರಿಗೆ ಕೇಳಿದಾಗ. "ನಾವು (ಗಂಡಸರು) ಮನೆಯಲ್ಲಿ ಇಲ್ಲದೇ ಹೋದ ಪಕ್ಷದಲ್ಲಿ ಯಾರೇ ಅತಿಥಿಗಳು ಬಂದರೂ ನಮ್ಮ ಹೆಣ್ಣು ಮಕ್ಕಳು ಅವರ ಜೊತೆ ಮಾತನಾಡುತ್ತಾರೆ. ಸತ್ಕರಿಸುತ್ತಾರೆ. ನಾವು ಮನೆಯಲ್ಲಿದ್ದರೆ ಮಾತ್ರ ಅವರು (ಹೆಣ್ಣು ಮಕ್ಕಳು) ಮನೆ ಒಳಗಡೆಯೇ ಇರಬೇಕು. ಇದು ನಮ್ಮ ಮನೆಯ ಸಾಂಪ್ರದಾಯ" ವೆಂದು ಗೆರೆಯನ್ನು ಹಾಕಿದರು. "ವರ್ಷದಲ್ಲಿ ಎಷ್ಟು ಸಾರೆ ನೀವು ಮನೆಯಿಂದ ಆಚೆ ಹೋಗುತ್ತೀರಾ" ? "ಹೋಗುವುದೇ ಇಲ್ಲ. ಹೋಗಬೇಕೆಂದು ಅನಿಸುವುದೂ ಇಲ್ಲ. ಅನಿವಾರ್ಯವಾಗಿ ಹೋಗಲೇ ಬೇಕಾಗಿ ಬಂದರೆ ಮದುವೆಯಾದ ಮೂರ್‍ನಾಲ್ಕು ಜನ ಹೆಣ್ಣುಮಕ್ಕಳು ಒಟ್ಟಿಗೇ ಸೇರಿ, ಒಬ್ಬರಾದರೂ ಗಂಡಸರನ್ನು ಜೊತೆಗೆ ಕರೆದುಕೊಂಡು ಹೋಗುತ್ತೇವೆ. ಇಲ್ಲದಿದ್ದರೆ ಹೋಗುವದಿಲ್ಲ. ಮದುವೆಯಾಗದ ಹುಡುಗಿಯರನ್ನಂತೂ ಹೊರಗಡೆ ಎಲ್ಲಿಯೂ ಕಳಿಸುವುದೇ ಇಲ್ಲ." 'ಹಾಗಾದರೆ ಹೆಣ್ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವದಿಲ್ಲವೇ' ? 'ಇಲ್ಲಿಯೇ ಪಡುಕೋಣೆಯಲ್ಲಿ ಹೈಸ್ಕೂಲ್ ಇದೆ. ಅಷ್ಟು ಮಾತ್ರ ಅವರಿಗೆ ಓದಿಸಬಲ್ಲೆವೇ ವಿನಾ ಹೆಚ್ಚಿನದನ್ನಲ್ಲ. ದೂರ ಒಬ್ಬರನ್ನೇ (ಹೆಣ್ಣು ಮಕ್ಕಳನ್ನು) ಕಳಿಸುವ ಸಾಂಪ್ರದಾಯ ಮೊದಲಿನಿಂದಲೂ ನಮ್ಮ ಮನೆಯಲ್ಲಿ ಇಲ್ಲ. ಜಸಿಂದೆಗಾಗಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲ.' ಕುದ್ರುದ್ವೀಪದಲ್ಲಿ ಬ್ರಾಹ್ಮಣ ಸಮಾಜದ ಇಬ್ಭಾಗಗಳಾದ ಹೆಬ್ಬಾರ ಕುಟುಂಬಗಳನ್ನು ಬಿಟ್ಟು ಬೇರೆ ಕುಟುಂಬಗಳಿಲ್ಲವಾದರೂ ನಿಂದೆ ತಪ್ಪಿಲ್ಲ. ತಮ್ಮ ತಮ್ಮ ಕುಟುಂಬದವರೇ ಹುಡುಗಿಯರು ಕಾಲೇಜಿಕ್ಕೆ ಹೊರಟರೆ— 'ಅಯ್ಯ !! ಹೇಗೆ ಹೋಗ್ತಾವ ನೋಡು ಅಂತ ಹೇಳ್ತಾರೆಂದು ಬಿಟ್ಟೆವು.' 'ಹೀಗೆ ಅನ್ನುತ್ತಾರೆ ಎಂದು ಹೇಳುವಷ್ಟು ತಿಳುವಳಿಕೆ ನಿಮ್ಮಲ್ಲಿದೆ, ಬೇರೆ ಕುಟುಂಬದ ಹೆಣ್ಣು ಮಕ್ಕಳು ಕಲಿಯಲು ಹೋದರೆ ನೀವೂ ಹೀಗೇ ಅನ್ನುತ್ತೀರಾ' ? ಎಂದು ಪ್ರಶ್ನಿಸಿದಾಗ ಸಂಕೋಚ ಸ್ವಭಾವದಿಂದ, 'ಇಲ್ಲ ನಾವೇನೂ ಹಾಗೇ ಹೇಳುವದಿಲ್ಲ. ಬೇರೆಯವರ ಬಗ್ಗೆ ಎಂದು ಹೇಳಿದರೂ ಭಾವನೆಯಲ್ಲಿ ತೊಡಕು ತುಂಬಿತ್ತು.' ಹೆಂಗಸಿನಿಂದಲೇ ಹೆಂಗಸಿಗೆ ತೊಡಕು ಎಂಬುದು ಸ್ಪಷ್ಟವಾಗಿ ಗೋಚರಿಸುವಂತಿತ್ತು. ಸಾರ್ವಜನಿಕ ಅಸಮತೋಲನದಿಂದ ಎದುರಿಸುವ ಸಮಸ್ಯೆ ಇದಾಗಿತ್ತು. ಹೊರಗೆ ಹೋಗಲು ಹೆಣ್ಣುಮಕ್ಕಳನ್ನು ಬಿಡದ್ದಕ್ಕೆ ಗಂಡಸರು ಕೊಡುವ ಇನ್ನೊಂದು ಕಾರಣವೆಂದರೆ, 'ತಾವು ನಡುಗಡ್ಡೆಯಲ್ಲಿ ಇರುವವರಾದ್ದರಿಂದ ಹೆಂಗಸರಿಗಷ್ಟೇ ಆಚೆಕಳಿಸುವ

ದಿಲ್ಲ ಜನ ಕೆಟ್ಟದಾಗಿ ಮಾತನಾಡುತ್ತಾರೆ. ಕಾರಣ ಹೆಣ್ಣುಮಕ್ಕಳನ್ನು ಎಲ್ಲಿಯೂ ಹೊರಗೆ ಕಳಿಸುವದಿಲ್ಲ. ಮನೆಯಲ್ಲಿಯೇ ಅವರಿಗೆ ಬೇಕಾದಷ್ಟು ಕೆಲಸವಾಗುತ್ತದೆ, ಅದನ್ನು ನೋಡಿದರೆ ಹೆಣ್ಣಾಗಿ ಹುಟ್ಟುವುದೇ ಬೇಡ. ತುಂಬಾ ಕಷ್ಟ. ರಗಳೆ ಬಹಳ. ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಆಕೆ ಕೆಲಸ ಮಾಡಬೇಕು' ಎಂದು ಗಂಡಸು ಹೆಣ್ಣಿನ ಬಗ್ಗೆ ಕರುಣೆದೋರಿದರೆ, ಹೆಂಗಸರು 'ಇಲ್ಲಾ ಬಿಡಿ, ನಮ್ಮದೆಂಥಾ ಕೆಲಸ ? ಗಂಡಸರ ಕೆಲಸವೇ ಹೆಚ್ಚಾಗುತ್ತದೆ. ಹೊರಗಿನ ಕೆಲಸ, ಮನೆಗೆಲಸ, ಕೃಷಿ ಕೆಲಸ ಇತ್ಯಾದಿ ಕೆಲಸಗಳ ಭಾರದಿಂದ ಅವರು ತುಂಬಾನೇ ಸೋತು ಹೋಗ್ತಾರೆ. ಹೀಗಾಗಿ ಅವರಷ್ಟು ಶ್ರಮ ನಮ್ಮದಲ್ಲ' ಎಂಬ ಸಮರ್ಥನೆ ಕೇಣ್ಣಸದು. 'ಹೌದು, ನೀವು ಎಷ್ಟು ಗಂಟೆಗೆ ಏಳುತ್ತೀರಿ ? ಎಷ್ಟು ತಾಸುಗಳ ಕಾಲ ಕೆಲಸ ಮಾಡುತ್ತೀರಿ ? ಎಷ್ಟು ಸಮಯ ವಿಶ್ರಾಂತಿ ಪಡೆಯುತ್ತೀರಿ'? ಎಂದು ಕೇಳಲು— 'ಬೆಳಿಗ್ಗೆ ಐದು ಗಂಟೆಯಿಂದಲೇ ಹೆಣ್ಣುಮಕ್ಕಳಾದ ನಮ್ಮ ಕೆಲಸ ಆರಂಭವಾಗುತ್ತದೆ. ಗಂಡಸರು 7 ಗಂಟೆಯ ಸುಮಾರಿಗೆ ಏಳುತ್ತಾರೆ. ಮನೆ ಕಸಗುಡಿಸುವದರಿಂದ ನಮ್ಮ ದಿನದ ಕೆಲಸ ಪ್ರಾರಂಭವಾಗುತ್ತದೆ. ಹೊಸ್ತಿಲು ಸಾರಿಸಿ ಅಂಗಳಕ್ಕೆ ನೀರು ಹೊಡೆದು, ರಂಗವಲ್ಲಿ ಹಾಕಿ, ದೇವರ ಪೂಜೆಗೆ ಹೂ ತಂದು ಮತ್ತೇನಾದರೂ ಕೆಲಸವಿದ್ದರೆ ಮಾಡಿ, ಸ್ನಾನ ಮಾಡಿ, ದೇವರಿಗೆ ದೂರದಿಂದ ನಿಂತಲ್ಲೇ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ತಿಂಡಿ ತಯಾರಿಸುವುದಕ್ಕೆ ಅಣಿಯಾಗುತ್ತೇವೆ. ದಿನವೂ ಇಡ್ಲಿಯೋ, ದೋಸೆಯೋ ಏನಾದರೊಂದು ಆಗಲೇಬೇಕು. ಇಷ್ಟು ಮುಗಿಯುತ್ತಲೇ ಅಡಿಗೆಯ ಕೆಲಸ. ನಮ್ಮ ಮುಖ್ಯ ಆಹಾರ ಅನ್ನವೇ. ದೊಡ್ಡ ಪಾತ್ರೆಯಲ್ಲಿ ಅನ್ನ ಇಳಿಸಿ, ತರಕಾರಿ, ಸಾಂಬಾರ ಮಾಡುತ್ತೇವೆ. ಗಂಡುಮಕ್ಕಳಿಗೇ ಮೊದಲು ಉಣ್ಣಲು ಬಡಿಸುತ್ತೇವೆ. ಅಡಿಗೆ ಮನೆಯ ಸಣ್ಣ ಕಿಡಕಿಯಿಂದಲೆ ಗಂಡಸರ ಎಲೆಯನ್ನು ನಿರೀಕ್ಷಿಸುತ್ತೇವೆ. ಆಗಿದ್ದರೆ ಮಾತ್ರ ಹೊರಗೆ ಹೋಗಿ ಬಡಿಸಿ ಮತ್ತೆ ಅಡುಗೆ ಮನೆಯಲ್ಲಿಯೇ ನಿಂತು ಕೊಳ್ಳುತ್ತೇವೆ. ಆಮೇಲೆ ನಾವು 'ಊಟ ಮಾಡುತ್ತೇವೆ.'— ಅಷ್ಟೊತ್ತಿಗೇ ಅಲ್ಲಿಗೆ ಹೇಳುವವಳ ಗಂಡ ಬಂದನು : 'ಹೆಣ್ಣುಮಕ್ಕಳು ಗಂಡ ಉಂಡುಬಿಟ್ಟ ಎಲೆಯಲ್ಲಿಯೇ ಉಣ್ಣಬೇಕು. ಹೀಗೆ ಉಂಡರೆ ಅವಳು ಪತಿವ್ರತೆ, ಹಾಗೂ ಮುತ್ತೈದೆ ಸಾವು ಬರುತ್ತದೆ,' ಎಂದು ಗಂಡ ಹೇಳಿದ ಈ ಮಾತನ್ನು ಹೆಣ್ಣು ಮೌನವಾಗಿ ಕೇಳುತ್ತಿದ್ದಳು. ಹೌದು ಎಂದು ತಲೆ ಹಾಕಿದಳು, 'ಸಂಜೆ ಅಡಿಗೆಯ ತಯಾರಿ, ಬೆಳಗಿನ ತಿಂಡಿಗಾಗಿ ಅಕ್ಕಿ, ಉದ್ದಿನಬೇಳೆ ರುಬ್ಬುವ ಕೆಲಸ ನಡೆಯುತ್ತದೆ'– ಎಂದು ಹೇಳಿ ಬಿಡುವಿಲ್ಲದ ಹೆಣ್ಣುಮಕ್ಕಳ ಕೆಲಸಕ್ಕಾಗಿ ಗಂಡಸು ಮರುಗಿದ.

'ಬಿಡುವಿನ ವೇಳೆಯಲ್ಲಿ ನೀವು ಏನು ಮಾಡುತ್ತೀರಿ' ಎಂದು ಕೇಳಿದಾಗ, 'ಸುಮ್ಮನೆ ಮಾತನಾಡುತ್ತೇವೆ, ಗಂಡಸರು ಬೇರೆಡೆ ಕುಳಿತಿರುತ್ತಾರೆ, ನಾವು ಬೇರೆಡೆ

ಕುಳಿತಿರುತ್ತೇವೆ ಟಿ ವಿ. ನೋಡುತ್ತೇವೆ. ಆರ್ಥಿಕ ಸ್ವಾವಲಂಬನೆಗಾಗಿ ಮನೆಕೆಲಸದ ಜೊತೆಗೆ ಕೈಕೆಲಸಗಳನ್ನೂ ಮಾಡುತ್ತೇವೆ. ಟೆಂಗಿನ ಗರಿಗಳ ಕಡ್ಡಿಯಿಂದ ಪೊರಕೆಯನ್ನೂ, ಗರಿಗಳಿಂದ ಚಾಪೆಯನ್ನೂ, ಸಾರನ್ನೂ ತಯಾರಿಸುತ್ತೇವೆ. ಇಲ್ಲಿಗೇ ಬಂದು ನಾವು ಮಾಡಿದ ಸಾಮಾನುಗಳನ್ನು ಕೊಂಡೊಯ್ಯುತ್ತಾರೆ. ಮಾರಿ ಬಂದ ಹಣದಿಂದ ಬಟ್ಟೆಯನ್ನು ತರಿಸುತ್ತೇವೆ. ಸಂಸ್ಕೃತಿಕ್ಕೆ ಹಾಕುತ್ತೇವೆ. ಇವರಿಂದ ನಮಗೆ ಸಂತೋಷವಿದೆ. ಹೀಗಾಗಿ ನಾವು ವ್ಯರ್ಥ ಮಾತಿನಲ್ಲಿ ವೇಳೆ ಕಳೆಯುವದಿಲ್ಲ. 'ಹೆಬ್ಬಾಗಿಲೊಳಗ್ಗ ಗೆರಸಿ ಹೊತ್ತಿಲ್ಲ. ರಂಜಣಗಿಯೊಳ್ಗ ಕೈಹೊತ್ತಿಲ್ಲ' ಅನ್ನುವಂತೆ ಕೆಲಸ ಹಾಗೇ ನಡೆನೇ ಇರುತ್ತದೆ. ಬಿಡುವು ಎನ್ನುವುದು ಇಲ್ಲವೇ ಇಲ್ಲ'. ಪ್ರತ್ಯೇಕವಾಗಿ ಗಾದೆ, ಒಗಟು, ಒಡಪುಗಳ ಬಗ್ಗೆ ವಿಚಾರಿಸಿದರೆ ನಮಗೆ ಬರುವದಿಲ್ಲ ಎಂದು ಹೇಳುವ ಇವರು ಸಹಜ ಮಾತಿನಲ್ಲಿ ಸಾಕಷ್ಟು ಗಾದೆಗಳನ್ನು ಉಪಯೋಗಿಸುವದುಂಟು,

ಹೆಣ್ಣಿಗೆ ಸಹಜವಾಗಿಯೇ ಅಂಟಿಕೊಂಡ ಪ್ರೀತಿ. ವಾತ್ಸಲ್ಯ. ತ್ಯಾಗ, ತಾಳ್ಮೆ ಮುಂತಾದ ಗುಣಗಳು ಎದ್ದು ಕಂಡವು. ಕುಟುಂಬದ ಸದಸ್ಯರನ್ನು ಒಂದೇ ದೃಷ್ಟಿಯಿಂದ ನೋಡುವದು. ಯಾರು ಏನೇ ಅಂದರೂ ಅನ್ನಿಸಿಕೊಂಡು ಅವರೇ ಹೆಚ್ಚೆಂದು ಸುಮ್ಮನಿದ್ದು ಬಿಡುವುದು ಹೆಣ್ಣಿನ ಅಂಟುರೋಗವೇ ! ಎಂಬಂತೆ ಕಂಡುಬಂದಿತು. 'ಗಂಡನ ಹೆಸರನ್ನು ಹೇಳುವಾಗ ಒಡಪು ಹಾಕಿ ಹೇಳುತ್ತಾರಲ್ಲ, ಅಂಥ ಒಡಪುಗಳು ನಿಮಗೆ ಬರುತ್ತವೆಯೇ'? 'ಇಲ್ಲ! ಇಲ್ಲ!! ನಮ್ಮಲ್ಲಿ ಒಡಪು ಹಾಕಿ ಗಂಡನ ಹೆಸರು ಹೇಳುವುದಾಗಲೀ, ಅಥವಾ ಬರೀ ಗಂಡನ ಹೆಸರು ಹೇಳುವುದಾಗಲೀ ಇಲ್ಲವೇ ಇಲ್ಲ. ಹೆಂಡತಿ ಗಂಡನ ಹೆಸರು ಹೇಳಿದರೆ ಗಂಡನ ಆಯುಷ್ಯ ಕಡಿಮೆಯಾಗುತ್ತದೆಂಬ ನಂಬಿಕೆ ಇದೆ. ಗಂಡ ದೂರ ಯಾವುದೋ ಊರಲ್ಲಿದ್ದರೆ ಅವರ ಹೆಸರು ಹೇಳಬಹುದು. ಹತ್ತಿರವಿದ್ದಾಗ ಹೇಳಬಾರದು' ಎಂದರು. ಅಲ್ಲಿಯೇ ನಿಂತಿದ್ದ ಗಂಡನಿಗೆ 'ನೀವು ಹೆಂಡತಿಯ ಹೆಸರು ಹೇಳುತ್ತೀರಾ' ? ಎಂದು ಕೇಳಿದೆ. 'ಹೇಳುತ್ತೇವೆ' ಎಂದ. ಹಾಗಾದರೆ ಹೆಂಡತಿಯ ಆಯುಷ್ಯ ಕಡಿಮೆ ಆಗುವದಿಲ್ಲವೇ' ? ಎಂದರೆ ಹೆಂಡತಿಯೇ ಹೇಳಿದಳು—ಆದರೆ ಒಳ್ಳೆಯದೇ. ನಾವು ಹಾರೈಸುವುದು ಅದನ್ನೇ, ಅವರ ಕಣ್ಣ ಮುಂದೆ ನಮ್ಮ ಕಣ್ಣು ಮುಚ್ಚಿದರೆ ಸಾಕು. ಅದಕ್ಕಿಂತ ಹೆಚ್ಚಿನ ಭಾಗ್ಯ ಬೇರೆ ಇದೆ. ಮುತ್ತೈದೆಯಾಗಿ ಸಾಯುವುದನ್ನೇ ನಾವು ಬಯಸುತ್ತೇವೆ.' ಇದಕ್ಕೆ ಗಂಡನು ಹೇಳಿದ್ದು — 'ಗಂಡು ತಾಮ್ರ ಪಾತ್ರೆ ಹೆಣ್ಣು ಮಣ್ಣಿನ ಪಾತ್ರೆ.' ಹೆಣ್ಣಿನ ಬಗ್ಗೆ ಹೇಳಿದ ಈ ಮಾತು ಹಿಗ್ಗಿಸಿದಷ್ಟೂ ಅರ್ಥವ್ಯಾಪ್ತಿ ಪಡೆಯುತ್ತ ಹೋಗುತ್ತದೆ. ಇಲ್ಲಿ ಧನಾತ್ಮಕ ಗುಣಗಳು ಎದ್ದು ಕಾಣಿಸುತ್ತದೆ. ಸಹಜ ಬೆಳವಣಿಗೆಗೆ ಪೂರಕವಾಗಿ, ಪುರುಷರ ವಿಚಾರಕ್ಕೆ ಪರವಾಗಿ ನಡೆದುಕೊಳ್ಳುವ ರೀತಿ ಆ ಸಮಾಜದ

ಸಂಸ್ಕೃತಿಯ ಒಳನೋಟವನ್ನು. ಬ್ರಾಹ್ಮಣ ಸಮಾಜದ ಹೆಬ್ಬಾರ ಕುಟುಂಬವ ಜನಪದ ಸಂಗತಿ, ಯೋಚನೆ, ವಿಚಾರ ಮಾಡುವ ಕ್ರಮವನ್ನು ಹೇಳುವುದರ ಜೊತೆಗೆ ಸ್ತ್ರೀಯುತ್ವ. ಸ್ತ್ರೀಯಾತ್ಮಕತೆಯ ಗುಣಗಳು ಇಲ್ಲಿ ಎದ್ದು ಕಾಣುತ್ತವೆ.

ಸಾಂಪ್ರದಾಯ–ಜೀವನ

ಮಹಿಳಾ ಸಮಸ್ಯೆಗಳು :

ಬ್ರಾಹ್ಮಣ ಸಮಾಜದಲ್ಲಿ ಮಹಿಳೆ ಎದುರಿಸುವ ವೈಯಕ್ತಿಕ ಸಮಸ್ಯೆಗಳು ಮೂರು : ಪೂಜಾ ಸಂಸ್ಕಾರ ಇಲ್ಲದಿರುವುದು, ಮುಟ್ಟಾದಾಗ ಮೂರುದಿನ ಅನುಭವಿಸುವ ಅನುಭವ, ವಿಧವೆಯಾದವಳು ತನ್ನ ಜೀವ ಹೋಗುವವರೆಗೂ ಅನುಭವಿಸುವ ಯಾತನೆ. ಈ ಪ್ರಮುಖ ಸಮಸ್ಯೆಗಳಿಂದ ಬಿಡುಗಡೆ ಸಿಗದೇ ಸಮಾಜದ ತುಳಿತಕ್ಕೆ ಸಿಕ್ಕು ತನ್ನತನದ ಅಭಿಲಾಷೆಗಳನ್ನೆಲ್ಲ ಬಲಿಕೊಟ್ಟು ನರಳುವ ಬಗೆ ತುಂಬಾ ಕಷ್ಟಕರವಾದುದು.

ಪೂಜಾ ಸಂಸ್ಕಾರ :

ಪ್ರಾಚೀನ ಕಾಲದಲ್ಲಿ ಗುರುಕುಲ ಪದ್ಧತಿ ಇದ್ದುದರಿಂದ ಹೆಣ್ಣುಮಕ್ಕಳು ದೂರ ದೂರದ ಪ್ರದೇಶಗಳಿಗೆ ಹೋಗಿ ವಿದ್ಯಾಭ್ಯಾಸವನ್ನು, ಸಂಸ್ಕೃತ ಶ್ಲೋಕಗಳನ್ನು ಅಧ್ಯಯನ ಮಾಡುವುದು ಸಾಧ್ಯವಿರಲಿಲ್ಲ. ಈಗ ಶಾಲೆ ಕಾಲೇಜುಗಳಲ್ಲಿ ಸಂಸ್ಕೃತ ಕಲಿತರೂ ಹೆಣ್ಣುಮಕ್ಕಳು ಪೂಜೆಗೆ ಅನರ್ಹರು. 'ನೀವು (ಗಂಡಸರು) ಪೂಜಿಸುವುದು ಸ್ತ್ರೀ ದೇವತೆಯಾದ ಅಮ್ಮಾವ್ರ ಪೂಜೆ ಎಂದು ಹೇಳುತ್ತೀರಿ. ಆದರೆ ಹೆಣ್ಣು ಪೂಜಿಸಲು ಅನರ್ಹಳು ಎನ್ನುತ್ತೀರಿ ಇದೆಂಥ ನಿಶಿದ್ಧತೆ'? ಎಂದಾಗ- 'ನಾವು ಹೆಣ್ಣು ದೇವತೆಯನ್ನೇ ಪೂಜಿಸಲಿ, ಗಂಡು ದೇವತೆಯನ್ನೇ ಪೂಜಿಸಲಿ ಅದು ಪ್ರಮುಖವಲ್ಲ, ಹೆಣ್ಣಿಗೆ ಮಾತ್ರ ಪೂಜೆಗೆ ಅವಕಾಶವಿಲ್ಲ. ಇದು ಇಂದಿನದಲ್ಲ. ಮೊದಲಿನಿಂದಲೂ ನಮ್ಮಲ್ಲಿ ಈ ಪೂಜಾ ಕ್ರಿಯಾಚರಣೆಗೆ ಇದ್ದಂಥ ಕಟ್ಟಳೆ, ಇನ್ನು 45 ವರ್ಷ ಮಿಕ್ಕಿದ ಋತುಸ್ನಾಯು ಆಗುವಂಥದು ನಿಂತ ಮೇಲೆ ಅವಳಿಗೆ ಪೂಜಿಸುವ ಅಧಿಕಾರ ಬರುತ್ತದೆ. ರಜಸ್ವಲೆ ದೋಷವಿರುವುದರಿಂದ ಪೂಜಿಸುವ ಅಧಿಕಾರವಿಲ್ಲವೆಂದು ಕೆಲವರು ಹೇಳಿದರೆ, ಮತ್ತೊಬ್ಬರು 'ಮಂತ್ರಗಳಿಂದ ಆಹ್ವಾನ ಮಾಡಿ ಪ್ರತಿಷ್ಠಾನ ಮಾಡಿದಂಥ ಸಾಲಿಗ್ರಾಮ, ಗಣಪತಿ, ಅಮ್ಮಾವ್ರು ಇತ್ಯಾದಿ ದೇವತೆಗಳ ಪೂಜೆಗೆ ಸ್ತ್ರೀ ಅನರ್ಹಳು. ಕಟ್ಟು ಹಾಕಿದ ಫೋಟೋಗಳನ್ನು ಮಾತ್ರ ಆಕೆ ಪೂಜಿಸಬಹುದು. ಗೌರಿ, ಸಂಕಷ್ಟಿ, ಇತ್ಯಾದಿ ವ್ರತಗಳನ್ನು ಮಾಡಬಹುದೇ

ವಿನಾ ಪೂಜೆ ಮಾಡಲು ಅಲ್ಲ. ಎಲ್ಲರೂ ಕೂಡಿಯೇ ಭಜನೆ, ದೇವರನಾಮಸ್ಮರಣೆ ಮಾಡುತ್ತೇವೆ. ಇಲ್ಲಿ ಎಲ್ಲರಿಗೂ ಅವಕಾಶವಿದೆ. ಸತ್ಯನಾರಾಯಣ ಪೂಜೆ ಮಾಡುವಾಗ ಕಳಸದಲ್ಲಿ ದೇವರನ್ನು ಆಹ್ವಾನ ಮಾಡುತ್ತೇವೆ. ಮಂತ್ರದಿಂದಲೇ ಕಳಸದಲ್ಲಿ ಕಳೆ ತುಂಬಿ, ಕಳಸದಲ್ಲಿ ದೇವತಾ ಪ್ರತಿಷ್ಠಾಪನಾ ಕಾರ್ಯವಾಗುತ್ತದೆ. ಇಲ್ಲಿ ಸತಿ-ಪತಿಗಳು ಕೂಡಿಯೇ ಪೂಜೆಗೆ ಕುಳಿತರೂ ಪತಿಯ ಮೂಲಕವೇ ದೇವರಿಗೆ ಪೂಜೆ ಸಲ್ಲುತ್ತದೆ. ಆವಳು ದೂರದಿಂದ ಅರಿಶಿಣ-ಕುಂಕುಮ ಗಂಧಾಕ್ಷತೆಗಳನ್ನು ಹಾಕಬೇಕು. ಅನ್ಯ ಜಾತಿಯವರನ್ನು ಇಂಥ ಸಮಯದಲ್ಲಿ ಒಳಗೆ ಸೇರಿಸಿಕೊಳ್ಳುವುದಿಲ್ಲ' ಎಂಬ ವಿವರಣೆ ಸಿಕ್ಕಿತು.

ಧಾರ್ಮಿಕ ಕ್ರಿಯಾಚರಣೆಗೆ ಸಾಮಗ್ರಿ ಒದಗಿಸಿಕೊಡುವವಳು ಹೆಣ್ಣು. ಪೂಜಿಸಿಕೊಳ್ಳುವ ದೇವತೆ ಹೆಣ್ಣು, ಪೂಜಾರ್ಹ ಮಾತ್ರ ಗಂಡು. ಇಲ್ಲಿ ಮಾನಸಿಕವಾಗಿ ಹೆಣ್ಣಿಗೆ ತೊಂದರೆಯಾಗುವುದು ಸಹಜವಾದರೂ, ಆ ಸಮಾಜದ ಸ್ತ್ರೀಯರು ಹಾಗೆಂದು ಹೇಳಿಕೊಳ್ಳುವುದಿಲ್ಲ. ಏಕೆಂದರೆ ಮುಂಚಿನಿಂದಲೂ ಬ್ರಾಹ್ಮಣ ಸಮಾಜದಲ್ಲಿ ಹೀಗೇ ಎಂಬ ನಂಬಿಕೆ ಹೆಣ್ಣಿಗೆ. 'ದೇವರಿಗೆ ನೈವೇದ್ಯವನ್ನು ಹೆಣ್ಣು ಮಕ್ಕಳು ತಯಾರಿಸಿದರೆ ಆಗುತ್ತದೆಯೇ ? ಗಂಡಸರೇ ತಯಾರಿಸಬೇಕೋ' ? ಎಂದಾಗ 'ಮದುವೆಯಾದ ಹೆಂಗಸು ಸ್ನಾನ ಮಾಡಿ, ಮಡಿಯುಟ್ಟು, ಇಲ್ಲವೇ ಒದ್ದೆಯಲ್ಲಿಯೇ ನೈವೇದ್ಯ ತಯಾರಿಸಿಕೊಟ್ಟರೆ ಆಗುತ್ತದೆ. ಅಲ್ಲದೇ ಕೂದಲು ತೆಗೆದ ವಿಧವೆ ಮಡಿಯಿಂದ ಅಡಿಗೆ ಮಾಡಿಕೊಟ್ಟರೂ ಆಗುತ್ತದೆ. ಕನ್ಯೆಯರು, ಕೂದಲು ತೆಗೆಯದ ವಿಧವೆಯರು ಇದಕ್ಕೆ ನಿಷಿದ್ಧರು. ನೈವೇದ್ಯ ಮಾಡುವುದು ಕೂಡ ಆಗಮೋಕ್ತ ಪ್ರಕಾರ ಪ್ರತಿಷ್ಠಾಪನೆ ಆದ ದೇವರಿಗೆ ಮಾತ್ರ. ಅಮ್ಮನವರೇ ಆದಿರಲಿ, ಈಶ್ವರನೇ ಇರಲಿ, ಯಾರೇ ಇದ್ದರೂ ಮಡಿಯಿಂದ ಮಾಡಿದ ಆಹಾರ ಪದಾರ್ಥದ ನೈವೇದ್ಯ. 'ಉಳಿದ ಕಟ್ಟಿನ ಫೋಟೋಗಳಿಗೆ ಕಲ್ಲುಸಕ್ಕರೆ ಹಣ್ಣು ಇತ್ಯಾದಿಗಳ ನೈವೇದ್ಯವಾದರೂ ನಡೆಯುತ್ತದೆ. ನಾವು ಅಮ್ಮನವರಿಗೆ ನಮ್ಮ ಆಸ್ತಿಯನ್ನೇ ಬಿಟ್ಟುಕೊಟ್ಟಿದ್ದೇವೆ. ಹೀಗಾಗಿ 14 ವರ್ಷ ಅಂಗಳದಲ್ಲಿದ್ದುಕೊಂಡೇ ಸ್ವಂತ ದುಡಿದು ಇಷ್ಟೆಲ್ಲ ಆಸ್ತಿ ಮಾಡಿಕೊಂಡಿದ್ದೇವೆ. ಈಗ ಯಾವ ತಾಪತ್ರಯವಿಲ್ಲ' ವೆಂಬುದು ನಾರಾಯಣ ಹೆಬ್ಬಾರರ ಹೇಳಿಕೆ.

ಮುಟ್ಟಾದಾಗ :

ಮುಟ್ಟಾದವಳು ನಾಲ್ಕು ದಿನ ಚಾಂಡಾಲ ಕನ್ಯೆ ಆಗಿರುತ್ತಾಳೆ. ಅದಕ್ಕಾಗಿ ಅವಳನ್ನು ದೂರ ಇರಿಸಿ, ಎಲ್ಲವನ್ನೂ ಎತ್ತಿಹಾಕುವುದು (ಊಟ, ಉಡಿಗೆ ಹಿಡಿದುಕೊಂಡು ಎಲ್ಲವನ್ನು). ಬೇಕಾದಷ್ಟು ಕೆಲಸಗಳನ್ನು ಮಾಡಿಸಿಕೊಂಡು ನೀರು ಚಿಮು

ಚಿಮುಕಿಸಿ ಶುದ್ಧ ಮಾಡಿಕೊಂಡು ತಾವು ಮುಟ್ಟಬಹುದೆಂಬ ಭಾವನೆ. ಈ ಸ್ಥಿತಿಯಲ್ಲಿ ಅವಳ ಮನದಲ್ಲಿ ನೋವಿರುವುದು ಸಹಜ. ಯಾವುದನ್ನೂ ವಿರೋಧಿಸುವಂತಿಲ್ಲ. ಈಗಿನ ಕಾಲದ ಹುಡುಗಿಯರು ಇದನ್ನು ಅಲ್ಲಗಳೆಯುತ್ತಾರೆ. ನೀರು ಹಾಕಿಕೊಳ್ಳುತ್ತಾರೆ, ದೇವರ ಮನೆಯನ್ನು ಬಿಟ್ಟು ಎಲ್ಲೆಡೆ ಸುತ್ತುತ್ತಾರಂತೆ. ಇದು ಅವರು ತಮ್ಮ ಸಮಾಜ, ಸಂಸ್ಕೃತಿ, ಸಂಪ್ರದಾಯದ ಗೆರೆಗಳನ್ನು ಮೆಟ್ಟಿ ನಿಲ್ಲುವ ಪ್ರಯತ್ನವೆಂದೆನ್ನಬಹುದು. ಬಾಣಂತಿಯಾದವಳೂ ಹನ್ನೊಂದು ದಿನ ಮೈಲಿಗೆ ನಿಯಮಕ್ಕಂಟಿಕೊಂಡು ಮಗುವಿನೊಂದಿಗೆ ಹೊರಗೇ ಉಳಿಯಬೇಕಾಗುತ್ತದೆ. 11ನೇ ದಿನ ಅವಳು ಶುದ್ಧ ಆಗುತ್ತಾಳೆ, ಅವಳನ್ನು ಮುಟ್ಟಿದವರು ಕೂಡ ಒಳ ಪ್ರವೇಶ ಮಾಡುವಂತಿಲ್ಲ. ಒಳಗೆ ಬರಬೇಕಾದರೆ ನೀರು ಹಾಕಿಕೊಂಡೇ ಬರಬೇಕು. ಕುಟುಂಬ ಸಂಬಂಧಿ ವ್ಯಕ್ತಿಗಳು ಸತ್ತಾಗಲೂ ಕೂಡಾ ಮೈಲಿಗೆ ಇರುತ್ತದೆ. ಈ ಎಲ್ಲ ನಿಶಿದ್ಧತೆಗಳು ಬಹಳಷ್ಟು ಸಮಸ್ಯೆಗಳನ್ನು ತಂದೊಡ್ಡುತ್ತವೆ. ಇದರಿಂದ ಬಿಡುಗಡೆ ಸಾಧ್ಯವಿಲ್ಲದೇ ಈ ವರ್ತುಲದಲ್ಲೇ ಹೆಣ್ಣು ತೊಳಲಬೇಕಾಗುತ್ತದೆ. ಈಗಿನ ಕೆಲವೊಂದು ಹುಡುಗಿಯರಲ್ಲಿ ಮಾತ್ರ ಸ್ತ್ರೀವಾದಿತ್ವದ ಮನೋಭಾವ ಎದ್ದು ಕಾಡಿತು.

ವಿಧವೆ ಯಾತನೆ :

ಇನ್ನು ವಿಧವೆಯ ಗೋಳಂತೂ ಹೇಳತೀರದಷ್ಟು. ಗಂಡ ಸತ್ತ ಹೆಂಡತಿ ಮುಂಡೆ ಬೋಳಿಸಿಕೊಳ್ಳದೇ ತಲೆಗೂದಲನ್ನು ಹಾಗೇ ಇಟ್ಟುಕೊಂಡರೆ ಆ ಸಮಾಜ ಅವಳನ್ನು ದಂಡಿಸುತ್ತದೆ, ಕಿರಿಕಿರಿ ಕೊಡುತ್ತದೆ. ಹೀನ ದೃಷ್ಟಿಯಿಂದ ನೋಡುತ್ತದೆ. ಅವಳು ಅನುಭವಿಸುವ ಮಾನಸಿಕ ವೇದನೆ— ತುಪ್ಪ ಸುಡುತ್ತಿದ್ದರೂ ಉಗುಳುವಂತಿಲ್ಲ ನುಂಗುವಂತಿಲ್ಲ ಎಂಬಂತೆ. ಕೂದಲಿಟ್ಟುಕೊಂಡ ವಿಧವೆಯು ಎದುರೇ ಗಂಡಸರು ಹೀನಾಯಮಾನವಾಗಿ ಬೈದರೂ ಅವಳು ತಲೆ ತಗ್ಗಿಸಿಕೊಂಡು ಸುಮ್ಮನೇ ಕುಳಿತಿರುವದನ್ನು ನೋಡಿದ ನನಗೇ ಅಯ್ಯೋ ಅನಿಸಿತು. ವಿಧವೆ ಯಾವುದೇ ಮಂಗಲ ಕಾರ್ಯದಲ್ಲಿ ಭಾಗಿಯಾಗುವಂತಿಲ್ಲ. ನೋಡುವಂತಿಲ್ಲ, ಏನನ್ನೂ ಕೇಳುವಂತಿಲ್ಲ. ಅವಳೇ ನರಕದ ಕೂಪ ಎನ್ನುವಂತೆ ನೋಡಿ, ಬಾಯಿಂದಲೂ ಹೇಳುತ್ತಾರೆ : 'ಅವಳೇ ನರಕವಿದ್ದಂತೆ. ಸ್ವರ್ಗದ ಬಾಗಿಲು ಅವಳ ಭಾಗಕ್ಕೆ ಮುಚ್ಚಿರುತ್ತದೆ.' ಮೂಕ ಪಶುವಿನಂತೆ ಕೂದಲು ತೆಗೆಯುವ ವಿಧವೆ ಇವನ್ನೆಲ್ಲ ಅನಿಸಿಕೊಂಡು ಸುಮ್ಮನಿದ್ದು ಬಿಡುತ್ತಾಳೆ. ತಾನು ಕೂದಲು ತೆಗೆಯುವುದು ಮಹಾಪಾಪವೆಂಬಂತೆ- ತಾನೊಬ್ಬ ಅಪರಾಧಿಯೆಂಬಂತೆ ಅವಮಾನ ಸಹಿಸಿಕೊಳ್ಳುವ ದೃಶ್ಯವನ್ನು ಕಣ್ಣಾರೆ ಕಂಡೆ. ಮಂಗಲಕಾರ್ಯ ದೂರವಿರಲಿ, (ದಿನವೂ ಹೊಸ್ತಿಲು ಸಾರಿಸಿ ಹೊಸ್ತಿಲ ಮೇಲೆ ರಂಗವಲ್ಲಿಯ ಗೆರೆ ಬರೆಯುವ ಸಂಪ್ರದಾಯ ಎಲ್ಲೆಡೆಯೂ ಕಾಣಸಿಗುತ್ತದೆ). ಬ್ರಾಹ್ಮಣ ಕುಟುಂಬದ

ವಿಧವೆ ಹೊಸ್ತಿಲು ಸಾರಿಸಬಹುದೇ ವಿನಾ ಅದರ ಮೇಲೆ ಗೆರೆ ಬರೆಯುವಂತಿಲ್ಲ. ಪೂಜೆಗೆ ಹೂವನ್ನು ಎತ್ತಿ ತಂದು ಕೊಡಬಹುದು. ಕಸಗುಡಿಸಬಹುದು, ಚಿಕ್ಕ ಮಕ್ಕಳನ್ನು ಆಡಿಸಬಹುದು ಹೊರತು ಯಾವುದೇ ಮಂಗಲ ಕಾರ್ಯಗಳಲ್ಲಿ ಅವಳ ನೆರಳು ಕೂಡಾ ಬೀಳುವಂತಿಲ್ಲ. ಕೂದಲು ತೆಗೆಯದ ವಿಧವೆಗೆ ಇದೊಂದು ಸಂಗ ಲಾರದ ತುತ್ತು. ಜೀವಂತ ಚಿತ್ರ ಹಿಂಸೆಯೇ ಸರಿ. ಇಷ್ಟಾದಾಗ್ಯೂ ತನ್ನದೇ ತಪ್ಪೆಂದು ತಾಳಿಕೊಂಡು ಹೋಗುವುದೊಂದೇ ಆಕೆಗೆ ಉಳಿದ ಮಾರ್ಗ.

ಮಹಿಳೆ-ಕೆಲ ಘಟನೆಗಳು :

ಸಂದರ್ಶನದ ಮುಖಾಂತರ ಕೆಲವೊಂದು ಅನಿರೀಕ್ಷಿತ ಘಟನೆಗಳು ಸಂಭವಿಸಿರುವದು ತಿಳಿದು ಬಂದಿತು, i) ಸತಿಸಹಗಮನ ii) ಸತ್ತಳೆಂದೇ ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಬಾಣಂತಿಯೊಬ್ಬಳ ದಹನ. iii) ವಿಧವಾ ಪುನರ್ವಿವಾಹ.

ಸತಿ ಸಹಗಮನ :

"ಸುಮಾರು 50 ವರ್ಷಗಳ ಹಿಂದೆ ಹಲಸು ನಾಡು ಎಂಬಲ್ಲಿ ಐತಾಳ ಬಾಳಪ್ಪಯ್ಯನವರ ಕಾಲಕ್ಕೆ ಸತಿಸಹಗಮನ ಪದ್ಧತಿ ನಮ್ಮ ಬ್ರಾಹ್ಮಣ ಸಮಾಜದಲ್ಲೂ ಜಾರಿಯಲ್ಲಿತ್ತು. ಪತಿ ಸತ್ತೊಡನೇ ಸತಿಯಾದವಳೂ ಗಂಡನಿಗೆ ಸತ್ತಾಗ ಮಾಡುವ ವಿಧಿಕ್ರಿಯಾಚರಣೆ ಸಂಸ್ಕಾರದಂತೆ ಸ್ವತಃ ತಾನೇ ಎಣ್ಣೆಯನ್ನು ಹಚ್ಚಿಕೊಂಡು, ಸೀಗಕಾಯಿಯನ್ನು ಹಚ್ಚಿಕೊಂಡು. ಬಿಸಿನೀರಿನಿಂದ ಸ್ನಾನ ಮಾಡಿದಳಂತೆ. ಮದುಮಗಳಂತೆ ಸಿಂಗರಿಸಿಕೊಂಡು ಮನೆಯ ಮುಂಚಿನ ಬಾಗಿಲದ ಹೊಸ್ತಿಲು ಮೇಲೆ ಕುಳಿತು ವೀಳ್ಯದೆಲೆಯನ್ನು ಕುಟ್ಟಿ ಆ ತಾಂಬೂಲವನ್ನು ಮೆಲ್ಲುತ್ತ ತನ್ನ ಪತಿಯ ಶವದ ಹಿಂದೆಯೇ ಹೆಜ್ಜೆ ಹಾಕಿ ಗಂಡನ ಜೊತೆಯಲ್ಲಿ ತಾನೂ ಸ್ವಯಂಸ್ಫೂರ್ತಿಯಿಂದ ಚಿತೆಗೆ ಆಹುತಿಯಾದಳು. ಅವಳೇ ಸ್ವತಃ ಚಿತೆಯಲ್ಲಿ ದಹನವಾಗಲು ಹೋದರೂ ಕೂಡಾ, ಚಿತೆಯಿಂದಾಗುವ ದೈಹಿಕ ತಾಪವನ್ನು ಸಹಿಸದೇ ಹೋದಾಳು ಎನ್ನುವ ಭಯದಿಂದ ಸಮಾಜದವರು 12 ಜಾತಿಯ ರಣಭೇರಿಯನ್ನು ಬಾರಿಸಲು ಆಜ್ಞೆ ಮಾಡಿದ್ದರಂತೆ, ಏಕೆಂದರೆ ತಪ್ಪಿ ಆಕೆ ಚೀರಿದ ದನಿಯೇನಾದರೂ ಕೇಳಿದರೆ ಅಪಶಕುನವೆಂಬ ನಂಬಿಕೆ. ಅಂದುಕೊಂಡಂತೆ, ಆಕೆ ಚೀರಿದ, ನರಳಿದ ದನಿ ಕೇಳಿದ್ದಕ್ಕಾಗಿ, ಶ್ರೀಮಂತಿಕೆಯ ಮನೆತನ ಇಂದು ಬಡತನದಿಂದ ಕಷ್ಟಕ್ಕೆ ಗುರಿಯಾಗಿದೆ, ತುತ್ತು ಕೂಳಿಗೂ ಗತಿಯಿಲ್ಲದವರಂತೆ ಆ ವಂಶಜರು ಜೀವನ ಸಾಗಿಸುತ್ತಿದ್ದಾರೆ" ಎಂಬ ಮನೋಭಾವ ವ್ಯಕ್ತವಾಯಿತು.

ಬಾಣಂತಿಯ ದಹನ :

ಇಂಥದೇ ಇನ್ನೊಂದು ಘಟನೆ ಕೊಂಚ ಭಿನ್ನವಾಗಿದೆ. ಸುಮಾರು ನೂರು ವರ್ಷಗಳ ಹಿಂದೆ ಹೆರಿಗೆಯಾದ ಬಾಣಂತಿಯೊಬ್ಬಳಿಗೆ ನಾಲ್ಕು ನೆತ್ತಿಗೇರಿ ಪ್ರಜ್ಞಾಹೀನ

ಸ್ಥಿತಿಯಲ್ಲಿ ಇದ್ದಳಂತೆ. ಅವಳಿಗೆ ಎಚ್ಚರ ತರಿಸುವುದಕ್ಕಾಗಿ ತಲೆಗೂದಲು ಹಿಡಿದು ಜೋರಾಗಿ ಅಲುಗಾಡಿಸುವುದು. ತಲೆಗೆ ಕಾವು ಕೊಡುವುದು. ಮೆಣಸು ಸಣ್ಣಗೆ ಪುಡಿ ಮಾಡಿ ಅವಳ ನಾಲಿಗೆಗೆ ನೆಕ್ಕಿಸುವದನ್ನು ಮಾಡಿದರಂತೆ. ಇಷ್ಟು ಮಾಡಿದಾಗಲೂ ಅವಳಿಗೆ ಪ್ರಜ್ಞೆ ಬಾರದೇ ಹೋಯಿತಂತೆ. ಸತ್ತಿರಬೇಕೆಂದು ಊಹಿಸಿ ವಿಧಿಕ್ರಿಯೆಗಳನ್ನೆಲ್ಲ ಮಾಡಿ ಸ್ಮಶಾನಕ್ಕೆ ಒಯ್ದು ಸೌದೆ ಮೇಲಿಟ್ಟು ಅಗ್ನಿಸ್ಪರ್ಶ ಮಾಡಲು ಸ್ವಲ್ಪ ಹೊರಳಿತಂತೆ ಚಿತೆಯ ತಾಪ ತಡೆಯಲಾಗದೇ ಜಿಗಿದು ಹೊರಬಂದಳಂತೆ.ಆದರೆ ಅರ್ಧ ಬೆಂದು ಹೋದ ದೇಹದ ವಿಕಾರ ಸ್ವರೂಪವನ್ನು ನೋಡಿ, ಇನ್ನು ಇವಳು ಬದುಕಲು ಸಾಧ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ಬಂದ ಪುರುಷರು ಅವಳನ್ನು ಹೊತ್ತು ತಂದು ಅಗ್ನಿಗೆ ಹಾಕಿ ಸುಟ್ಟರಂತೆ. ಅವಳ ಪ್ರತಿಭಟನೆ ಯಾರಿಗೂ ನಾಟಲಿಲ್ಲ. ಪರಿಣಾಮವನ್ನೂ ಬೀರಲಿಲ್ಲ. ಇದರಿಂದ ಸತಿಸಹಗಮನ ಹಾಗೂ ಬಾಣತಿಯ ಬಲಿ ಎರಡೂ ಉದ್ದೇಶಪೂರ್ವಕವಾಗಿ, ಒತ್ತಾಯದಿಂದ ನಡೆದ ಘಟನೆಗಳೇ ವಿನಾ ಸ್ವಯಂಸ್ಫೂರ್ತಿಯಿಂದಾದುವಲ್ಲ.

ವಿಧವಾ ವಿವಾಹ :

ಬ್ರಾಹ್ಮಣ ಸಮಾಜದ ಕಟ್ಟಳೆ, ಸಂಪ್ರದಾಯ, ವಿಧವಾಯಾತನೆಯನ್ನು ಪ್ರತಿಭಟಿಸಿ ಸಿಂತ ವಿಧವಾ ವಿವಾಹದಂಥ ಘಟನೆ, ಸ್ತ್ರೀವಿಮೋಚನಾ, ಸ್ತ್ರೀವಾದಿ ಚಳುವಳಿಯ ಎಳೆ ಜಾನಪದ ಮೂಲಕ ಒಂದ ಸಂಸ್ಕೃತಿಯನ್ನು ಪ್ರಶ್ನಿಸುವದು. ವ್ಯಕ್ತಿ ಸಮುದಾಯದ ಸಂಪ್ರದಾಯ, ಸ್ಥಿತಿಯ ಬಗ್ಗೆ, ವ್ಯಕ್ತಿಗಳ ಬಗ್ಗೆ ಪ್ರಶ್ನಿಸುವದು. ತಮ್ಮ ಸ್ವಾತಂತ್ರ್ಯಕ್ಕೆ ಅಡ್ಡಿ ಉಂಟು ಮಾಡುವಂಥ ಚಟುವಟಿಕೆಗಳನ್ನು ಪರಂಪರೆಯ ಪರ ವಿಚಾರಗಳನ್ನು ಪ್ರಶ್ನಿಸುವ ಋಣಾತ್ಮಕ ಅಂಶಗಳಿಂದ ಕೂಡಿದ ಘಟನೆಯೊಂದು ನನಗೆ ಸಿಕ್ಕಿತು. ಇತ್ತೀಚೆಗೆ ಕಾಳಿಂಗ ಎಂಬುವ ಯಕ್ಷಗಾನ ಕಲಾವಿದರೊಬ್ಬರು ತೀರಿಹೋದರು, ಅವರು ಹೋದ ಮೇಲೆ ಅವರ ಪತ್ನಿ ಬ್ರಾಹ್ಮಣ ಸಮಾಜವನ್ನು ಎದುರು ಹಾಕಿಕೊಂಡು ಬೇರೆ ಜಾತಿಯುವರ ಜೊತೆ ಪುನರ್ವಿವಾಹವಾದಳು. ಇಂತಹರೆಲ್ಲ ಹೀಗೆ ಮಾಡುವದರಿಂದಲೇ ಕಡಗಾಲ ಬಂದಿದೆ ಎಂದು ಗಂಡು ಹೆಣ್ಣು ಇಬ್ಬರೂ ಒಂದೇ ಭಾವನೆ ವ್ಯಕ್ತಪಡಿಸಿದರು. ಫಲದಿಂದ ಪ್ರತಿಭಟಿಸಿ, ಎಲ್ಲರನ್ನೂ ಎದುರು ಹಾಕಿಕೊಂಡು, ಸಂಪ್ರದಾಯದ ಗೆರೆದಾಟಿ ಹೆಜ್ಜೆ ಇಟ್ಟವರು ಸಮಾಜದ ಕೀಳು ದೃಷ್ಟಿಗೆ ಗುರಿಯಾಗುತ್ತಾರೆ. ಸಾಮಾಜಿಕ ಕಟ್ಟಳೆಯ ಪ್ರಕಾರ ಬಾಲ್ಯದಲ್ಲಿ ಮದುವೆಯಾದ 8 ವರ್ಷದ ಬಾಲೆ ವಿಧವೆಯಾದರೂ ವಿಧವೆಯೇ. ಹಿಂದಿನ ಕಾಲದಲ್ಲಿ ಬಾಲ್ಯದಲ್ಲಿಯೇ–ಋತುಮತಿಯಾಗುವದಕ್ಕಿಂತ ಮುಂಚೆಯೇ–ಮದುವೆಯಾಗುತ್ತಿತ್ತು. ಹೀಗಾಗದಿದ್ದರೆ ಅವಳ ಕಣ್ಣು ಕಟ್ಟಿ ಅಡವಿಯಲ್ಲಿ ಬಿಟ್ಟು ಬರುವ ಸಂಪ್ರದಾಯವಿತ್ತು. ಇವತ್ತಿನ ದಿನದಲ್ಲಿ ಇದು ಇಲ್ಲ.

ಆದರೆ ಪುನರ್‌ವಿವಾಹದ ಹಕ್ಕು ಮಾತ್ರ ವಿಧವೆಗೆ ಇಲ್ಲ. ಗಂಡಸು ಮಾತ್ರ ಬೇಕಾದಷ್ಟು ಹೆಣ್ಣುಗಳನ್ನು ಮದುವೆಯಾಗಬಹುದಂತೆ.

ಜನನದಿಂದ ಮರಣದವರೆಗೆ-ವಿಧಿಕ್ರಿಯೆಗಳು

'ಕುರು' ದ್ವೀಪದ ಬ್ರಾಹ್ಮಣ ಸಮಾಜದ ಹೆಬ್ಬಾರ ಕುಟುಂಬದ ಸಾಂಪ್ರದಾಯಗಳಿಗೆ ಸಂಬಂಧಿಸಿದಂತೆ ಜನನದಿಂದ ಮರಣದವರೆಗಿನ ಎಲ್ಲ ಸಾಂಪ್ರದಾಯಗಳ ಬಗ್ಗೆ (ಮೈನೆರೆದಾಗ, ಮದುವೆ, ಕುಬುಸ, ಹೆರಿಗೆ-ಬಾಣಂತಿ, ಮಗುವಿನ ಜನನ-ಕ್ರಿಯಾಚರಣೆಗಳು, ಉಪನಯನ ಇತ್ಯಾದಿ ವಿಷಯಗಳ ಬಗ್ಗೆ) ವಿವರವಾಗಿ ಕೇಳಲಾಯಿತು. ಆಯಾ ಸಾಂಪ್ರದಾಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಹಾಡುಗಳೂ ಬರುತ್ತವೆ.

ಮೈನೆರೆದಾಗ :

ಹುಡುಗಿ ಮೈನೆರೆದದ್ದು ಕಂಡಕೂಡಲೇ ಅವಳನ್ನು ಯಾರೂ ಮುಟ್ಟದೇ ಹೊರಗಿನ ಕೋಣೆಯ ಮೂಲೆಯೊಂದರಲ್ಲಿ ಕೂಡಿಸಲಾಗುತ್ತದೆ, ಸಂಬಂಧಿಕರಿಗೆ ವಿಷಯ ತಿಳಿಸುತ್ತದೆ. ಮೂರು ದಿನ ನೀರು ಹಾಕುವದಿಲ್ಲ. ನಾಲ್ಕನೇ ದಿನ ನೀರು ಹಾಕಿದರೂ ನಾಲ್ಕು ದಿನಗಳವರೆಗೆ ಅವಳು 'ಚಂಡಾಲಕನ್ಯೆ' ಆಗಿರುತ್ತಾಳೆ. ಐದು ಜನ ಮುತ್ತೈದೆಯರು ಕೂಡಿ ಎಳ್ಳುಚಿಗಳಿಯನ್ನು ಕುಟ್ಟುತ್ತಾರೆ. ಕುಟ್ಟುವಾಗ ಹಾಡನ್ನು ಹೇಳುತ್ತಾರೆ. ಎಳ್ಳಚಿಗಳಿ ಕುಟ್ಟುವಾಗ ಹಾಡುವ ಹಾಡು ಎಂದೇ ಅದಕ್ಕೆ ಕರೆಯುತ್ತಾರೆ :

ಮುತ್ತಿನ ಒರಳಿಗೆ ರತ್ನದಾ ಬಳಿ ಒನಕೆ
ಮಿತ್ರಿಯೋರೆಲ್ಲ ನರಹರಿ
ಮಿತ್ರಿಯೋರೆಲ್ಲ ನರಹರಿ
ನರಹರಿಯು ಹಾಡುತ ಕುಟ್ಟಿದರ ಎಳ್ಳು ಚಿಗುಳಿ
ಕುಟ್ಟಿದರೆ ಎಳ್ಳು ಚಿಗುಳೀ ।

ಹವಳದ ಒರಳಿಗೆ ರವೆಯಾದ ತೊಡಿ ಒನಕೆ
ತರದಿಯೋರೆಲ್ಲ ನರಹರಿ, ತರದಿಯೋರೆಲ್ಲ ನರಹರಿ
ನರಹರಿಯು ಹಾಡುತ ತುಳಿದಾರೆ ಎಳ್ಳು ಚಿಗುಳಿ
ತುಳಿದಾರೆ ಎಳ್ಳುಚಿಗುಳಿ ॥

ಚಿನ್ನದ ಒರಳಿಗೆ ರನ್ನದಾ ಬಳೆ ಒನಕೆ
ತರುಣಿಯರೋರೆಲ್ಲಾ ನರಹರಿ
ತರುಣಿಯರೋರೆಲ್ಲಾ ನರಹರಿ
ನರಹರಿಯ ಹಾಡುತ್ತ ಕುಟ್ಟಿದರೆ ಎಳ್ಳುಬಿಗಳಿ
ಕುಟ್ಟಿದರೆ ಎಳ್ಳುಬಿಗಳಿ ॥

ಋತುಮತಿಯಾದ ಹುಡುಗಿಗೆ ಎಳ್ಳುಂಡೆಯನ್ನು, ಸಿಹಿ ಪದಾರ್ಥಗಳನ್ನು ಉಣ್ಣಲು ಕೊಡುವರು. ಮೊದಲೆಲ್ಲ ಮೈನೆರೆಯುವ ಮುಂಚೆ ಹುಡುಗಿಗೆ ಮದುವೆಯಾಗಿರುತ್ತಿತ್ತು. ಹೀಗಾಗಿ ಗಂಡನ ಮನೆಯವರಿಗೆ ಹೇಳಿಕಳಿಸಬೇಕಾಗುತ್ತಿತ್ತು. ಹೋಗುವಾಗ ಪಂಚಕಜ್ಜಾಯ ಮಾಡಿಕೊಂಡು ಹುರಿಯಕ್ಕಿ ಕುಕ್ಕ ಮಾಡಿಕೊಂಡು ಗಂಡನ ಮನೆಗೆ ಒಯ್ಯಬೇಕು. ಒಂದ್ವೇಳೆ ಗಂಡನ ಮನೆಯಲ್ಲಿಯೇ ಮೈನೆರೆದಿದ್ದರೆ, ತವರು ಮನೆಯವರು ಪಂಚಕಜ್ಜಾಯ, ಹುರಿಯಕ್ಕಿ ಜೊತೆಗೆ ಅಕ್ಕಿ, ಕಾಯಿ, ಅರಿಶಿಣ ಕೊಂಬು, ಹೂ ಹಣ್ಣು ಉಡಲು ತೊಡುವ ಸಾಮಾನುಗಳನ್ನೆಲ್ಲ ಒಯ್ಯಬೇಕು. ಗಂಡನ ಮನೆಯಲ್ಲಿ ಮೈನೆರದರೆ ಹೆಣ್ಣಿನ ಮನೆಯಿಂದ ಹಾಲು ತುಪ್ಪ ಬರಬೇಕು. ಹೆಣ್ಣಿನ ಮನೆಯಲ್ಲಿ ಮೈನೆರೆದರೆ ಗಂಡನ ಮನೆಯಿಂದ ಹುಡುಗಿಗೆ ಹಾಲು ತುಪ್ಪ ಬರಬೇಕು. ಅಂದು ಬಂದವರಿಗೆಲ್ಲ ಕಡುಬಿನ ಊಟದ ವ್ಯವಸ್ಥೆ ಮಾಡಿರುತ್ತಾರೆ. ಮೂರೂ ದಿನವೂ ಸಂಜೆಗೆ ಹುಡುಗಿಗೆ ಒಟ್ಟೆ ಬನಿಯಾಯಿಸಿ ಚಿನ್ನದ ಒಡವೆ ಹಾಕಿ ಹೂ ಮುಡಿಸುವರು. ಪತಿ, ತೂ. ಸಾಂಗ್ಲಿ ಬೆಟ್ಟು ಹಾಕಿ ಬೆಸಗೊತ್ತಿಗೆ ಮದುಮಗಳನ್ನಾಗಿ ಮಾಡಿ ಕೂಡಿಸಿದರೆ, ರಾತ್ರಿ ಮಲಗುವವರೆಗೂ ಇರುತ್ತಾಳೆ. ಮೂರು ದಿನವೂ ಗೋಡೆಗೆ ಚಿಟ್ಟು ಬರೆಸುತ್ತಾರೆ. ಚಿಟ್ಟು ಬರೆಸುವದು ಒಂದರ ಗೋಡೆಯ ಮೇಲೆ ಸುಣ್ಣದಿಂದ ದುಂಡಗೆ ಬರೆದು, ಎರಡೂ ಹಸ್ತಕ್ಕೆ ಅರಿಶಿಣ ಎಣ್ಣೆ ಹಚ್ಚಿಕೊಂಡು ಎರಡೂ ಹಸ್ತದಿಂದ ದುಂಡಾಕೃತಿಯಲ್ಲಿ ಮೇಲೆರಡು ಕೆಳಗೆರಡು ಮಧ್ಯದಲ್ಲೊಂದು ಹಸ್ತವನ್ನು ಮೂಡಿಸುವರು. ಹೀಗೆ ಅಕ್ಷತೆ, ಕುಂಕುಮ ಇಟ್ಟು ಒಡಿಯಬೇಕಂತೆ. ಕುಟ್ಟಿದ ಎಳ್ಳುಬಿಗಳಿಯನ್ನು ಹೊಯ್ದು ಚಿಟ್ಟಕ್ಕೆ ಸಿಂಪಡಿಸಬೇಕಂತೆ, ಆಮೇಲೆ ಪಾಳೆಲೆಯಿಂದ ಬೆಗಳು ಮೂಡಿಸುವದು. ನಾಲ್ಕನೆಯ ದಿನವೂ ತಲೆಸ್ನಾನ ಮಾಡಿಸಿ ಗಂಡನ ಮನೆಯವರ ಎದುರು ಚಿಟ್ಟು ಬರೆಸುತ್ತಾರೆ. ಈ ಸಂವರ್ಭದಲ್ಲಿ ಹಾಡುಗಳನ್ನು ಹೇಳುತ್ತಾರಂತೆ. ಹೀಗೆ ತವರು ಮನೆಯವರು ಹಾಡುವ ಹಾಡಿಗೆ ಪ್ರತಿಯಾಗಿ ಜರಿಯುವ ಹಾಡನ್ನು ಗಂಡನ ಮನೆಯವರು ಹೇಳುತ್ತಾರಂತೆ. ಚಿಟ್ಟಿನ ಆಕೃತಿ ದುಂಡಗೆ ಇರುತ್ತದೆಯೆಂದು ಹೇಳಿ ಐದು ಹಸ್ತ ಮುದ್ರೆಗಳನ್ನು ಒತ್ತಿಸುತ್ತೇವೆಂದರು.

ತವರು ಮನೆಯವರು ಚಟ್ಟು ಹೊಯ್ಯುವಾಗ ಹಾಡುವ ಹಾಡು ;

ಪಟ್ಟೆಸೀರೆಯ ಸೆರಗು ಸುತ್ತೀ ಬಂದಲೆಯುತ
ಮುತ್ತಿನೋಲೆ ಕಿವಿಯುಲ್ಹೊಳೆಯುತಾ
ಮುತ್ತಿನೋಲೆ ಕಿವಿಯುಲ್ಹೊಳೆಯುತಾ
ಹೊಳೆಯುತ ತಂಗಮ್ಮ ಕಸ್ತೂರಿಯಲಿ ಚಟ್ಟನ್ಹೊಯ್ಸ್ವರೆ
ಕಸ್ತೂರಿಯಲಿ ಚಟ್ಟನ್ಹೊಯ್ಸ್ವರೆ ॥

ಸಾಲೆಸೀರೆಯ ಸೆರಗು ಕೂಡೆ ಬಂದಲೆಯುತ
ಹೂವಿನೋಲೆ ಕಿವಿಯು ಲ್ಹೊಳೆಯುತಾ
ಹೂವಿನೋಲೆ ಕಿವಿಯುಲ್ಹೊಳೆಯುತಾ,
ಹೊಳೆಯುತ ತಂಗಮ್ಮ ಸಾದಿನಲಿ ಚಟ್ಟನ್ಹೊಯ್ಸ್ವರೆ
ಸಾದಿನಲಿ ಚಟ್ಟನ್ಹೊಯ್ಸ್ವರೆ ॥

ಬಣ್ಣ ಸೀರೆಯ ಸೆರಗು ಬೆನ್ನಿಗೆ ಬಂದಲೆಯುತ
ಚಿನ್ನದ್ವಾಲೆ ಕಿವಿಯುಲ್ಹೊಳೆಯುತ
ಚಿನ್ನದ್ವಾಲೆ ಕಿವಿಯ ಲ್ಹೊಳೆಯುತ
ಹೊಳೆಯುತ ತಂಗೆಮ್ಮ ಗಂಧದಲಿ ಚಟ್ಟನ್ಹೊಯ್ಸ್ವರೆ
ಗಂಧದಲಿ ಚಟ್ಟನ್ಹೊಯ್ಸ್ವರೆ ॥

ತವರು ಮನೆಯವರು ಹಾಡಿದ ಈ ಹಾಡಿಗೆ ಪ್ರತಿಯಾಗಿ ತೆಗಳುವ ಹಾಡನ್ನು ಗಂಡನ ಮನೆಯವರು ಹಾಡುತ್ತಾರಂತೆ:

ಹತ್ತೆಂಟು ಚಟ್ಟನು ಒಟ್ಟಾಗಿ ಹೊಯ್ಕೊಂಡ್ಕಾ
ಹತ್ತಾರೊಳಗೊಂದು ಇಳಿಮುಖಾ
ಹತ್ತಾರೊಳಗೊಂದು ಇಳಿಮುಖಾ
ಇಳಿಮುಖಾನಾವರೆ ನಿನ್ನತ್ತೆ ಕಂಡರೆ ನಗುವಳು
ನಿನ್ನತ್ತೆ ಕಂಡರೆ ನಗುವಳು ॥

ಆರೇಳು ಚಟ್ಟನು ವಾರಂತೆ ಹೊಯ್ಕೊಂಡ್ಕಾ
ಆರಾರೊಳಗೊಂದು ಇಳಿಭಾವಾ
ಆರಾರೊಳಗೊಂದು ಇಳಿಭಾವಾ
ಇಳಿಭಾವನಾದರೆ ನಿಮ್ಮಾವ ಕಂಡರೆ ನಗುವನು
ನಿಮ್ಮಾವ ಕಂಡರೆ ನಗುವನು ॥

ಒಂಬತ್ತು ಚಟ್ಟನು ಒಂದಾಗಿ ಹೊಯ್ಕೊಂಡು
ಒಂಬತ್ತಾರೊಳಗೊಂದು ಇಳಿಭಾಮಾ
ಒಂಬತ್ತಾರೊಳಗೊಂದು ಇಳಿಭಾಮಾ
ಇಳಿಭಾಮಾ ಕಂಡರೆ ನಿನ್ನತ್ತಿಗೆ ಕಂಡರೆ ನಗುವಳು
ನಿನ್ನತ್ತಿಗೆ ಕಂಡರೆ ನಗುವಳು.

ಪುರುಷರ, ಹಿರಿಯರ ಭಯದಿಂದ ಜಾನಪದ ಗರತಿ ತಾನು ಯಾವುದನ್ನು ಮಾತಿನಿಂದ ಹೇಳಲಾಗುವದಿಲ್ಲವೋ ಅದನ್ನು ಹಾಡುಗಳ ಮೂಲಕ ಹೊರಗೆಡವುತ್ತಾಳೆ. ಅವಳ ಹಾಡಿನ ಪೆಟ್ಟುಗಳು ಚಾಟಿಯೇಟಿನಷ್ಟೇ ಬಿರುಸಾಗಿರುತ್ತವೆ, ಹೂವಿನಂತೆ ಮೃದುವಾಗಿಯೂ ಇರುತ್ತವೆ ಆಯಾ ಸಂದರ್ಭಗಳು ಅವಳಿಂದ ಹಾಗೆ ನುಡಿಸುತ್ತವೆ. ಇಂಥಲ್ಲಿ ಆ ಸಮಾಜದ ಸಂಸ್ಕೃತಿಯು ವ್ಯಂಗ್ಯ ಎದ್ದು ಕಾಣಿಸುತ್ತಿರುತ್ತದೆ.

ಚಟ್ಟನ್ನು ಯಾಕೆ ಹೊಯ್ಯುತ್ತಾರೆ ? ಏನಾದರೂ ಕಾರಣ ಇರಬೇಕಲ್ಲ ? ಎಂದು ಕೇಳಿದೆ. "ಮೊದಲ್ಲಿ ರಾಜರ ದಬ್ಬಾಳಿಕೆಯು ಕಾಲವಿತ್ತು. ಚಿಕ್ಕವಯಸ್ಸಿನಲ್ಲಿಯೇ ಮದುವೆ ಆಗುತ್ತಿತ್ತು. ದಬ್ಬಾಳಿಕೆಯಿಂದ ಅತ್ಯಾಚಾರಗಳು ಸಾಕಷ್ಟು ನಡೆಯುತ್ತಿದ್ದವು. ಇಂಥವುಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಚಟ್ಟ ಹೊಯ್ಯುವ ಕಾರ್ಯ ನಡೆಯುತ್ತಿತ್ತು. ಹಸ್ತ ಮುದ್ರಿಕೆ ಮುಸ್ಲಿಂ ದೇವರ ಸಂಕೇತವಾದ್ದರಿಂದ ಅವರು ಮನೆಮನೆಗೆ ಬಂದಾಗ ಆ ಚಿತ್ರವನ್ನು ನೋಡಿ, ಇವರ ಮನೆಯಲ್ಲಿ ಮದುವೆಯಾದ ಬಾಲೆಯರು ಇದ್ದಾರೆಂದುಕೊಂಡು ಮರಳಿಹೋಗುತ್ತಿದ್ದರು. ಟಿಪ್ಪು ಸುಲ್ತಾನನ ಕಾಲದಲ್ಲಿ ಪೂರ್ಣಯ್ಯನ ಮಗಳಿಗೆ ಇಂಥದೇ ದುರವಸ್ಥೆ ಕಾದಿತ್ತು" ಎಂದು ಹಲವು ಉದಾಹರಣೆಕೊಟ್ಟರು.

ಮದುವೆಯಾದ ಮೇಲೆ ಹುಡುಗಿ ಮೈನರೆದದ್ದರಿಂದ ಗಂಡನ ಮನೆಯವರಿಗೆ ಹೇಳಿ ಕಳಿಸುತ್ತೀರಿ. ಹಾಗೇ ಗಂಡವಾದವನನ್ನೂ ಕರಿಸಿ ಸೋಬಾನ ಮಾಡುತ್ತೀರಾ ? ಎಂದು ಕೇಳಲು "ಹೌದು ಗಂಡಿನ ಕಡೆಯುವರು ಹುಡುಗಿಗೆ ಸೀರೆ ಕುಪ್ಪಸ ತರಬೇಕಾಗುತ್ತದೆ." ನೀವೇನಾದರೂ ಗಂಡಿಗೆ ಬಟ್ಟೆ ಮಾಡುತ್ತೀರಾ ? "ಪ್ರೀತಿಯಿದ್ದರೆ, ಇದ್ದುಳ್ಳವ್ರು, ಇದ್ರೆ ಮಾಡುತ್ತಾರೆ ಇಲ್ದಿದ್ರೆ ಇಲ್ಲ. ನಾಲ್ಕುದಿನ ಚಂಡಾಲ ಕನ್ಯೆಯಾದ ಹುಡುಗಿ ಐದನೇ ದಿಸಕ್ಕೆ ಪತಿವ್ರತೆ ಆಗಿರುತ್ತಾಳೆ. ಹೀಗಾಗಿ ಐದನೇ ದಿನವೇ ಋತುಶಾಂತಿ ಪ್ರಸ್ತ ಮಾಡುವ ಸಂಪ್ರದಾಯವಿತ್ತು. ಐದನೇ ದಿಸಕ್ಕೆ ಯಾವ ಮೂರ್ತವನ್ನೂ ನೋಡಬೇಕಾಗಿಲ್ಲ. ಪರಸ್ಥಳಕ್ಕೆ ಹೋಗಿದ್ದರೆ

10 ನೇ ದಿನ ಮಾಡಬೇಕು. ಇನ್ನೂ ಬಹಳದಿನವಾಗುತ್ತಿದ್ದರೆ ಮುಹೂರ್ತನೋಡಿ ಪ್ರಸ್ತಶಾಸ್ತ್ರ ಮಾಡಬೇಕಾಗುತ್ತದೆ." ಈ ಸಂದರ್ಭದಲ್ಲಿ ಹಾಡುಗಳನ್ನು ಹಾಡು ತ್ತೀರಾ ? "ಪ್ರಸ್ತದ ದಿನ ಮುತ್ತೈದೆಯರು ಆರತಿ ಮಾಡಿ ಹಾಡು ಹೇಳುತ್ತಾರೆ."

ಮದುವೆ :

ಎಷ್ಟು ದಿನದಿಂದ ಮದುವೆಯ ಕಾರ್ಯಕ್ರಮಗಳು ನಡೆಯುತ್ತವೆ ? ಮದು ವೆ ಹೆಣ್ಣಿನ ಮನೆಮುಂದೋ ಗಂಡಿನ ಮನೆಮುಂದೋ ? ಹಂದರ, ಒಳ್ಳಕಲ್ಲಪೂಜೆ ಲಗ್ನಪತ್ರ ಕಟ್ಟಿಸುವದು, ಶ್ಯಾಂವಿಗೆ ಮಾಡುವದು. ಬಳೆ ಇಡಿಸುವದು. ಐರಾಣಿ. ಗಂಗಸ್ಥಲ ಇತ್ಯಾದಿ ಪ್ರಶ್ನೆಗಳನ್ನು ಕೇಳಿದಾಗ ಹೆಚ್ಚಿನ ವಿವರಣೆಯನ್ನು ಕೊಡಲಿಲ್ಲ. ಮೇಲಿನ ಈ ಯಾವ ಸಂಪ್ರದಾಯವೂ ತಮ್ಮಲ್ಲಿ ಇಲ್ಲವೆಂದರು. ಕನ್ಯೆಯ ಮನೆಯ ಮುಂದೆ ಮದುವೆ. ಬಳೆ ಇಡಿಸುತ್ತೇವೆ ಮೂರು ದಿನದ ಮದುವೆ ಕಾರ್ಯಕ್ರಮ ನಡೆಯುತ್ತದೆ. ಒಂದನೆಯ ದಿನ ದೇವರ ಕೆಲಸ. ಎರಡನೇ ದಿನ ದಿಬ್ಬಣ. ಬಂದು ಹೋಗುವವರು; ಬೀಗರು ಎರಡನೆಯ ದಿನವೇ ಇಳಿದುಕೊಳ್ಳುತ್ತಾರೆ. ಮೂರನೆ ದಿನ ಮದುವೆಯ ಪ್ರಮುಖ ಕಾರ್ಯಕ್ರಮಗಳು—ಹೋಮ ಹವನ ಇತ್ಯಾದಿ ನಡೆ ಯುತ್ತವೆ. ವಧುವಿನ ಸೋದರಮಾವನದು ಮಹತ್ವದ ಪಾತ್ರವಿರುತ್ತದೆ. ಮದುವೆಗೆ ಸಂಬಂಧಿಸಿದ ಸಂಪ್ರದಾಯದ ಹಾಡುಗಳು ಸಾಕಷ್ಟಿದ್ದು ಆಯಾ ಸಂದರ್ಭಗಳಲ್ಲಿ ಹಾಡುವುದಾಗಿ ಹೇಳಿದರು. ಮದುಮಗಳು ಗಂಡನ ಮನೆ ಸೇರು ವುದಕ್ಕೆ ಗೃಹಪ್ರವೇಶ ಎಂದು ಕರೆಯುತ್ತಾರಂತೆ. (ಇಷ್ಟು ಹೇಳುವದರಲ್ಲೇ ಮಾತು ಬೇರೆಡೆ ತಿರುಗಿ ಮದುವೆ ವಿಷಯ ಇಲ್ಲಿಗೇ ನಿಂತು ಹೋಯಿತು.)

ಕುಬುಸ :

ಗರ್ಭಿಣಿ ಸ್ತ್ರೀಗೆ ಕುಪ್ಪಸ ಮಾಡುವ ಸಂಪ್ರದಾಯ ಇವರಲ್ಲಿ ಇಲ್ಲವಂತೆ, ಅವಳ ಬಯಕೆಯ ತಿಂಡಿ ತಿನಿಸು, ಅಡಿಗೆ ಮಾಡಿ ಉಣಿಸುತ್ತಾರಂತೆ. ಎಂಟನೆಯ ತಿಂಗಳಲ್ಲಿ ಹೆರಿಗೆಗೆ ತವರವರು ಕರೆದುಕೊಂಡು ಹೋಗುತ್ತಾರೆ.

ಹೆರಿಗೆ :

ಗರ್ಭಿಣಿ ಸ್ತ್ರೀಗೆ ಹೆರಿಗೆ ಆದ ಮೇಲೆ ಏನೇನು ಕಾರ್ಯಕ್ರಮಗಳನ್ನು ಮಾಡುತ್ತೀರಿ ? ಐದೇಶಿ, ಕಾಡಿಗೆ ಹಿಡಿಯುವುದು, ಹನ್ನೊಂದೇಶಿ, ನಾಮಕರಣ, ಗಂಗಮ್ಮಗೆ ಹೋಗುವದು, ದೇವಸ್ಥಾನಕ್ಕೆ ಹೋಗುವದು. ಉಡಿತುಂಬುವದು. ಇವೆಲ್ಲವು ನಿಮ್ಮ ಬ್ರಾಹ್ಮಣ ಸಮಾಜದ ಸಂಪ್ರದಾಯಗಳಲ್ಲಿ ಬರುತ್ತವೆಯೋ ? ಮತ್ತೇನಾದರೂ ಬೇರೆ ಕ್ರಿಯಾಚರಣೆಗಳಿವೆಯೋ ? ಎಂದು ಪ್ರಶ್ನಿಸಿದಾಗ :

ಹೆರಿಗೆಯಾದ ಕೂಡಲೇ ಬಾಣತಿ–ಮಗುವನ್ನು 10 ದಿನ ಹೊರಗೇ ಇಡುತ್ತೇವೆ. ಇವಳನ್ನಾಗಲೀ ಮಗುವನ್ನಾಗಲೀ ಯಾರೂ ಮುಟ್ಟುವಂತಿಲ್ಲ. ಮುಟ್ಟಿದವರು ಮನೆ ಒಳಗೆ ಬರಬೇಕಾದರೆ ಸ್ನಾನ ಮಾಡಿಯೇ ಒಳಗೆ ಬರಬೇಕು. ದಶರಾತ್ರಿ ಸೂತಕ ಹನ್ನೊಂದನೆಯ ದಿನ ಕಳೆದು ಶುದ್ಧವಾಗುತ್ತದೆ. ಪಂಚಗವ್ಯ (ಗೋಮೂತ್ರ, ಹಾಲು, ತುಪ್ಪ, ಶಗಣಿ, ಮೊಸರಿನಿಂದ ಕೂಡಿದುದು) ಸಿಂಪಡಿಸಿ ಮನೆಯನ್ನು ಶುದ್ಧಮಾಡಬೇಕು. ನಡುಗಾರ್ತಿ (ಅಗಸರವಳು) ಬಂದು ಕುಟುಂಬ ಸೂತಕ ಬಂದವರೆಲ್ಲರ, ಬಾಣತಿ–ಮಗುವಿನ ಬಟ್ಟೆಯನ್ನು ಒಗೆದು ಮಡಿ ಮಾಡಿ, ಬಿಸಿಲಲ್ಲಿ ಹಸಿ ಇರದಂತೆ ಪೂರ್ಣ ಒಣಗಿಸಿ ತಂದು ಕೊಡುತ್ತಾಳೆ. ಈಗ ಆ ಸಂಸ್ಕೃತಿ ಹೋಗಿದೆ. 11 ನೆಯ ದಿನ ಸೂತಕವಿಲ್ಲದ ಪುರೋಹಿತರನ್ನು ಕರೆದು ತಂದು ನೀರು ತುಂಬಿದ ತಂಬಿಗೆಯಲ್ಲಿ ಪಂಚಗವ್ಯವನ್ನು ಸೇರಿಸಿ ಮಂತ್ರೋಕ್ತ ವಾಗಿ ದರ್ಭೆಯಿಂದ ಅದನ್ನು ಕಡಿಯುವದು. ಹೆಣ್ಣುಮಕ್ಕಳಿಗೆ ಇಲ್ಲಿ ಪ್ರವೇಶ ವಿಲ್ಲವಂತೆ. ಜನಿವಾರ ಹಾಕಿಕೊಳ್ಳುವವರಿದ್ದರೆ ಸ್ನಾನ ಮಾಡಿ ಬಂದು ಪುರೋಹಿತ ರೆದರು ಕುಳಿತರೆ ಜನಿವಾರ ಹಾಕುತ್ತಾರೆ. ಅಕ್ಕಿ, ಕಾಯಿ ಪೂಜೆಮಾಡಿ ದಕ್ಷಿಣೆ ತೆಗೆದುಕೊಂಡು ಹೋಗುತ್ತಾರೆ. ಇನ್ನು ಪುಣ್ಯಾಯ (ನಾಮಕರಣ) ಮಾಡುವಾಗ ಹೋಮ ಮಾಡುತ್ತೇವೆ. ಬಾಣತಿ ಹಾಗೂ ಅವಳ ಪತಿ ಇಬ್ಬರನ್ನು ಪೂಜೆಗೆ ಕೂಡಿಸುತ್ತೇವೆ. ಹೆಣ್ಣು ಮಗುವಿಗೆ 11 ನೆಯ ದಿನ, ಗಂಡು ಮಗುವಿಗೆ 12ನೇ ದಿನ ಇಲ್ಲವೆ 18, 48, ಹೀಗೆ ಎರಡು ತಿಂಗಳವರೆಗೂ ಹೋಗುತ್ತದೆ. ಇದಕ್ಕಿಂತ ಮುಂಚೆಯೇ ಏಳನೆಯ ದಿನ ರಾತ್ರಿ ಮಗು ಜನನ ಆದ ಸ್ಥಾನದಲ್ಲಿ ಒಂದು ತಾಲಿಯಲ್ಲಿ ಹಾಲಿಡುತ್ತೇವೆ. ಎಳ್ಳಿನ ದೋಸೆ ಮಾಡಿ ಇಡುತ್ತೇವೆ. ಮುಂಗಿಲ ಮ್ಯಾಲಕಟ್ಟಿ ಹಾಲಬಟ್ಟಲಲ್ಲಿ ಮುಂಗಿಲನ್ನು ಬಿಡುವುದು. ಆ ದಿನವೇ ರಾತ್ರಿ ಬ್ರಹ್ಮನ ಮಗಳು ವಿಧಿ ಹುಟ್ಟಿದವರ ಜಾಯಮಾನವನ್ನು ಹಣೆಯಲ್ಲಿ ಬರೆದಿಟ್ಟು ಹೋಗಲು ಬರುತ್ತಾಳೆಂಬ ನಂಬಿಕೆ. ಕಾರಣ ತಾಯಿ ಮಗುವನ್ನು ಅದೇ ಸ್ಥಾನದಲ್ಲಿ ಮಲಗಿಸಿರುತ್ತೇವೆ. ಇದಕ್ಕೆ "ಅವಳದತ್ತ" ಎಂಬ ಕಾರ್ಯಕ್ರಮ ಎಂದೂ ಹೇಳುತ್ತೇವೆ. "ಈಗೆಲ್ಲ ಆಸ್ಪತ್ರೆಯಲ್ಲಿ ಹೆರಿಗೆ ಆಗುತ್ತದಲ್ಲ ಅಲ್ಲಿಯೇ ಹೋಗಿ ಈ ಕಾರ್ಯಕ್ರಮ ಮಾಡುತ್ತೀರಾ" ? ಈಗ ಕಾಲ ತುಂಬಾ ಬದಲಾಗಿ ಹೋಗಿದೆ. ಹೀಗಾಗಿ ಇವೆಲ್ಲವನ್ನು ನಡೆಸಲು ಆಗುವದಿಲ್ಲ. ದವಾಖಾನೆಯ ಸಿಸ್ಟರ್ ಎಂಬುವಳೇ ಬರೆಯಬೇಕಷ್ಟೇ" ! ಎಂದು ಹೇಳುವಲ್ಲಿ ಈ ಸಮಾಜದಲ್ಲಿಯ ಸಂಪ್ರದಾಯಗಳ ಸಡಿಲಿಕೆಯನ್ನು ತೋರಿಸುತ್ತದೆ,

ಮಗುವಿನ ಜನನದ ವೇಳೆ ಹೇಗಿದೆ ? ಮುಹೂರ್ತವನ್ನು ನೋಡುತ್ತೀರಾ? ಮಗುವಿನ ತಂದೆ ಇಂಥ ದಿನವೇ ಮಗುವನ್ನು ನೋಡಬೇಕೆಂಬ ಪದ್ಧತಿಯೇ

ನಾದರೂ ಇದೆಯೇ ? "ನಕ್ಷತ್ರ ದೋಷವಿದ್ದರೆ ಶಾಂತಿ ಮಾಡಿಸುತ್ತೇವೆ. ಪುರೋಹಿತರು ಹೇಳಿದಂತೆ ದಾನ ಧರ್ಮಗಳನ್ನು ಮಾಡುತ್ತೇವೆ. ಮಗುವಿಗೆ ಪುಣ್ಯಾಯ ಮಾಡುವದಕ್ಕಿಂತ ಮುಂಚೆ ಮಗುವಿನ ತಾಯಿ-ತಂದೆ ಇಬ್ಬರೂ ಅಶುದ್ಧರಾಗಿರುತ್ತಾರೆ. ಒಂದು ಒಳ್ಳೆ ದಿನ ನೋಡಿ ಗಂಡನ ಮನೆಯವರು ಮಗು ಬಾಣಂತಿಯನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ. ತವರಿನಿಂದ ಒಯ್ದು ತೊಟ್ಟಲ ಮೇಲೆ ಹೊಸ ಸೀರೆ ಹಾಕಿ, ಬಾಣತಿ ತಾಯಿಗೆ, ಅಥವಾ ಬಾಣ ತಿಯ ಚಾಕ್ರಿ ಮಾಡಿದವಳಿಗೆ ಉಡಿಸುತ್ತಾರೆ. ಮತ್ತೆ ಗಂಡನ ಮನೆಯಲ್ಲಿ ಮಗು ವಿಗೆ ಹೆಸರಿಟ್ಟು ಸಿಹಿ ಊಟ ಮಾಡಿಸುತ್ತಾರೆ. ಕಜ್ಜಾಯ ಎಲ್ಲ ಮಂಗಲ ಕಾರ್ಯಗಳಲ್ಲಿ ಪ್ರಮುಖ ಆಹಾರವಾಗಿ ಕಂಡುಬಂದಿತು.

ಮರಣ :

ಮಂಗಲ ಕಾರ್ಯಗಳಲ್ಲಿ ಮಾಡುವಂತೆಯೇ ಸತ್ತಾಗಲೂ ಕೂಡಾ ವಿಧಿ ಕ್ರಿಯೆ ಗಳನ್ನು ಆಚರಿಸುತ್ತೀರಲ್ಲಾ ? ಆಗ ಏನೇನು ಮಾಡುತ್ತೀರಿ? "ಸತ್ತವರಿಗೆ ಎಣ್ಣೆಯನ್ನು ಹಚ್ಚಿ ಶೀಗಾಕಾಯಿಯಿಂದ ಬಿಸಿನೀರಿನ ಸ್ನಾನ ಮಾಡಿಸಲಾಗುತ್ತದೆ. 7 ಕೋಲಿನಿಂದ ಚಟ್ಟ ಕಟ್ಟಿ ಹಲಿಗೆ ಮೇಲಿಟ್ಟು ಹರಿಯದ ಇಡೀ ಬಾಳಿ ಎಲೆ ಹಾಸಿ, ಅದರ ಮೇಲೆ ಮಲಗಿಸಿ, ಕಾಲು ಮಡಿಚಿ, ಕೈ ಜೋಡಿಸಿ ದರ್ಭೆಯಿಂದ ಕಾಲ ಹೆಬ್ಬೆರಳಿಗೂ, ಕೈಯ ಹೆಬ್ಬೆರಳಿಗೂ ಜೋಡಿಸಿ ಕಟ್ಟುತ್ತಾರೆ. ಹೊಸ ಅರಿವೆಯನ್ನು ಮುಚ್ಚಿ ಹಗ್ಗದಿಂದ ಬಿಗಿಯುತ್ತಾರೆ. ಉಪನಯನ ಆದ ಮಗ ತಂದೆಯ ಸಂಸ್ಕಾರಕ್ಕೆ ಅಧಿಕಾರಿ ಯಾಗುತ್ತಾನೆ. ಅವಕ್ಕೆ ಕ್ರಿಯೆ ಹಿಡಿಯುವದು ಎನ್ನುತ್ತಾರೆ. ತಲೆಗೂದಲನ್ನು ಗಂಡುಮಕ್ಕಳೆಲ್ಲ ಅವತ್ತೇ ತೆಗೆಯಬೇಕಾಗುತ್ತದೆ. ಹೆತ್ತ ಮಕ್ಕಳಿಲ್ಲದಿದ್ದರೆ. ಅಥವಾ ಮಕ್ಕಳು ಊರಲ್ಲಿ ಇಲ್ಲದೇ ಹೋದ ಪಕ್ಷದಲ್ಲಿ ಅಣ್ಣತಮ್ಮಂದಿರ ಮಕ್ಕಳನ್ನು ಕರೆಸಿ, ಪುರೋಹಿತರನ್ನು ಕರೆಸಿ ದೀಪದಾನ ಕೊಡಿಸುವ ಶಾಸ್ತ್ರ ಮಾಡುತ್ತಾರೆ. ಆಮೇಲೆ ಹೆಣವನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ಒಯ್ಯುವಾಗ ಮೂರು ಸಾರೆ ನೆಲದಲ್ಲಿಟ್ಟು ಕ್ರಿಯೆ ಹಿಡಿದವ ಕತ್ತಿಯಿಂದ ಬಾರಿಸುತ್ತಾನೆ. ಪುರೋಹಿತರು ಎಳ್ಳಿನ ನೀರು ಬಿಡುತ್ತ ನಾರಾಯಣ, ನಾರಾಯಣ ಅನ್ನುತ್ತ ಜನಿವಾರ ಇಳಿಬಿಟ್ಟುಕೊಂಡು ಮುಂದೆ ಮುಂದೆ ಹೋಗುತ್ತಿರಬೇಕು. ಮತ್ತೆ ಹೆಣವನ್ನು ನೆಲದ ಮೇಲೆ ಇಡಬೇಕು. ಎರಡು ಗೆರೆ ಹಾಕಿ ಎಳ್ಳುನೀರು ಬಿಡಬೇಕು. ಸ್ಮಶಾನಕ್ಕೆ ಒಯ್ದು ಅಲ್ಲಿಟ್ಟು ಪುನಃ ಮೂರನೆಯ ಗೆರೆಯನ್ನು ಹಾಕಿ ಎಳ್ಳು ನೀರು ಬಿಡಬೇಕು. ಹೋದವರು ಮತ್ತೆ ಪ್ರೇತವಾಗಿ ಬಂದು ಕಾಡಬಾರದೆಂದು ಹೀಗೆ ಮಾಡುತ್ತಾರಂತೆ. ಅಪ್ರದಕ್ಷಿಣೆಯಾಗಿ ಮೂರು ಸುತ್ತು ಬರಬೇಕು. ಬಂದ ನಂತರ ದಕ್ಷಿಣಕ್ಕೆ ತಲೆ ಮಾಡಿ ಈಡಮ್ಯಾಲ

ಇಡಬೇಕು. ಹಗ್ಗ ಕತ್ತರಿಸಿ ಕೋಲನ್ನು ಹೊರಗೆ ತೆಗೆದುಕೊಳ್ಳುವದು. ಮೈಯಲ್ಲಿ ತುಂಡು ಬಟ್ಟೆ ಕೂಡ ಇರಬಾರದು. ಜನನ ಕಾಲದಲ್ಲಿ ಹೇಗೆ ಬಂದೆವೋ ಹೋಗು ವಾಗಲೂ ಹಾಗೇ ಹೋಗಬೇಕು. ಮಾವಿನ ಸೊಪ್ಪಿನ ತುಂಡಿನಿಂದ ಮೈ ಮುಚ್ಚಬೇಕು. ಮಾವಿನ ಕಟ್ಟಿಗೆಯಿಂದಲೇ ಶವ ಸುಡಬೇಕು. ಮಾವಿನ ಕಟ್ಟಿಗೆ ಪೂರ್ಣ ಸುಡಲು ಸಾಕಾಗುವಷ್ಟು ಸಿಗದಿದ್ದರೆ, ಒಂದು ತುಂಡನ್ನಾದರೂ ಶಾಸ್ತ್ರಕ್ಕೆ ಹಾಕಲೇಬೇಕು. ಶವ ಮೈಲಿಗೆಯಾಗಿರುತ್ತದೆ. ಶುದ್ಧವಾಗಬೇಕಾದರೆ ಮಾವಿನ ತಳಿರು ಮತ್ತು ಕಟ್ಟಿಗೆ ಬೇಕೇ ಬೇಕಾಗುತ್ತದೆ. ಹಸಿ ಮಾವಿನ ತುಂಡು ಅಭಕ್ಕೂ ಬೇಕು, ಶುಭಕ್ಕೂ ಬೇಕು. ಗಂಡ ಸತ್ತು ಹೆಂಡತಿ ಉಳಿದಿದ್ದರೆ, ಮೂರನೆಯ ದಿನಕ್ಕೋ, ಹತ್ತನೆಯ ದಿನಕ್ಕಾದರೂ ಮುತ್ತೈದೆ ಸಾಮಾನು ತಗೆಯಬೇಕಾಗು ತ್ತದೆ. ಗಂಡು ಮಕ್ಕಳು ಮನೆಯಲ್ಲಿ ಇಲ್ಲದಿದ್ದ ಪಕ್ಷದಲ್ಲಿ ಹೀಗೆ ಮಾಡುವದು, ಒಂದ್ವೇಳೆ ಇದ್ದು ಕ್ರಿಯೆ ಹಿಡಿದಿದ್ದರೆ ಆವತ್ತೇ ಬಳೆ, ಕುಂಕುಮ, ತಾಳಿಯನ್ನೆಲ್ಲ ತೆಗೆಸಲಾಗುತ್ತದೆ,

ಗಂಡಸರು ,

ಹೆಬ್ಬಾರ ಕುಟುಂಬದ ಗಂಡಸರ ಪ್ರಮುಖ ಉದ್ಯೋಗ ಜಾನವಾರು, ಕೃಷಿ, ತೆಂಗಿನ ತೋಟ, ತೆಂಗಿನಿಂದ ಸಿಂದಿ ತಗೆಯುವದು, ಜೇನುತುಪ್ಪ ತಯಾರಿಕೆ, ಡೋಣಿ ಮಾಡುವುದು. ಕಾಯಿಪಲ್ಲೆಗಳನ್ನು ಬೆಳೆಯುವುದು. ಒಂದೇ ಗಿಡಕ್ಕೆ ಕಸಿ ಮಾಡಿದ ಬೇರೆ ಬೇರೆ ಜಾತಿಯ ಬೇರುಗಳನ್ನು ಸೇರಿಸಿ ಒಂದೇ ಗಿಡದಲ್ಲಿ ಮೂರ್ನಾಲ್ಕು ಬಣ್ಣದ ಹೂಗಳನ್ನು, ಹಣ್ಣುಗಳನ್ನು ಬೆಳೆಯುವದು—ರಘುರಾಮ ಹೆಬ್ಬಾರರ ಹವ್ಯಾಸ.ಹನ್ನೆರಡು ತಿಂಗಳೂ ಮಾವಿನಹಣ್ಣನ್ನು ಪಡೆಯಬಹುದೆನ್ನುತ್ತಾರೆ. ಹೊಸ ಹೊಸ ಪ್ರಯೋಗಗಳನ್ನು ಸಸ್ಯಗಳ ಮೇಲೆ ನಡೆಸಿರುವದನ್ನು ತೋರಿಸಿದರು. ತಾಯಿ ಬೇರನ್ನು ಕಿತ್ತುಹಾಕಿದರೆ ಹೀಗೆ ಪಡೆಯಲು ಸಾಧ್ಯವಂತೆ. ಶಾಲೆ ಕಲಿತಿಲ್ಲ ಅಷ್ಟೇ, ಎಲ್ಲ ವಿದ್ಯೆಗಳೂ ಬರುತ್ತವೆ. ಮನೆಯನ್ನು ಕೂಡಾ ಸ್ವಂತ ಕಟ್ಟುತ್ತೇನೆ ಎಂದು ಹೆಮ್ಮೆಯಿಂದ ಹೇಳಿಕೊಂಡರು. ಜೇನು ಮತ್ತು ಹಾಲನ್ನು ಮಾರುವದಿಲ್ಲ ವಂತೆ. ನೆರೆ ಬಂದಾಗ ಸ್ವಂತ ತಯಾರಿಸಿದ ಡೋಣಿಯಲ್ಲಿಯೇ ತಾವೇ ನಡೆಸುತ್ತಾ ಹೋಗಿ ಬರುತ್ತಾರಂತೆ. ನೆರೆ ಬರುವದಕ್ಕಿಂತ ಮುಂಚೆಯೇ ನೆರೆ ಇಳಿಯುವವರೆಗೆ ಬೇಕಾಗುವಷ್ಟು ಸರಕು ಸಾಮಗ್ರಿಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತಾರಂತೆ. ನೆರೆ ಬರುವುದಕ್ಕೆ 'ತಳಿಜುಬ್ಬ' ಎಂದು ಕರೆಯುತ್ತಾರಂತೆ. 'ಕನ್ನಿ' ತಿಂಗಳಲ್ಲಿ ನೆರೆ ಬರುವದ ರಿಂದ ಕನ್ನಿ ತಿಂಗಳು ಇವರಿಗೆ ವಿಶೇಷವಾಗಿದೆಯಂತೆ. ಇವರು ಕರೆಯುವ ತಿಂಗಳ ಹೆಸರುಗಳು : ಸುಗ್ಗಿ, ಹಗ್ಗು. ಬೇಸಿಗೆ, ಕಾರ್, ಆಷಾಡಿ, ಸ್ವಾಣೆ ಅಥವಾ ಸೋಣೆ,

ಕನ್ನಿ, ದಿವಾಳಿ. ಕೊಡಿ, ಧನು, ಮಕರ, ಕುಂಭ ಎಂದು. ಯುಗಾದಿ ಆದ ಮೇಲೆಯೇ ಕೃಷಿ ಆರಂಭ. ಅಂದರೆ 'ಸುಗ್ಗಿನ ತಿಂಗಳು' ಮುಗಿದು 'ಹಗ್ಗಿನ ತಿಂಗಳು' ಬಂದ ಕೂಡಲೇ ಯುಗಾದಿ. ಮರುದಿನವೇ ಹೊಸ ಹೂಟಿ. ಗದ್ದೆ ಹೂಳುವುದು ನಡೆಯುತ್ತದೆ. ಹೊಸ ಹೂಟಿಗೆ ಕೊಟ್ಟಿಡ್ಡಿಯೇ ನೈವೇದ್ಯ. 'ಕಿರಿಸುಗ್ಗಿ, ಹಿರಿಸುಗ್ಗಿ ಎಂದು ಮಾಡುತ್ತೇವೆ. ತಿಂಗಳುಡು ಎಂದು ಕರೆಯುತ್ತೇವೆ. ಅಂದರೆ ತಿಂಗಳಿನ ಪ್ರಾರಂಭ. ಪ್ರತಿ ತಿಂಗಳದ 30ನೇ ದಿನ ಸಂಕ್ರಾಂತಿ ಬರುತ್ತದೆ. ಇಲ್ಲಿಂದ ಹೊಸ ತಿಂಗಳ ಆರಂಭ. ಇವರು ಚಂದ್ರಮಾನ ಪಂಚಾಂಗವನ್ನು ನೋಡುತ್ತಾರಂತೆ. ಚಂದ್ರಮಾನ ಪಂಚಾಂಗ ಪ್ರಕಾರ ವರ್ಷಕ್ಕೆ 360 ದಿನಗಳು. ಸೌರಮಾನ ಪಂಚಾಂಗ ಪ್ರಕಾರ ವರ್ಷಕ್ಕೆ 365 ದಿನಗಳು. ಅಧಿಕಮಾಸ ಇಂಥ ದಿನವೇ ಬರುತ್ತದೆ ಎಂದು ಹೇಳಲಿಕ್ಕಾಗದು. ಇದಿಷ್ಟು ಅವರ ಪಂಚಾಂಗದ ಬಗ್ಗೆ ಅವರಿಗಿರುವ ನಂಬಿಕೆ.

ಇತರೆ :

ಭೌತಿಕ ವಿಷಯಗಳತ್ತ ಗಮನಹರಿಸಿದಾಗ ಸಿಕ್ಕ ಅಂಶಗಳು ಹೀಗಿವೆ– ಉಡುಪು ಎಲ್ಲರೂ ಉಡುವಂಥವೇ. ಮೈಮೇಲೆ ಆಭರಣಗಳೇನೂ ಹೆಚ್ಚಿಗೆ ಇರಲಿಲ್ಲ (ತಾಳಿಯೊಂದನ್ನುಳಿದು). ಅಡಿಗೆ ಮನೆ ಸಾಮಾನುಗಳು ದೊಡ್ಡ ದೊಡ್ಡ ಪಾತ್ರೆ ಇತ್ಯಾದಿಗಳು. ಟೆಂಗಿನ ಮರದ ಬೊಡ್ಡೆಯಿಂದ ಮಾಡಿದ ಸ್ಟೂಲು, ಗೋಡೆಗೆ ಅಲಂಕೃತವಾಗುವಂತೆ ತೂಗುಹಾಕಿದ ಅನೇಕ ಕೈಕೆಲಸದ ಸಾಧನಗಳು, ಮನೆಯ ವಿನ್ಯಾಸ ಮಾತ್ರ ಹೆಬ್ಬಾರ ಕುಟುಂಬದ ಎಲ್ಲ ಮನೆಗಳಲ್ಲೂ ಒಂದೇ ತೆರನಾಗಿತ್ತು. ಪಾತಾಂಕಣ (ಕೆಳಗಿನದು), ವಾರೆ ಚೆಟ್ಟು (ವಾರ್ಚೆಟ್ಟು ಚಾವಡಿ), ಓರೆ (ಅಡುಗೆಮನೆ), ಬೈನ್‌ಸಾಲೆ (ಊಟ ಮತ್ತು ಮಲಗುವ ಕೋಣೆ). ಮನೆಯ ಛತ್ತಿಗೆ ಮುಚ್ಚಿಗ ಎನ್ನುತ್ತಾರೆ. ಛತ್ತಿನ ಕಂಬಗಳಿಗೆ ಅಡ್ಡೆಯೆಂತಲೂ ಅಡ್ಡಜಂತೆಗಳಿಗೆ ಮುಚ್ಚಿಗೆ ಯೆಂತಲೂ ಕರೆಯುತ್ತಾರೆ, ನಾಲ್ಕು ಕಂಬಗಳಿಂದ ಉಂಟಾಗುವ ಛತ್ತಿನ ಕೆಳಭಾಗಕ್ಕೆ ಚೌಕ ಎನ್ನುತ್ತಾರೆ. ಅಡ್ಡೆ– ಮುಂಡಿಗೆಯಿಂದ ಚೌಕ, ಚೌಕಕ್ಕೆ ಮುಚ್ಚಿಗೆ (ಛತ್ತು) ಹಾಕಿರುತ್ತಾರೆ. ಮುಂಚಿನ ಬಾಗಿಲಿನಿಂದಲೇ ಪ್ರವೇಶ, ಪೂಜೆ, ಹೊಸ ವಸ್ತುಗಳನ್ನು ತರುವದು, ಮದುಮಗಳು ಬರುವುದು ಎಲ್ಲವೂ ಈ ಬಾಗಿಲಿನಿಂದಲೇ ನಡೆಯಬೇಕು.

ಅಸ್ಪೃಶ್ಯರ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಎಂದು ಕೇಳಲು 'ಅವರಿಂದ ಹೊಲದ ಕೆಲಸವನ್ನು ಮಾಡಿಸುತ್ತೇವೆ. ಹೊಲವನ್ನು ಹದಮಾಡಿ ಬಿತ್ತುವವರು ಅವರೇ. ನಮ್ಮ ಪ್ರಮುಖ ಬೆಳೆಗಳೆಂದರೆ ಭತ್ತ, ಮೆಟ್ಟುದ್ದು, ನೆನೆಗಡ್ಲೆ.

'ಅಸ್ಪೃಶ್ಯರನ್ನು ನೀವು ಮನೆಯಲ್ಲಿ ಎಲ್ಲಿವರೆಗೆ ಬರಲು ಬಿಡುತ್ತೀರಿ' ? 'ಚಾವಡಿವರೆಗೆ ಬರಬಹುದು'. 'ಮತ್ತೆ ಭಾವಿ ಇಲ್ಲಿಯೇ ಇದೆ. ಅವರು ಇಲ್ಲಿ ಅಡ್ಡಾಡಿದರೆ ನಿಮ್ಮ ನೀರು ಅಶುದ್ಧವಾಗುವದಿಲ್ಲವೇ'? 'ಅವರೇನು ನೀರನ್ನು ಮುಟ್ಟಿರುವದಿಲ್ಲವಲ್ಲ, ದೂರ ಇರುತ್ತಾರೆ. ಅಂಗಳದಲ್ಲಿ ಎಲ್ಲಾ ಕಡೆ ಸುತ್ತುತ್ತಾರೆ. ನೀರಿನ ಸಮೀಪ ಮಾತ್ರ ಕಳಿಸುವದಿಲ್ಲ, ಟಿ. ವಿ. ನೋಡಲು ಬರುತ್ತಾರೆ, ಅವರು ನಮ್ಮ ಕೆಲಸ ಗಳನ್ನು ಮಾಡುವದರಿಂದ ಮನೆಯವರಂತೇ ನೋಡಿಕೊಳ್ಳುತ್ತೇವೆ. ಆದರೆ ಮನೆ ಒಳಗೆ ಸೇರಿಸಿಕೊಳ್ಳುವದಿಲ್ಲ' ಎಂದರು.

ಸಂತಾನ :

ಬಂಜೆತನ ಮತ್ತು ಸಂತಾನದ ಬಗ್ಗೆ ಕೇಳಿದಾಗ ಮಾತ್ರ ಗಂಡಸರೇ ಮಾತ ನಾಡಿದರು. 'ಹೆಂಡತಿಯಿಂದ ಸಂತಾನ ಪ್ರಾಪ್ತಿಯಾಗದಿದ್ದರೆ ಬೇರೆ ಮದುವೆ ಯಾಗುತ್ತೀರಾ'? ಎಂದು ಕೇಳಿದಾಗ 'ಇಲ್ಲ ಬಂಜೆಯೆಂದು ಅವಳನ್ನೇನು ಹೀನವಾಗಿ ಕಾಣುವದಿಲ್ಲ. ನಮ್ಮ ಅಣ್ಣ ತಮ್ಮಂದಿರ ಮಕ್ಕಳನ್ನು ಸಾಕುತ್ತೇವೆ. ಅವರಿಗೆ ಮದುವೆ ಮಾಡಿ ಪುಣ್ಯ ಪಡೆಯುತ್ತೇವೆ. ಹೆಣ್ಣು ಮಗಳ ಕನ್ಯಾದಾನ ಮಾಡಿ ಮುಕ್ತಿ ಪಡೆಯುತ್ತೇವೆ.' 'ಅಂದರೆ, ಅವರನ್ನು ದತ್ತಕ ತೆಗೆದುಕೊಳ್ಳುತ್ತೀರಾ' ? ಎಂದರೆ, 'ದತ್ತಕ ತಗೆದುಕೊಳ್ಳದೇ ಹಾಗೇ ಸಾಕುತ್ತೇವೆ' ಆದರೆ ಹೆಬ್ಬಾರ ಕುಟುಂಬದ ವಂಶವೃಕ್ಷ ಹಬ್ಬಿದ್ದು ದತ್ತು ಪುತ್ರನಿಂದಲೇ ಎಂಬುದು ಅವರ ತಲೆ ಮಾರಿನ ವಂಶಬಳ್ಳಿಯನ್ನು ಕೇಳುವವರಿಂದ ತಿಳಿದು ಬಂದಿತು. ಅವರು ವಂಶಜರ ಹೆಸರುಗಳನ್ನು ನೆನಪಿಸಿಕೊಂಡು ಹೇಳುವಾಗ ಒಂದು ಅಂಶ ಗಮನಕ್ಕೆ ಬಂತು, ಅವರು ಮೊದಲು ಹೇಳುವುದು ಗಂಡುಮಕ್ಕಳ ಹೆಸರುಗಳನ್ನೇ ಹೆಸರು ನೆನಪಿಲ್ಲದಿದ್ದರೆ ಐದೋ, ಆರೋ, ಎಂಟೋ ಸಂಖ್ಯೆಯನ್ನು ಹೇಳುತ್ತಿದ್ದರು. ಇಷ್ಟರಲ್ಲಿ ಹೆಣ್ಣು ಮಕ್ಕಳೆಷ್ಟು ? ಗಂಡು ಮಕ್ಕಳೆಷ್ಟು ? ಎಂದು ಪ್ರಶ್ನಿಸಿದರೆ "ಅಷ್ಟೂ ಗಂಡಮಕ್ಕಳೇ. ಇಷ್ಟು ಜನ ಹೆಣ್ಣುಮಕ್ಕಳು" ಎಂದು ಆಮೇಲೆ ಹೆಣ್ಣಿನ ಸಂಖ್ಯೆ ಹೇಳುತ್ತಿದ್ದರು. ಆದರೆ ಹೆಣ್ಣುಮಕ್ಕಳ ಹೆಸರೇ, ನೆನಪಿನಲ್ಲಿರುತ್ತಿರಲಿಲ್ಲ. ಪುರುಷನಿಗೆ ಹೆಚ್ಚಿನ ಪ್ರಾಧಾ ನ್ಯತೆ ಇರುವದು ಇದರಿಂದ ಸ್ಪಷ್ಟವಾಗುತ್ತದೆ, ಪುರುಷ ಕೇಂದ್ರಿತ ರಚನೆಯ ಕುಟುಂಬ ಹೆಬ್ಬಾರರದು ಎಂಬುದು ಸಂದರ್ಶನದಿಂದ ಸ್ಪಷ್ಟವೂ ಆಯಿತು.

ವಕ್ತಾರರ ವಿವರ

ಸಂದರ್ಶನದಲ್ಲಿ ವಿಷಯ ವಿವರಣೆ ನೀಡಿದ ವಕ್ತಾರರ ವಿವರ ಈ ಕ್ರಮದಲ್ಲಿ ಇರುತ್ತದೆ : 1. ವಕ್ತಾರರ ಹೆಸರು, 2. ಲಿಂಗ. 3, ಉದ್ಯೋಗ, 4. ವಯಸ್ಸು. 5. ಶಿಕ್ಷಣ, 6. ಮನೆಭಾಷೆ, 7. ಜಾತಿ, 8, ತವರು ಮನೆ. 9, ತಾಲೂಕಾ, 10. ಜಿಲ್ಲಾ, 11. ಗಂಡನ ಮನೆ, 12, ತಾಲೂಕು, 13. ಜಿಲ್ಲಾ, 14. ಸಧ್ಯದ ವಿಳಾಸ, 15. ತಾಲೂಕಾ. 16, ಜಿಲ್ಲಾ.

1) 1. ಶ್ರೀಮತಿ ಲಿಂಗಮ್ಮ ಹೆಬ್ಬಾರ 2. ಹೆಣ್ಣು 3. ಮನೆಗೆಲಸ 4. 60 5. ಇಲ್ಲ 6. ಕನ್ನಡ 7. ಬ್ರಾಹ್ಮಣ 8. ಕುರುದ್ವೀಪ (ತಾಯಿಯ ಆಸ್ತಿ ಬಂದಿದ) 9. ಕುಂದಾಪೂರ 10. ದ. ಕ 11. ಮುಗಳೊಳ್ಳಿ (ತ್ರಾಸಿ ಗ್ರಾಮ) 12. ಕುಂದಾಪೂರ 13. ದ. ಕ. 14. ಕುರುದ್ವೀಪ 15, ಕುಂದಾಪೂರ 16. ದ. ಕ.

2) 1. ಜಯಲಕ್ಷ್ಮಿ (ಮದುವೆ ಆಗಿಲ್ಲ) 2. ಹೆಣ್ಣು 3. ಮನೆಗೆಲಸ 4. 28 5. S,S.L.C, 6. ಕನ್ನಡ 7. ಬ್ರಾಹ್ಮಣ 8. — 9, — 10. — 11. — 12, — 13. — 14. ಕುರುದ್ವೀಪ 15, ಕುಂದಾಪೂರ 16. ದ. ಕ.

3. 1, ಪದ್ಮಾವತಿ ಹೆಬ್ಬಾರ 2. ಹೆಣ್ಣು 3. ಮನೆಗೆಲಸ 4. 29 5. S.S.L.C. 6. ಕನ್ನಡ 7. ಬ್ರಾಹ್ಮಣ 8. ಕುರುದ್ವೀಪ 9, ಕುಂದಾಪೂರ 10. ದ. ಕ. 11. ಹರಿಹರ 12, ದಾವಣಗೆರೆ 13, ಚಿತ್ರದುರ್ಗ 14. ಹರಿಹರ 15. ಹರಿಹರ 16, ಚಿತ್ರದುರ್ಗ.

4) 1. ಲಕ್ಷ್ಮಿ ರಘುರಾಮ ಹೆಬ್ಬಾರ 2. ಹೆಣ್ಣು 3, ಮನೆಗೆಲಸ 4. 44 5. 2ನೇಯತ್ತೆ 6. ಕನ್ನಡ 7. ಬ್ರಾಹ್ಮಣ 8. — 9, — 10,— 11. ಕುರುದ್ವೀಪ 12, ಕುಂದಾಪೂರ 13, ದ, ಕ. 14. ಕುರುದ್ವೀಪ 15. ಕುಂದಾಪುರ 16. ದ, ಕ.

5) 1, ಗಿರಿಜಾ ಹೆಬ್ಬಾರ 2, ಹೆಣ್ಣು 3, ಮನೆಗೆಲಸ 4, 43 5, 2ನೇಯತ್ತೆ 6. ಕನ್ನಡ 7. ಬ್ರಾಹ್ಮಣ 8, ಕುರುದ್ವೀಪ 9. ಕುಂದಾಪೂರ 10ः ದ. ಕ. 11. ಬೈಂದೂರು 12. ಕುಂದಾಪೂರ 13. ದ. ಕ, 14. ಬೈಂದೂರು 15. ಕುಂದಾಪೂರ 16. ದ, ಕ.

6) 1. ಅಂಬಿಕಾ ಹೆಬ್ಬಾರ (ಮದುವೆ ಆಗಿಲ್ಲ) 2. ಹೆಣ್ಣು 3. ಮನೆಗೆಲಸ 4. 27 5. S.S.L.C 6. ಕನ್ನಡ 7. ಬ್ರಾಹ್ಮಣ 8. — 9. — 10. — 11. — 12, — 13. 14. ಕುರುದ್ವೀಪ 15. ಕುಂದಾಪೂರ 16. ದ. ಕ.

7, ಸುಬ್ರಾಯ ಹೆಬ್ಬಾರ 2, ಗಂಡು 3, ಕೃಷಿ 4. 42 5. S.S.L.C 6. ಕನ್ನಡ 7. ಬ್ರಾಹ್ಮಣ 8, — 9. — 10.— 11.— 12, — 13.— 14. ಕುರುದ್ವೀಪ 15. ಕುಂದಾಪೂರ 16. ದ. ಕ.

8) 1. ನಾಗಪ್ಪಯ್ಯ ಹೆಬ್ಬಾರ 2. ಗಂಡು 3. ಕೃಷಿ 4. 57 5. 5ನೇಯತ್ತೆ 6. ಕನ್ನಡ 7, ಬ್ರಾಹ್ಮಣ 8. — 9. — 10, — 11. — 12, — 13. — 14. ಕುರುದ್ವೀಪ 15. ಕುಂದಾಪೂರ 16. ದ. ಕ,

9) 1. ವೆಂಕಟೇಶ್ ಹೆಬ್ಬಾರ 2. ಗಂಡು 3. ವಾಚ್ ರಿಪೇರಿ 4. 29 5. 5ನೇಯತ್ತೆ 6. ಕನ್ನಡ 7. ಬ್ರಾಹ್ಮಣ 8. — 9, — 10 — 11. — 12. — 13. — ಹರಿಹರ 15. ದಾವಣಗೇರಿ 16. ಚಿತ್ರದುರ್ಗ

10. 1. ನಾರಾಯಣ ಹೆಬ್ಬಾರ 2. ಗಂಡು 3. ಕೃಷಿ, ಜಾನವಾರು 4. 63 5. 8ನೇಯತ್ತೆ 6. ಕನ್ನಡ 7. ಬ್ರಾಹ್ಮಣ ೩. — 9. — 10. — 11. — 12.— 13. — 14. ಕುರುದ್ವೀಪ 15. ಕುಂದಾಪೂರ 16. ದ. ಕ.

11, 1. ರಘುರಾಮ ಹೆಬ್ಬಾರ 2. ಗಂಡು 3. ಕೃಷಿ, ಜಾನವಾರು 4, 58 5. 1ನೇಯತ್ತೆ 6, ಕನ್ನಡ 7. ಬ್ರಾಹ್ಮಣ 8. — 9 — 10. — 11. — 12, — 13. — 14, ಕುರುದ್ವೀಪ 15. ಕುಂದಾಪೂರ 16. ದು ಕ,

12. 1. ಪರಮೇಶ್ವರ ಹೆಬ್ಬಾರ 2. ಗಂಡು 3. ಕೃಷಿ 4. 72 5, 8ನೇಯತ್ತೆ 6. ಕನ್ನಡ 7. ಬ್ರಾಹ್ಮಣ 8. — 9. — 10. 11, — 12.... 13. — 14. ಕುರುದ್ವೀಪ 15. ಕುಂದಾಪೂರ 16. ದ. ಕ, ○

ಮೌಖಿಕ ಸೂತ್ರಾತ್ಮಕ ಸಿದ್ಧಾಂತ

ಎ. ವಿ. ನಾವಡ

ಬರೆಹದ ಅರಿವಿಲ್ಲದ ಕಥಾ ಗಾಯಕನ ಮೂಲಕ ಹಲವು ತಲೆಮೊರೆಗಳಿಂದ ಕಥನಗೀತ ರೂಪದಲ್ಲಿ ಹರಿದು ಬಂದವುಗಳೇ ಮೌಖಿಕ ಕಾವ್ಯಗಳು, ಅಂದಮಾತ್ರಕ್ಕೆ ಅದು ಪ್ರಾಚೀನ ಕಾಲದಲ್ಲಿ ರೂಪುತಳೆದು ಪಳೆಯುಳಿಕೆಯ ರೂಪದಲ್ಲಿ ಯಾವುದೇ ಬದಲಾವಣೆಯಿಲ್ಲದೆ ಬಾಯಿಪಾಠದ ಮೂಲಕ ಉಳಿದು ಬಂದಿರುವ ಕಾವ್ಯ ಪರಂಪರೆ ಅಲ್ಲ. ಅಂದರೆ ಜನಪದ ಪರಂಪರೆಯೊಂದು ಸಾಗುತ್ತಾ ತನ್ನ ಚಲನೆಯನ್ನು ತಡೆದು ನಿಲ್ಲಿಸುವುದಿಲ್ಲ. ಅದರದು ಸದಾ ಮುನ್ನಡೆಯುತ್ತಿರುವ ಜೀವಂತ ಪ್ರಕ್ರಿಯೆ. ಸೃಷ್ಟಿಶೀಲ ಕಥಾ ಗಾಯಕನೊಬ್ಬ ನಿನ್ನೆ ಹಾಡಿದುದನ್ನೇ ಇಂದು ಹಾಡುವುದಿಲ್ಲ. ಈಗ ಹಾಡಿದುದನ್ನೇ ಇನ್ನೊಂದು ಘಳಿಗೆಯ ಬಳಿಕ ಹಾಡಲಾರ. ಒಂದೊಂದೂ ವಿಶಿಷ್ಟ ಆವಿಷ್ಕಾರ. ಯಾವುದೇ ಬದಲಾವಣೆ ಇಲ್ಲದೆ ಸ್ಥಾಯೀ ರೂಪವನ್ನು ತಾಳು ವುದು ಆದು ಅಕ್ಷರ ರೂಪಕ್ಕೆ ಇಳಿದಾಗ ಮಾತ್ರ. ಆಗ ಅದರ ಮೌಖಿಕತೆ ನಾಶ ವಾಗುತ್ತದೆ.

ಮೌಖಿಕ ಕಾವ್ಯಗಳ ಸಂಯೋಜನೆ (Composition) ಹಾಗೂ ಪ್ರಸರಣ (Transmission) ವನ್ನು ಕುರಿತಂತೆ ಬಂದಿರುವ ಪ್ರಸಿದ್ಧವಾದ ಪ್ಯಾರಿಲಾರ್ಡ್ ಸಿದ್ಧಾಂತ ಅಥವಾ ಮೌಖಿಕ ಸೂತ್ರಾತ್ಮಕ ಸಿದ್ಧಾಂತ (Oral Formulaic Theory) ರೂಪ ತಳೆದಿದು ಹೀಗೆ :

ಮಿಲ್‌ಮನ್ ಪ್ಯಾರಿ 1935 ರ ಕಾಲಾವಧಿಯಲ್ಲಿ ಅಮೇರಿಕ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಕ್ಲಾಸಿಕಲ್ ಸಾಹಿತ್ಯ ವಿಭಾಗದ ಪ್ರಾಧ್ಯಾಪಕರಾಗಿದ್ದರು. ಮೊದಲಿಗೆ ಹೋಮರನ ಕಾವ್ಯಗಳ ಸೂತ್ರಾತ್ಮಕ ನುಡಿಗಟ್ಟುಗಳ ಬಗೆಗೆ ಕುತೂಹಲ ತಾಳಿ, ಈ ಕಾವ್ಯಗಳು ಮೌಖಿಕ ಸಂರಚನೆಗಳು ಎಂಬುದನ್ನು ವಿವರಿಸುವ L'Epithete traditionelle dans Homera (Paris 1928) ಎಂಬ ಅಧ್ಯಯನ ವನ್ನು ಪ್ರಕಟಿಸಿದರು. ಈ ಮೂಲಕ 'ಸೂತ್ರ' (formula) ಗಳ ಪರಿಕಲ್ಪನೆಯು ವಿದ್ವತ್ ಪ್ರಪಂಚಕ್ಕೆ ಮೊದಲ ಬಾರಿಗೆ ದೊರೆಯಿತು. 1934 1935 ರಲ್ಲಿ ಅವರು ಯುಗೊಸ್ಲೇವಿಯಾದ ಶ್ರೀಮಂತ ಮೌಖಿಕ ಕಾವ್ಯಗಳ ಮೌಖಿಕತೆ, ಸಂರಚ ನೆಯ ವಿನ್ಯಾಸ, ಪ್ರಸರಣವನ್ನು ಕುರಿತು ಆಳವಾದ ಕ್ಷೇತ್ರಾಧ್ಯಯನ ನಡೆಸಿ 'The Singer of Tales' ಎಂಬ ಗ್ರಂಥವನ್ನು ಬರೆಯಲು ತೊಡಗಿದರು. ಆದರೆ

ಕೆಲವೇ ಪುಟಗಳನ್ನು ಬರೆಯುವಷ್ಟರಲ್ಲಿ ಅವರು ತೀರಿಕೊಂಡರು. ಮುಂದೆ ಅವರ ಶಿಷ್ಯ ಹಾಗೂ ಕ್ಷೇತ್ರಾಧ್ಯಯನದಲ್ಲಿ ಸಹವರ್ತಿಯಾಗಿದ್ದ ಆಲ್ಬರ್ಟ್ ಲಾರ್ಡ್ ತನ್ನ ಗುರುಗಳಾದ ಪ್ಯಾರಿಯವರ ಸಮಗ್ರ ಕ್ಷೇತ್ರಕಾರ್ಯದ ಮಾಹಿತಿಗಳನ್ನು ಬಳಸಿಕೊಂಡು ಅವರು ಬರೆಯಲು ತೊಡಗಿದ 'The Singer of Tales' ಗ್ರಂಥವನ್ನು ಪೂರ್ಣ ಗೊಳಿಸಿ 1960 ರಲ್ಲಿ ಪ್ರಕಟಿಸಿದರು. ಈ ಅಧ್ಯಯನವು ಮುದೆ 'ಪ್ಯಾರಿಲಾರ್ಡ್ ಸಿದ್ಧಾಂತವೆಂದು ಪ್ರಸಿದ್ಧವಾಯಿತು.

ಮೌಖಿಕ ಕವಿಯೊಬ್ಬನಿಗೆ ಕಾವ್ಯಸಂರಚನೆಯ ಮುಹೂರ್ತವೆಂದರೆ ಪ್ರದರ್ಶನದ ಕಾಲಾವಧಿ. ಅಂದರೆ ಪ್ರದರ್ಶನದ ಮುಹೂರ್ತದಲ್ಲೇ ಕಾವ್ಯ ಅವತರಣ ಗೊಳ್ಳುತ್ತದೆ. ಹಿಂದಿನವರು ಹಾಡಿಕೊಂಡು ಬಂದುದನ್ನು ಗಿಳಿಪಾಠ ಒಪ್ಪಿಸುವುದು ಅವನ ಕೆಲಸವಲ್ಲ. ಕಥಾಗಾಯಕನೊಬ್ಬನು ಪ್ರದರ್ಶನದ ಸಂದರ್ಭದಲ್ಲಿ ಕತೆಯನ್ನು ಹಾಡಾಗಿಸುವ ಸೃಷ್ಟಿಶೀಲ ಕಲಾವಿದ. ಅವನು ಏಕಕಾಲದಲ್ಲಿ ಗಾಯಕ, ಪ್ರದರ್ಶಕ, ಹಾಗೂ ಕವಿ–ಈ ಮೂವರ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಹಾಡುವಿಕೆ, ಪ್ರದರ್ಶಿಸುವಿಕೆ ಹಾಗೂ ಕಾವ್ಯ ಸಂರಚನೆ— ಇವು ಅವನಿಗೆ ಒಂದೇ ಕ್ರಿಯೆಯ ಭಿನ್ನ ಮುಖಗಳು. ತುಳುನಾಡಿನ ಕೋಲ ನೇಮಗಳಲ್ಲಿ ಪಾಡ್ದನ ಕಥನಗಳನ್ನು ಹಾಡುವವರಿಗೆ ಅಥವಾ ಗದ್ದೆಯಲ್ಲಿಳಿದು ನಾಟಿ ಮಾಡುತ್ತಾ ಪಾಡ್ದನ ಹಾಡುವ ಮಹಿಳೆಯರಿಗೆ ಏಕಕಾಲದಲ್ಲಿ ಪರಂಪರೆಯನ್ನು ಮುಂದುವರಿಸಬೇಕು ಹಾಗೂ ಹೊಚ್ಚ ಹೊಸದನ್ನು ಸೃಷ್ಟಿಸಲೂ ಬೇಕು. ಆದರೆ ಸಾಮಾನ್ಯವಾಗಿ ನಾವು ಅವರನ್ನು ಪ್ರದರ್ಶನದ ಸಂದರ್ಭದಲ್ಲಿ ಕಾವ್ಯ ನಿರ್ಮಿತಿಯನ್ನು ಮಾಡುವ ಸೃಜನಶೀಲರೆಂದು ತಿಳಿಯುವುದಿಲ್ಲ. ಯಾರೋ— ಎಂದೋ ಕಟ್ಟಿದ ಹಾಡನ್ನು ಯಥಾಪ್ರಕಾರ ಬಾಯಿಪಾಠ ಒಪ್ಪಿಸುವವರೆಂದೇ ತಿಳಿಯುತ್ತೇವೆ. ಒಬ್ಬನೇ/ಳೇ ಬೇರೆ ಬೇರೆ ಸಂದರ್ಭಗಳಲ್ಲಿ ನಿರೂಪಿಸಿದ ಮೌಖಿಕ ಕಾವ್ಯವು ಭಿನ್ನ ಪಾಠವಾಗಿರುತ್ತದೆ ಎಂಬುದು ಅನೇಕರ ಗಮನಕ್ಕೆ ಇನ್ನೂ ಬಾರದ ಸಂಗತಿ.

ಮೌಖಿಕ ಕವಿಗೆ ಕಾವ್ಯ ಸಂರಚನೆಯ ಸಂದರ್ಭದಲ್ಲಿ ಅವನದೇ ಆದ ಮಾದರಿಗಳೇನೋ ಇರುತ್ತವೆ. ಆದರೆ ಅವು ಯಾವುವೂ ಸ್ಥಿರರೂಪದವು ಅಲ್ಲ, ಅವುಗಳನ್ನು ಆತ ನಿಚಿತರೂಪದಲ್ಲಿ ಬಾಯಿಪಾಠದ ಮೂಲಕ ತನ್ನೊಳಗೆ ಸ್ಥಿರೀಕರಿಸಿ ಕೊಂಡಿರುವುದಿಲ್ಲ. ಪ್ರತಿಬಾರಿಗೂ ಹೊಸದೇ ಹೊಮ್ಮುತ್ತದೆ. ಇಲ್ಲಿ ಕಾಲಾ ವಧಿಯ ಪ್ರಶ್ನೆ ಎದುರಾಗುತ್ತದೆ, ಬರವಣಿಗೆ ಹಾಗೂ ಬಾಯಿಪಾಠದ ಸಾಧ್ಯತೆ ಇಲ್ಲದಿರುವುದರಿಂದ ಗಾಯಕ ತೀವ್ರಗತಿಯಲ್ಲಿ ಧಿಡೀರನೆ ಸಂರಚನೆ ಮಾಡಬೇಕಾಗು ತ್ತದೆ. ಶಿಷ್ಟ ಕವಿಗಾದರೆ ಕುಳಿತು ಬರೆವಲ್ಲಿ ಸಾಕಷ್ಟು ಸಮಯಾವಕಾಶ ಇರುತ್ತದೆ.

ಮೌಖಿಕ ಕವಿಗಾಯಕನ ತನ್ನೆದುರು ಪ್ರೇಕ್ಷಕರು ಕುಳಿತಿರುವುದರಿಂದ ತನ್ನದೇ ಆದ ವೇಗದಲ್ಲಿ ಕಾವ್ಯ ಹೊಸೆಯುತ್ತಾ ಹೋಗಬೇಕಾಗುತ್ತದೆ. ಇಲ್ಲಿ ಕಾದು ಆಲೋಚಿಸಿ ಕಾವ್ಯ ನಿರ್ಮಾಣ ಮಾಡುವುದಕ್ಕೆ ಅವಕಾಶವಿಲ್ಲ. ಆಗ ಪರಂಪರೆ ಅವನ ನೆರವಿಗೆ ಬರುತ್ತದೆ. ಮೌಖಿಕ ಕಾವ್ಯದ ಪಾರಂಪರಿಕ ಬಲವಾದ ತಲೆಮೊರೆಯಿಂದ ಬೆಳೆದು ಬಂದು ಲಯವಿನ್ಯಾಸಗಳ ಪಾರಂಪರಿಕ ಅಭಿವ್ಯಕ್ತಿಯನ್ನು ಪಡೆಯುವ ನುಡಿಗಟ್ಟುಗಳು, ಘಟನಾಪರಂಪರೆಗಳು ಅವನ ನೆರವಿಗೆ ಬರುತ್ತವೆ, ಇವುಗಳೇ ಪ್ಯಾರಿ ಹೇಳಿದ 'ಸೂತ್ರ'ಗಳು.

ಮೌಖಿಕ ಕಾವ್ಯ ಪರಂಪರೆಯಲ್ಲಿ ಕಾವ್ಯ ಸಂರಚನೆಗೊಳ್ಳುವ ತಾಂತ್ರಿಕತೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಆತ–ಆಕೆ ಆ ಸಂಪ್ರದಾಯವನ್ನು ಕರಗತ ಮಾಡಿಕೊಂಡ ಬಗೆಯನ್ನು ವಿವರವಾಗಿ ತಿಳಿದುಕೊಳ್ಳುವುದು ಅವಶ್ಯ. ಈ ಪ್ರಕ್ರಿಯೆಯನ್ನು ಅಧ್ಯಯನದ ದೃಷ್ಟಿಯಿಂದ ಮೂರು ಹಂತವಾಗಿ ವಿಂಗಡಿಸಿಕೊಳ್ಳಬಹುದು.

ಮೊದಲನೆಯ ಹಂತ :

ಮೊದಲಿಗೆ ಆತ/ಆಕೆ ಪರಿಣತ ಗಾಯಕನೊಬ್ಬನ ಪಕ್ಕದಲ್ಲೇ ಕುಳಿತು ಹಾಡನ್ನು ಗಮನವಿಟ್ಟು ಆಲಿಸುತ್ತಾನೆ/ಳೆ. ಕತೆಯನ್ನು ತಿಳಿದುಕೊಳ್ಳುತ್ತಲೇ ಅಲ್ಲಿನ ಪಾತ್ರಗಳ ಹೆಸರು, ಊರು, ಆಯಾ ಕಾಲದ ಆಚಾರ ವಿಚಾರಗಳನ್ನು ಮನಸ್ಸಿಗೆ ಇಳಿಸಿಕೊಳ್ಳುತ್ತಾನೆ/ಳೆ. ಈಗ ಕತೆಯ ವಸ್ತು ಆಕೆಗೆ/ಆತನಿಗೆ ಆಪ್ತವಾಗುತ್ತಾ ಹೋಗುತ್ತದೆ. ಹಾಡಿನ ಈ ಲಯಗತಿ, ಧಾಟಿ, ಉಕ್ತಿವೈಚಿತ್ರ್ಯಗಳು ಅಂತಸ್ಥಗೊಳ್ಳುತ್ತಾ ಹೋಗುತ್ತವೆ.

ಎರಡನೆಯ ಹಂತ

ಗಾಯಕನೊಬ್ಬನಲ್ಲಿ ಈ ಎರಡನೆ ಹಂತದಲ್ಲಿ ಅನುಕರಣ ಕ್ರಿಯೆ ಕೆಲಸ ಮಾಡುತ್ತದೆ. ಆತ ಒಬ್ಬೊಂಟಿಯಾಗಿ ಕುಳಿತು ಗ್ರಹಿಸಿದುದನ್ನು ಅನುಕರಿಸುತ್ತಾನೆ/ಳೆ. ಆದರೆ ಕೇಳಿದುದನ್ನು ಬಾಯಿಪಾಠ ಮಾಡುವ ಪ್ರಯತ್ನಕ್ಕೆ ಪ್ರಜ್ಞಾಪೂರ್ವಕವಾಗಿ ತೊಡಗುವುದಿಲ್ಲ. ಈ ಬಗ್ಗೆ ಖಚಿತವಾದ ವಿವರಣೆಯನ್ನು ಆತ/ಆಕೆ ನೀಡಲಾರನು/ಳು. ಪ್ಯಾರಿ ಹೇಳಿದ 'ಸೂತ್ರ' ಹಾಗೂ 'ವಸ್ತು'ಗಳು ಈ ಹಂತದಲ್ಲಿ ಬೇರು ಇಳಿಸಿಕೊಳ್ಳಲು ಆರಂಭಿಸುತ್ತವೆ. ಅಂದರೆ ತನ್ನ ಹಾಡು ಹೇಗಿರಬೇಕು ಎಂಬ ಆಲೋಚನೆಯನ್ನು ಮಾಡುತ್ತಾ ಅದರ ಉತ್ತಮಿಕೆಗಾಗಿ ಮನಸ್ಸು ತುಡಿಯತೊಡಗುತ್ತದೆ. ಅದಕ್ಕಾಗಿ ಅನುಕರಣ ಹಾಗೂ ಸ್ವೀಕರಣ ಕ್ರಿಯೆಗೆ ತೊಡಗುತ್ತದೆ.

ಆತನು/ಳು ಹಲವರ ಹಾಡುಗಳನ್ನು ಕೇಳಿಸಿಕೊಂಡಾಗ ಅವನ/ಳ ಕಾವ್ಯಾಭಿವ್ಯಕ್ತಿಯಲ್ಲಿ ಅವರ ಭಾಷೆ ಹಾಗೂ ಸೂತ್ರಗಳು ಪರಿಣಾಮ ಬೀರುವುದು ಖಂಡಿತ. ಒಬ್ಬ ಚತುರಗಾಯಕ ಒಂದು ಹಾಡನ್ನು ಹಲವು ರೀತಿಯಲ್ಲಿ ನಿರೂಪಿಸಬಲ್ಲ. ಒಂದು ಹಾಡಿನ ವಸ್ತು ಇನ್ನೊಂದರಿಂದ ಬೇರೆಯಾದಾಗಲೂ ಅವೆರಡರ ಸೂತ್ರಗಳು ಹಾಗೂ ಸೂತ್ರಾತ್ಮಕ ಅಭಿವ್ಯಕ್ತಿ ತಂತ್ರಗಳು ಸಮಾನವಾಗಿರುವುದುಂಟು.

ಮೂರನೆಯ ಹಂತ :

ಪ್ರಬುದ್ಧ ಪ್ರೇಕ್ಷಕರೆದುರು ಕುಳಿತು ಒಂದು ಹಾಡನ್ನು ಹಾಡುವ ಸಾಮರ್ಥ್ಯ ಬಂದಾಗ ಗಾಯಕನು ಎರಡನೆ ಹಂತ ಮುಗಿಸಿ ಮೂರನೆಯ ಹಂತಕ್ಕೆ ಬಂದಿದ್ದಾನೆ ಎಂದರ್ಥ. ಈ ಘಟ್ಟದಲ್ಲಿ ಅವನಿಗೆ ಅನೇಕ ಹಾಡುಗಳು ಪೂರ್ತಿಯಾಗಿ ಅಲ್ಲವಾದರೂ ಹಾಡಲು ಬರುತ್ತದೆ. ಹಾಡನ್ನು ಪೂರ್ತಿಗೊಳಿಸುವ ಸಾಮರ್ಥ್ಯ ಒಂದು ಮಹತ್ವದ ಘಟ್ಟ ತಲಪಿದುದರ ಸೂಚನೆ. ಈಗ ಪ್ರೇಕ್ಷಕರಿಗೆ ಏನು ಬೇಕು ಎಂಬುದು ಅವನಿಗೆ/ಳಿಗೆ ತಿಳಿಯುತ್ತದೆ. 'ಪ್ರಬುದ್ಧ ಅಲಂಕಾರಿಕ' ಕಾವ್ಯ ನಿರ್ಮಾಣ ಕೌಶಲ ಸಿದ್ಧಿಸಿಲ್ಲವಾದರೂ ತಾನು ಕೇಳಿಸಿಕೊಂಡ ಕಾವ್ಯಗಳಿಂದ ಅಲಂಕರಣ ಸಾಮಗ್ರಿಗಳನ್ನು ಆಯ್ದು, ಅವುಗಳನ್ನು ತನ್ನ ಕಾವ್ಯದೊಂದಿಗೆ ಬೆಸೆಯಬಲ್ಲವನಾಗಿದ್ದಾನೆ/ಳೆ. ಆತ/ಆಕೆ ಕಾವ್ಯಗಳ ಹಲವು ಆವೃತ್ತಿಗಳನ್ನು ಕೇಳಿಸಿಕೊಂಡಿದ್ದರೆ ಅವುಗಳ ಸೂತ್ರಗಳು ಇವನ/ಳ ಮೇಲೆ ಪರಿಣಾಮ ಬೀರಿ ಸಂಕೀರ್ಣ ಕಾವ್ಯವೊಂದು ರಚಿತವಾಗುವ ಸಾಧ್ಯತೆಯಿದೆ. ಮುಂದೆ ಅನುಭವ ವಿಸ್ತಾರಗೊಂಡಂತೆ ಕಾವ್ಯ ಭಂಡಾರ (repertori) ಶ್ರೀಮಂತವಾದಂತೆ ಸ್ವೋಪಜ್ಞತೆ ತಲೆ ಹಾಕುತ್ತದ. ಶ್ರೋತೃವೃಂದದ ಬೇಡಿಕೆ ಹಾಗೂ ಅಲ್ಲಿನ ಸಾಂದರ್ಭಿಕ ಹಿನ್ನೆಲೆಗೆ ತಕ್ಕಂತೆ ಕಾವ್ಯವನ್ನು ಹಿಗ್ಗಿಸುವ, ಕುಗ್ಗಿಸುವ, ಅಥವಾ ಬೇಕಾದಂತೆ ಅಲಂಕರಿಸಬಲ್ಲವನಾಗುತ್ತಾನೆ/ಳೆ.

ಪ್ಯಾರಿ-ಲಾರ್ಡ್ ಸಿದ್ಧಾಂತದ ಅನ್ವಯ :

ಹೋಮರನ ಕಾವ್ಯಗಳಲ್ಲಿನ ಸೂತ್ರಾತ್ಮಕ ಶೈಲಿಯ ಸ್ವರೂಪಕ್ಕೂ ಅವುಗಳ ಮೌಖಿಕ ಸಂರಚನೆಗೂ ಇರಬಹುದಾದ ಸಂಬಂಧವನ್ನು ಕುರಿತಂತೆ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರೊ. ಮಿಲ್‌ಮ್ಯಾನ್ ಪ್ಯಾರಿಯವರು 1928 ರಲ್ಲಿ ಅಧ್ಯಯನ ನಡೆಸಿದರು. ಈ ಸಂದರ್ಭದಲ್ಲಿ ಮೊತ್ತ ಮೊದಲಬಾರಿಗೆ 'ಸೂತ್ರ'ದ ಪರಿಕಲ್ಪನೆಯನ್ನು ತಂದರು. ಅನೇಕರು 'ಸೂತ್ರ'ವನ್ನು ಗಾಯಕನ ದೃಷ್ಟಿಯಲ್ಲಿ ಒಂದು ಜೀವಂತ ಪ್ರಕ್ರಿಯೆ ಎಂದು ಭಾವಿಸದೆ ಅದೊಂದು ಯಾಂತ್ರಿಕ ಉಪಕರಣ ಎಂದು ಭಾವಿಸಿದುದು ಉಂಟು. ಈ ಸಂದರ್ಭದಲ್ಲಿ ಸೂತ್ರಗಳನ್ನು ಪಾಡ್ದನ ವಿಶ್ಲೇಷಣೆಯು

ಬಾಹ್ಯಾಂಗವಾಗಿ ಪರಿಗಣಿಸದೆ ಕಥೆಯನ್ನು ನಿರ್ವಹಿಸುವ ಗಾಯಕನೊಬ್ಬನ ದೃಷ್ಟಿಕೋನದಿಂದ ಹಾಗೂ ಪರಂಪರೆಯ ಹಿನ್ನೆಲೆಯಲ್ಲಿ ವಿಚಾರಮಾಡಿ ಅರ್ಥೈಸಲು ಪ್ರಯತ್ನಿಸಲಾಗುವುದು. ಸೂತ್ರಗಳ ಬಳಕೆ ಕೇಳುಗರಿಗೆ ಅನುಕೂಲ ಎಂದು ಒಂದೊಮ್ಮೆ ತಿಳಿಯಲಾಗುತ್ತಿತ್ತು. ಆದರೆ ಸೂತ್ರರೂಪದ ಪುನರುಕ್ತಿ ಹಾಡುಗಾರನಿಗೆ/ಳಿಗೆ ಆ ಪ್ರದರ್ಶನದ ಸಂದರ್ಭದಲ್ಲಿ ಕಥೆಯನ್ನು ಹಾಡಿನ ರೂಪದಲ್ಲಿ ಹಣೆಯುವುದಕ್ಕೆ ಅನುಕೂಲವಾಗುತ್ತದೆ. 1935ರಲ್ಲಿ ಪ್ಯಾರಿಯ ಆಕಸ್ಮಿಕ ಸಾವಿನ ಬಳಿಕ ಯುಗೋಸ್ಲೇವಿಯಾ ದೇಶದಲ್ಲಿ ಅಲ್ಲಿನ ಜನಪದ ಗೀತೆಗಳ ಬಗ್ಗೆ ವ್ಯಾಪಕ ಅಧ್ಯಯನ ನಡೆಸಿದ ಅವರ ಶಿಷ್ಯ ಆಲ್ಬರ್ಟ್‌ಲಾರ್ಡ್, "ಇದರಿಂದ (ಸೂತ್ರಗಳಿಂದ) ವಿಮರ್ಶಕರ ದೃಷ್ಟಿ ಗಾಯಕನ ಕಡೆ ಕೇಂದ್ರಿತವಾಯಿತು. ಜೊತೆಗೆ ಕತೆಯನ್ನು ಹಾಡಾಗಿಸುವ ಪ್ರಕ್ರಿಯೆಯ ಕಡೆಗೆ ಬೆಳಕು ಚೆಲ್ಲಿತು" (Lord 1960, 1981 pp 30) ಎಂದಿರುವರು. 1960ರಲ್ಲಿ ಆಲ್ಬರ್ಟ್ ಲಾರ್ಡ್ ಪ್ರಕಟಿಸಿದ 'The Singer of Tales' ಗ್ರಂಥದಲ್ಲಿ 'ಪ್ಯಾರಿ—ಲಾರ್ಡ್ ಸಿದ್ಧಾಂತ' ಅಥವಾ 'ಮೌಖಿಕ ಸೂತ್ರಾತ್ಮಕ ಸಿದ್ಧಾಂತ' (Oral Formulaic Theory) ವನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.

ಮಿಲ್‌ಮಾನ್ ಪ್ಯಾರಿ ಹೇಳುವಂತೆ 'ಒಂದು ನಿರ್ದಿಷ್ಟ ಛಂದೋರಚನೆಯ ಚೌಕಟ್ಟಿನೊಳಗೆ ಅಗತ್ಯವಾದ ಒಂದು ಆಲೋಚನೆಯನ್ನು ಕ್ರಮಬದ್ಧವಾಗಿ ವ್ಯಕ್ತಪಡಿಸಲು ಬಳಸುವ ಪದಗಳ ಗುಂಪು— ಅದು ಸೂತ್ರ (Parry 1930 pp 41–80). ಪೀಟರ್‌ಕ್ಲಾಸ್ ಅವರು ಒಂದೆಡೆ ಸೂತ್ರವನ್ನು ಕುರಿತಂತೆ ಇನ್ನೊಂದು ಬಗೆಯ ವಿವರಣೆಯನ್ನು ನೀಡಿದ್ದಾರೆ: "ಸೂತ್ರಗಳನ್ನು ಒಳಗೊಂಡಿರುವ ಕಾವ್ಯ ಭಂಡಾರವೆನ್ನುವುದು ಸಿದ್ಧ ನುಡಿಗಟ್ಟುಗಳನ್ನು ಒಳಗೊಂಡಿರುವ ಒಂದು ಪೆಟ್ಟಿಗೆಯಿದ್ದಂತೆ." ಹಾಡಿನಲ್ಲಿ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುವ ಘಟನಾವಳಿಗಳು ಮತ್ತು ವಿವರಣಾತ್ಮಕ ಭಾಗಗಳನ್ನು ವಸ್ತು (Theme) ಎಂಬುದಾಗಿ ನಿರ್ದೇಶಿಸಬಹುದಾಗಿ ಲಾರ್ಡ್ ಹೇಳುತ್ತಾರೆ (Lord 1960 pp4). ನಾವು ಪ್ಯಾರಿ—ಲಾರ್ಡ್ ಸಿದ್ಧಾಂತವನ್ನು ಇದ್ದಕ್ಕಿದ್ದಂತೆ ಒಪ್ಪಿಕೊಂಡಲ್ಲಿ ಸೂತ್ರ, ಸೂತ್ರಾತ್ಮಕ ಅಭಿವ್ಯಕ್ತಿ ಇತ್ಯಾದಿಗಳು ನುಡಿಗಟ್ಟುಗಳಿಗೆ, ಪದ್ಯದ ಸಾಲುಗಳಿಗೆ ಮಾತ್ರ ಅನ್ವಯಿಸುತ್ತವೆಯೇ ಹೊರತು ದೊಡ್ಡ ಗಾತ್ರದ ಮದುವೆಯ ವಿವರ, ಅಡುಗೆಯ ವರ್ಣನೆ, ಒಲೆಯ ತಯಾರಿ, ಬಿದನ್ನು ಕಳುಹಿಸಿಕೊಡುವ ಕ್ರಮ ಇತ್ಯಾದಿಗಳಿಗೆ ಹೊಂದುವುದಿಲ್ಲ. ಪ್ಯಾರಿ–ಲಾರ್ಡ್ ಸಿದ್ಧಾಂತವು ಮೂಲತಃ ಪೂರ್ವ ಯುರೋಪಿಯನ್ ದೇಶದ ವೃತ್ತಿ ಗಾಯಕರ ಹಾಡುಗಳ ಹಿನ್ನೆಲೆಯಲ್ಲಿ ರಚಿತವಾಗಿದೆ. ತುಳು ಪಾಡ್ದನಗಳು ಯಥಾವತ್ತಾಗಿ ಅದರ ಅಚ್ಚಿಗೆ ಹೊಂದಿಕೊಳ್ಳದು. ಆದರೆ ಲಾರ್ಡ್ ಹೇಳಿದ 'ಆಲೋಚನೆ ಮತ್ತು ಹಾಡಿದ ಕವಿತೆಯ ಸಂಲಗ್ನದ ಫಲವೇ ಸೂತ್ರ (Lord. 1960. 1981pp31)

ಎಂಬುದನ್ನು ಗಮನಿಸಿದಾಗ ಈ ತೊಡಕಿಗೆ ಪರಿಹಾರ ಸಿಗುತ್ತದೆ. ಕಥೆಯು ಏಕೆ ಹಾಡಿನೊಂದಿಗೆ ಸಂಲಗ್ನಗೊಳ್ಳುತ್ತದೆ ಹಾಗೂ ಯಾವ ಬಗೆಯ ಕಥೆಯು ಈ ಬಗೆಯ ವಿಶಿಷ್ಟ ಸೂತ್ರಾತ್ಮಕ ನಿರೂಪಣೆಗೆ ಒಳಗಾಗುತ್ತದೆ ಎನ್ನುವುದನ್ನು ಲಾರ್ಡ್ ಸಮೀಕ್ಷಿಸುತ್ತಾರೆ. ಆದರೆ ಸಾಮಾನ್ಯವಾಗಿ ವರ್ತಮಾನದ ಕಥಾಗಾಯಕನಿಗೆ ಈ ಸಮಸ್ಯೆ ಏಳುವುದಿಲ್ಲ. ಕಾರಣ ಇವಕ್ಕೆ ಪರಿಹಾರ ಅವರಿಗೆ ಪರಂಪರೆಯಿಂದ ಬಳುವಳಿಯಾಗಿ ಬರುತ್ತದೆ. ಅವನು ಕಿವಿದೆರೆದು ಕೇಳುವಾಗಲೇ ಹಾಡುಗಳು ಅವನ ಸುತ್ತಮುತ್ತ ಮೊಳಗುತ್ತಿರುತ್ತವೆ. ಹೀಗೆ ಆತ ಅವುಗಳ ಉತ್ತರಾಧಿಕಾರಿಯಾಗುತ್ತಾನೆ. ಕಥಾನಕಗಳನ್ನು ನಿರೂಪಿಸುವ ಮೊದಲು ಆತ ತಲೆಮೊರೆಯಿಂದ ಬಂದ ಅನುಭವಗಳಿಂದ ಸನ್ನದ್ಧನಾಗಿರುತ್ತಾನೆ. ತನ್ನ ಎಳವೆಯಿಂದಲೇ ಕಾವ್ಯದ ಲಯವನ್ನು ಅದರ ಛಂದಸ್ಸು ಮತ್ತು ಸಂಗೀತದ ಮೂಲಕ ಗ್ರಹಿಸಿಕೊಂಡಿರುತ್ತಾನೆ. ಹೀಗೆ ಉಂಟಾದ ಕಾವ್ಯ ಸಂಸ್ಕಾರದ ಫಲವಾಗಿ ಅವನೊಳಗೆ ಸ್ಪಷ್ಟ ಸ್ಪಷ್ಟವಾದ ಸೂತ್ರದ ಪರಿಕಲ್ಪನೆ ಆಕಾರ ಪಡೆದುಕೊಳ್ಳತೊಡಗುತ್ತದೆ. ಬೇರೆ ಬೇರೆ ಛಂದೋಗತಿಯಲ್ಲಿ ಪುನರಾವೃತ್ತಿಗೊಳ್ಳುವ ವಿವಿಧ ಆಲೋಚನೆಗಳು ನಿಯತ ತಾಳಗತಿಗಳನ್ನೆ ಪ್ಯಾರಿ ಅವರು 'ಸೂತ್ರ'ವೆಂದು ಕರೆದರು. ಮೂಲಭೂತ ಛಂದೋಗತಿ, ಪದವಿನ್ಯಾಸ, ಶ್ರುತಿ ಸುಭಗತೆಗಳನ್ನು ಅಂತಸ್ಥಗೊಳಿಸಿಕೊಂಡಾಗ ಆವನೊಳಗಿನ ಪರಂಪರೆಯ ಪ್ರಜ್ಞೆ ಅದನ್ನು ಪುನರ್‌ಸೃಷ್ಟಿಗೆ ಒಳಪಡಿಸುತ್ತದೆ.

ಸಾಮಾನ್ಯ ವಿವರಗಳನ್ನು ಸೂಚಿಸುವ ಸಂದರ್ಭಗಳಲ್ಲಿ ಪಾಡ್ದನಗಳಲ್ಲಿ ಕೆಲವೊಂದು ಸ್ಥಿರಸೂತ್ರ (Stable F rmula) ಗಳು ನಮ್ಮ ಗಮನಕ್ಕೆ ಬರುತ್ತವೆ. ಲಾರ್ಡ್ ಅವರು ಹೇಳುವಂತೆ ಪಾತ್ರಗಳ ಅಂಕಿತನಾಮ, ಮುಖ್ಯಕ್ರಿಯೆ, ಕಾಲ ಮತ್ತು ಸ್ಥಳಗಳನ್ನು ಸೂಚಿಸತಕ್ಕ ಸಂದರ್ಭಗಳಲ್ಲಿ ಸೂತ್ರಾಭಿವ್ಯಕ್ತಿ ಪಡೆಯುತ್ತವೆ (Lord 196) pp 34). ತುಳು. ಪಾಡ್ದನಗಳನ್ನು ಗಮನಿಸಿದಾಗ ನಾಮಪದ ಕ್ರಿಯಾಪದಗಳನ್ನು 'ಅಲಂಕರಿಸುವ' ವಿಶೇಷಣಗಳಾಗಿ ಸಾಂಪ್ರದಾಯಿಕ ಸೂತ್ರಗಳು ಕಾಣಿಸಿಕೊಳ್ಳುತ್ತವೆ.

'ಬದುಕಿ ಉಳಿದ'ನು ಬಾಲ್ಯಕಾಲದ ಮೋಡಿ ಹುಡುಗ ಅವನು.' ಇಲ್ಲಿ 'ಬಾಲಕಾಲದ ಮೋಡಿ' ಒಂದು ಸೂತ್ರವಾಗಿ ಬಂದಿದ್ದು ಅದು ಕಥೆಯ ಒಂದು ಮುಖ್ಯ ಪಾತ್ರವನ್ನು ಹೇಳುತ್ತದೆ. ಇದೇ ರೀತಿ 'ಕೋಲ ಬಾರಿ ಮುಂದಾರ್ಲ' ಎನ್ನುವಲ್ಲಿ ಮುಂದಾರ್ಲ ಎನ್ನುವವನು ಹೊಂದಿದ್ದ ಮಧ್ಯಕಾಲಿನ ಅಧಿಕಾರವನ್ನು ಕೋಲಬಾರಿ ಸೂಚಿಸುತ್ತದೆ. ಕ್ಷೌರಿಕ ಬಿನ್ನೋಣಿ. ಮಡಿವಾಳ ಚೆಲುವೆ, ಬೇಟೆನಾಯಿಗಳ ಮಲ್ಲು ಇತ್ಯಾದಿ ಇವು ವೃತ್ತಿಯನ್ನು ಸೂಚಿಸುವ ಸೂತ್ರಗಳಾಗಿ ಬರುತ್ತವೆ.

ಕ್ರಿಯೆಯು ನಡೆದ ಕಾಲವನ್ನು ಸೂಚಿಸುವ ಸಂದರ್ಭದಲ್ಲಿ ಕೆಲವೊಂದು ಸಾಮಾನ್ಯ ಸೂತ್ರಗಳು ರೂಪುಗೊಳ್ಳುವುದನ್ನು ಪಾಡ್ದನದ ಸಂದರ್ಭದಲ್ಲಿ ಗಮನಿಸಬಹುದು.

'ಪೂಂಜರು ತೀರಿಕೊಂಡು ಆರು ಮೂರು ದಿನ ಆಗಬೇಕಾದರೆ...'
'ಜಾಮದ ಹೊತ್ತಿಗೆ ಕೋಳಿ ಕೆಲೆತಕ್ಕೆ ಎದ್ದರು.'

ಕ್ರಿಯೆ ನಡೆದ ಸ್ಥಳವನ್ನು ಕುರಿತಂತೆ ಕೆಲವು ಸಾಮಾನ್ಯ ಸೂತ್ರಗಳನ್ನು ಗಾಯಕ ಅಂತಸ್ಥಗೊಳಿಸಿಕೊಂಡಿರಬೇಕಾಗುತ್ತದೆ.

1) ಹಾಕಿದ ಏತದೆಡೆಗೆ ತೋಡಿದ ಬಾವಿಯೆಡೆಗೆ ಹೋದಳು ಹೊನ್ನಮ್ಮ ಹೊನ್ನಿನ ಹೊನ್ನಮ್ಮ.

2) ಏಳು ಅಂತಸ್ತಿನ ಯಮಗುಂಡಕ್ಕೆ ಹೋದನು ಅವನು ಲೋಕಲಂದ ರಾಯನು.

ಮೇಲೆ ಹೇಳಿದ ದೃಷ್ಟಾಂತಗಳಲ್ಲಿ ಬಂದಿರುವ ಸೂತ್ರಗಳು ಮೌಖಿಕ ಕಾವ್ಯ ಶೈಲಿಯ ನೆಲಗಟ್ಟುಗಳು. ಗಾಯಕನು ತೀವ್ರಗತಿಯಲ್ಲಿ ಕಾವ್ಯ ಸಂಯೋಜಿಸಿಕೊಂಡು ಹೋಗುವ ಸಂದರ್ಭಗಳಲ್ಲಿ ಸಮಾನಕ್ರಿಯೆಗಳನ್ನು ಮತ್ತೆಮತ್ತೆ ಪುನರಾವೃತ್ತಿಸುವಾಗ ಕರ್ತೃ ಪದವನ್ನು ಮಾತ್ರ ಬದಲಾಯಿಸುತ್ತಾ ಹೋಗುವುದು ಸೂತ್ರಾತ್ಮಕ ಅಭಿವ್ಯಕ್ತಿಯ ಒಂದು ತಾಂತ್ರಿಕತೆ.

ಉದಾಹರಣೆಗೆ :

'ಚೀಂಕ್ರ ಆಚಾರಿಯು ತಲೆ ಕತ್ತರಿಸಿದರು, ಹೊಡೆದ ಶಿರ ಹಾಗೂ ಆಯುಧವನ್ನು ಕೊಂಡುಬಂದರು.'

'ಮುಗ್ಗೇರ ಕೆಂಚುವಿನ ತಲೆ ಕತ್ತರಿಸಿದರು, ಹೊಡೆದ ಶಿರ ಹಾಗೂ ಆಯುಧವನ್ನು ತಂದರು.'

ಈ ಬಗೆಯ ಸೂತ್ರಗಳನ್ನು ಇಂತಹ ವ್ಯವಸ್ಥೆ (System) ಯೊಳಗೆ ಅಡಕಗೊಳಿಸಬಹುದು.

ಚೀಂಕ್ರ ಆಚಾರಿನ ಮುಗ್ಗೇರ ಕಂಚುನ ಬ್ಯಾರಿ ಪೈನಾಲಿನ ದುಗ್ಗನ ಕೊಂಡೆನ ತಿಮ್ಮಣ್ಣ ಅಜಿಲನ	ತೆರೆಗುಂಡಿಯೆರ್ ಪೊಯಿತರೆ ಕೈದ್ ಕೊಂಡುಬತ್ತೆರ್ (ತುಳು)

ಹೀಗೆ ಒಂದರ ಸ್ಥಾನದಲ್ಲಿ ಇನ್ನೊಂದನ್ನು ಬೆಸೆಯುವ ಈ ಬದಲಿ ವ್ಯವಸ್ಥೆಯು ಸೂತ್ರಗಳ ಉಪಯುಕ್ತತೆ ಹಾಗೂ ಸೂತ್ರಗಳ ನಡುವಣ ಸಂಬಂಧವನ್ನು ವಿವರಿಸುತ್ತವೆ.

ಸೂತ್ರ ವಿಶ್ಲೇಷಣೆ :

ಸೂತ್ರ ವಿಶ್ಲೇಷಣೆ ಅಥವಾ ಪಠ್ಯ ವಿಶ್ಲೇಷಣೆಯನ್ನು ಯಾವುದಾದರೊಂದು ಮಾದರಿ ಮೌಖಿಕ ಪಠ್ಯವೊಂದರ ಕೆಲವು ಸಾಲುಗಳನ್ನು ಆಯ್ಕೆ ಮಾಡಿಕೊಂಡು ನಡೆಸಬಹುದು. ಇದೀಗ ಸೂತ್ರಾತ್ಮಕ ವಿನ್ಯಾಸದ ಅಧ್ಯಯನಕ್ಕಾಗಿ ತುಳುಪಾಡ್ದನವೊಂದರ ಭಾಗವನ್ನು ಗಮನಿಸಬಹುದು. ಉಡುಪಿಗೆ 20 ಕಿಲೊಮೀಟರ್ ದೂರದ (ಹಿರಿಯಡ್ಕ) ಡಂಗುಪಾಣ ಆ ಪರಿಸರದ ಪ್ರಸಿದ್ಧ ಭೂತ ಮಾಧ್ಯಮ ನೃತ್ಯಗಾರ ಹಾಗೂ ಪಾಡ್ದನಕಾರ, ಆತ ಹೇಳಿದ 'ಮುಗ್ಗೇರಕೋಲದ ಪಾಡ್ದನ'ದ ಸಾಲುಗಳನ್ನು ಇಲ್ಲಿ ಪರಾಮರ್ಶೆಗೆ ಬಳಸಿಕೊಳ್ಳಲಾಗಿದೆ. ಡಂಗು ಸುಮಾರು ನಲವತ್ತಕ್ಕೂ ಹೆಚ್ಚು ಪಾಡ್ದನಗಳನ್ನು ಬಲ್ಲವನಾಗಿದ್ದು ಆತ ಒಬ್ಬ ಅನುಭವಿ ಗಾಯಕ. ಹೀಗಾಗಿ ಅವನದು ಆರಂಭಿಗನ ಶೈಲಿ ಅಲ್ಲ. ಅವನು ಹೇಳಿದ 'ಮುಗ್ಗೇರ ಪಾಡ್ದನ'ದ ಮೊದಲ ಭಾಗವನ್ನು ಇಲ್ಲಿ ಆಯ್ಕೆಮಾಡಿಕೊಳ್ಳಲಾಗಿದೆ. ಸಾಮಾನ್ಯವಾಗಿ ಪಾಡ್ದನಗಳಲ್ಲಿ ಬರುವ ಘಟನೆಗಳನ್ನು ವಿವರಿಸುವ ಸೂತ್ರಗಳಾದ (ವಸ್ತು) ಬೇಟೆಯ ವರ್ಣನೆ, ಯುದ್ಧ ವಿವರ, ನಾಯಕನ ಅಲಂಕಾರ ಇತ್ಯಾದಿ ಭಾಗಗಳನ್ನು ಕೈಬಿಟ್ಟು ಸಾಲುಗಳಲ್ಲಿ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುವ ನುಡಿಗಟ್ಟಿನ ರೂಪದ ಸೂತ್ರಾತ್ಮಕ ವಿನ್ಯಾಸಗಳ ಅಧ್ಯಯನಕ್ಕೆ ಈ ಕಾವ್ಯಭಾಗದ ಮೂಲಕ ಪ್ರಯತ್ನಿಸಲಾಗಿದೆ.

ಡಂಗು ಪಾಣನ ಪಾಡ್ದನಗಳ ಸೂತ್ರಾತ್ಮಕ ವಿನ್ಯಾಸವನ್ನು ಅಧ್ಯಯನ ಮಾಡಿದ ವಿಧಾನ ಹೀಗಿದೆ. ಅವನು ಹೇಳಿದ ಮುಗ್ಗೇರ ಪಾಡ್ದನದ 10 ಸಾಲುಗಳನ್ನು ತೆಗೆದುಕೊಂಡು ನನ್ನ ಸಂಗ್ರಹದಲ್ಲಿರುವ ಅವನ ಇತರ ಹನ್ನೆರಡು ಪಾಡ್ದನಗಳ ಹಿನ್ನೆಲೆಯಲ್ಲಿ ಈ ಉದ್ಧೃತ ಕಾವ್ಯ ಭಾಗದಲ್ಲಿ ಕಾಣಿಸಿಕೊಂಡ ನುಡಿಗಟ್ಟು ಪುನರಾವೃತ್ತಿತ ಸಾಲುಗಳನ್ನು ಅಡಿಗೆರೆ ಎಳೆದು ಗುರುತಿಸಿಕೊಳ್ಳಲಾಯಿತು. ಕೆಳಗೆ ಗೆರೆ ಎಳೆದವು

ಗಳು ಅವನ ಇತರ ಕಾವ್ಯಗಳಲ್ಲಿ ಯಾವುದೇ ಬದಲಾವಣೆಯಿಲ್ಲದೆ ಪುನರಾವೃತ್ತಿತ ಗೊಂಡವುಗಳು. ಕಡಿಗೆರೆ (broken lines)ಗಳು ಬಹುಮಟ್ಟಿಗೆ ಸಮಾನವಾದ ನುಡಿಗಟ್ಟುಗಳು,

ತುಳು :

1. ಮುಗ್ಗೇರ ಮೂಲ ಒಲುಂದು ಪಣ್ಣಾಗ ಉಲ್ಲಾಯ ಸಾರತ್ತ ಬಡಕಾಯಿರಾಜ ಉಂಡುಯೇs
2, ಸಾರತ್ತ ಬಡಕಾಯಿರಾಜ ಬಾಲೆರವು ಪ್ಪೆರಸೂಡವೆರ್ ರಾಜ ಉಂಡುಯೇs
3. ಬಂಗೆರೆ ಊರು ಕೊಂಡೆರ ದೇಸೊಡು ಅಯ್ವ ಅಜ ಐಕೆ ಲ್‌ಡ್ ಉಳೆ ೀರ್‌ಗೆ ಮುಗ್ಗೇರರ್‌ಗೆನಾ
4. ಆವುಲು ತಂಕ ಉಡೆದ್ ಸಲಿಜೊರ ನೆತ್ತಿ ಉಡೆದ್ ಉರಿಜೊರ ಬತ್ತೊಂಡೇs
5, ನೆತ್ತಿ ಉಡೆದ್ ಉರಿಜೊರ ತಂಕ ಉಡೆದ್ ಸಲಿಜೊರಯೇ
6. ಜ ಒಂಜಾ ತೈತಿಮುತ್ತ ಪೋನಗ, ವೊರಿಯಾಯೆ ಉಲ್ಲೆ ಬಾಲೆ ಕಾಲದ ವೋಡಿಗೆನ ಆಯೇs...
7, ಮಾನಿಪಗೆ ಆಂಡ್, ನೀರ್ ನಂಜ್ ಆಂಡ್, ಐಸಮುತ್ತಾನ ಸೈಪೇಂದ್ ಪಂಡೇನ ವೋಡಿ ಉಡಿಗೆನ ಆಯೇs...
8. ಐಸಮುತಾನ ಸೈಪೆಂದ್ ಪಂಡೆ, ದೇಸಮುತ್ತಾನ ಪೋಪೆಂದ್ ಪಂಡೆ. ಆಯೆ ವೋಡಿಗೆನs...
9. ಪೋವೊಂದು ಒಂಜಾ ಪೋನಗ ಉಂಡೆ ಬಾಲೆಕಾಲದ ವೋಡಿಗೆನ ಆಯೆs...
10. ಬಾಲೆಕಾಲದ ವೋಡಿ ಕುಬುಲದ ಕಟ್ಟ ಪುಣೆಯು ಪೋನಗ ಚಾವಡಿಡ್ ಕುಲ್ಲುದೆರ್ ಯೆಣ್ಮೂರ ಉಲ್ಲಾಯ

ಕನ್ನಡ

1. ಮುಗ್ಗೇರರ ಮೂಲ ಎಲ್ಲಿ ಎನ್ನಲು ಒಡೆಯ, ಸಾವಿರದ ಬಡಗಣ ರಾಜ್ಯ ಉಂಟು...
2. ಸಾವಿರದ ಬಡಗಣ ರಾಜ್ಯ (ದಲ್ಲಿ) ಎಳೆಹರೆಯದ ಬೈರಸೂಡವರ ರಾಜ ಉಂಟು...

3. ಬಂಗರ ಊರು, ಕೊಂಡೆಯರ ದೇಶದಲ್ಲಿ ಐವತ್ತು ಅರವತ್ತು ಒಕ್ಕಲು ಮುಗ್ಗೇರರು ಇದ್ದಾರೆ.

4. ಅಲ್ಲಿ ಎದೆಯೊಡೆವ ಚಳಿಜ್ವರ, ನೆತ್ತಿ ಒಡೆವ ಉರಿಜ್ವರ ಬಂತಲ್ಲಾ...

5. ನೆತ್ತಿ ಒಡೆವ ಉರಿಜ್ವರ, ಎದೆಒಡೆವ ಚಳಿಜ್ವರ ಬಂತಯ್ಯಾ...

6. ಓ ಎಲ್ಲರೂ ಸತ್ತಳಿದು ಹೋದಾಗ ಒಬ್ಬ ಮಾತ್ರ ಉಳಿದಿದ್ದಾನೆ ಬಾಲ್ಯಕಾಲದ ಮೋಡಿ ಅವನು.

7. ಜನ ಹಗೆಯಾಯಿತು, ನೀರು ನಂಜಾಯಿತು. ಆಯುಷ್ಯ ಮುಗಿದಾಗ ಸಾಯು ವುದಾಗಿ ಹೇಳಿದ ಮೋಡಿ ಅವನು

8. ಆಯುಷ್ಯ ತೀರಿದಾಗ ಸಾಯುವುದಾದಿ ಹೇಳಿದ, ಊರು ಮುನಿದಾಗ ಹೋಗು ವುದಾಗಿ ಹೇಳಿದ ಆವನು ಮೋಡಿ...

9. (ಊರಮೇಲೆ) ಹೋಗು ಹೋಗುತ್ತಾ ಇರುವಾಗ ಬಾಲ್ಯಕಾಲದ ಹುಡುಗ ಅವನು...

10. ಬಾಲ್ಯಕಾಲದ ಮೋಡಿ ಕಂಬಳ ಗದ್ದೆಯ ಅಂಚಿನಲ್ಲಿ ಹೋಗುವಾಗ ಚಾವಡಿ ಯಲ್ಲಿ ಕುಳಿತಿದ್ದಾರೆ ಯೆಣ್ಮೂರ ದೊರೆಗಳು,

ಮೇಲಿನ ಉದ್ಧೃತ ಸಾಲುಗಳನ್ನು ಗಮನಿಸಿದರೆ ಬಹುಪಾಲು ಪುನರಾ ವೃತ್ತಿತ ನುಡಿಗಟ್ಟುಗಳು ಕಾಣಿಸಿಕೊಳ್ಳುತ್ತವೆ. ಅವುಗಳನ್ನು ಸೂತ್ರಗಳೆಂದು ಕರೆಯ ಬಹುದು. ಡಂಗು ಪಾಣನ 'ಪಾಡ್ದನ ಭಂಡಾರ'ದ ಹಿನ್ನೆಲೆಯಲ್ಲಿ ಗಮನಿಸಿದಾಗ ಸುಮಾರು ಕಾಲಂಶದಷ್ಟು ಸಾಲುಗಳು ಪೂರ್ತಿ ಪುನರಾವೃತ್ತಿತ ಹಾಗೂ ಅರ್ಧಾಂಶ ದಷ್ಟು ಬಿಡಿಬಿಡಿ ಸೂತ್ರಗಳು. ಯಾವುದೇ ಸಾಲು ಸೂತ್ರರಹಿತವಾಗಿರುವುದು ಕಂಡು ಬರುವುದಿಲ್ಲ. ಸೂತ್ರಗಳನ್ನು ನಿರ್ಧರಿಸುವ ನಮ್ಮ ನಿಯಮ ಅಥವಾ ತತ್ತ್ವಗಳನ್ನು ಬದ ಲಾಯಿಸಿದರೆ ಇನ್ನೂ ಹಲವಾರು ಸೂತ್ರಾತ್ಮಕ ಅಭಿವ್ಯಕ್ತಿಗಳನ್ನು ಸೂತ್ರಗಳೆಂದು ಪರಿಗಣಿಸಬಹುದು. ಈ ಹಿಂದೆ ವಿವರಿಸಿದಂತೆ ಗಾಯಕನು ಪ್ರದರ್ಶನದ ಸಂದರ್ಭ ದಲ್ಲಿ ಸೂತ್ರಗಳನ್ನು ಸೃಷ್ಟಿಸುತ್ತಾ. ಪುನರ್‌ಸೃಷ್ಟಿಸುತ್ತಾ ಹೋಗುತ್ತಾನೆ. ಒಂದೇ ಸೂತ್ರವನ್ನು ಅವಶ್ಯಕತೆಗನುಸಾರವಾಗಿ ಮತ್ತೆಮತ್ತೆ ಬಳಸುತ್ತಾ ಹೋಗುತ್ತಾನೆ. ಈ ಅರ್ಥದಲ್ಲಿ ಒಂದು ಕಾವ್ಯದಲ್ಲಿ ಅಪಾರ ಸಂಖ್ಯೆಯ ಸೂತ್ರಗಳು ಇರುವ ಸಾಧ್ಯತೆಯಿದೆ.

ಒಬ್ಬ ಗಾಯಕನ 'ನೆನಪಿನ ಭಂಡಾರ'ದಲ್ಲಿರುವ ಸೂತ್ರಗಳು ಇನ್ನೊಬ್ಬನ ಭಂಡಾರದಲ್ಲೂ ಇರುವ ಸಾಧ್ಯತೆ ಇದೆ. ಒಬ್ಬ ಗಾಯಕನಿಗೆ ಪರಂಪರೆಯಿಂದ ಬಂದ ಎಲ್ಲಾ ಸೂತ್ರಗಳು ತಿಳಿದಿರುತ್ತವೆ ಎನ್ನುವಂತಿಲ್ಲ. ಗಾಯಕರು ತಮ್ಮ ಕಾವ್ಯ

ಸಂಯೋಜನೆಯಲ್ಲಿ ಅಥವಾ ಗಾಯನದಲ್ಲಿ ಬಳಸಬಹುದಾದ ಸೂತ್ರಗಳ ಪಟ್ಟಿಯೇನೂ ಇಲ್ಲ. ಸೂತ್ರಗಳು ಕಾವ್ಯದ ವಸ್ತುವನ್ನು ಅಭಿವ್ಯಕ್ತಿಸಲು ಬೇಕಾದ ಮಾಧ್ಯಮಗಳು (ಕಾವ್ಯ ಭವನ ನಿರ್ಮಾಣಕ್ಕೆ ಬೇಕಾದ ಇಟ್ಟಿಗೆಗಳು). ಆದುದರಿಂದ ಒಬ್ಬ ಗಾಯಕನ ಮನಸ್ಸಿನಲ್ಲಿರುವ ಸೂತ್ರಗಳ ಸಂಗ್ರಹವು ಅವನಿಗೆ ತಿಳಿದಿರುವ ವಸ್ತು ಅಥವಾ ಕಥೆಗಳ ಸಂಖ್ಯೆಗೆ ಪ್ರಮಾಣಾನುಗುಣವಾಗಿರುತ್ತದೆ. ಹೀಗಾಗಿ ಗಾಯಕರು ತಮ್ಮ 'ಸೂತ್ರ ಭಂಡಾರ'ಗಳ ಶ್ರೀಮಂತಿಕೆಯಲ್ಲಿ ಒಬ್ಬರಿಗೊಬ್ಬರು ಭಿನ್ನರಾಗಿರುತ್ತಾರೆ. ವಯಸ್ಸು, ಅನುಭವ, ಗ್ರಹಣಶಕ್ತಿಗನುಸಾರವಾಗಿ 'ಸೂತ್ರ ಭಂಡಾರ'ದಲ್ಲಿ ವ್ಯತ್ಯಾಸ ತಲೆದೋರುವ ಸಾಧ್ಯತೆ ಇದೆ. ಒಬ್ಬನ 'ಸೂತ್ರ ಭಂಡಾರ' ಬದಲಾವಣೆಗೆ ಒಳಗಾಗದ ಸ್ಥಾಯಿಯಾಗಿರುವುದಿಲ್ಲ. ಅವನ ವಸ್ತು ಭಂಡಾರ (thematic repertiore)ದಲ್ಲಿ ಬೆಳವಣಿಗೆ ಆದಂತೆ ಸೂತ್ರಗಳ ಸಂಖ್ಯಾ ಬಾಹುಳ್ಯದಲ್ಲಿ ಹೆಚ್ಚಳ ಕಾಣಿಸಿಕೊಳ್ಳಬಹುದು. ಗಾಯಕರೊಬ್ಬರ ನಂಟು ಎಷ್ಟೇ ಆಪ್ತವಾಗಿರಲಿ ಒಂದು ಕಾಲ ಘಟ್ಟದಲ್ಲಿ ಅವರ 'ಭಂಡಾರ'ವನ್ನು ಸಂಗ್ರಹಿಸಿ ಅದರಿಂದ ಸೂತ್ರಗಳನ್ನು ಪಟ್ಟಿ ಮಾಡಿದಾಗ ಸಾಕಷ್ಟು ಪ್ರಮಾಣದಲ್ಲಿ ವ್ಯತ್ಯಾಸ ಕಾಣಿಸುತ್ತದೆ.

ವ್ಯಕ್ತಿಯಿಂದ ವ್ಯಕ್ತಿಗೆ ಕಾಣಿಸುವ ಈ ಭಿನ್ನತೆ ಪ್ರದೇಶದಿಂದ ಪ್ರದೇಶಕ್ಕೆ ಅನ್ವಯಿಸುತ್ತದೆ. ಉಪಭಾಷೆ ಮತ್ತು ಪದಕೋಶಗಳಲ್ಲಿನ ವ್ಯತ್ಯಾಸ, ಭೌಗೋಳಿಕ ಭಿನ್ನತೆ, ಸಾಮಾಜಿಕ, ರಾಜಕೀಯ ಇತಿಹಾಸಗಳಲ್ಲಿನ ಭಿನ್ನತೆಯು ಕಾವ್ಯಗಳ ವಸ್ತು ಸಾಮಗ್ರಿ ಹಾಗೂ ಸೂತ್ರಗಳ ಮೇಲೆ ಪರಿಣಾಮ ಬೀರುವುದು ಖಂಡಿತ. ದಕ್ಷಿಣ ಕನ್ನಡ ಜಿಲ್ಲೆಯ ಭೂತಮಾಧ್ಯಮ ಜನಾಂಗಗಳಾದ ಪರವ, ಪಂಬದ, ನಲ್ಕೆಯರಲ್ಲಿ ಸಿಗುವ ಯಾವುದೋ ಒಂದು ಪಾಡ್ದನವನ್ನು ಸಂಗ್ರಹಿಸಿದಾಗ ಅದರ ವಸ್ತು ನಿರ್ವಹಣೆ, ಸೂತ್ರಗಳ ಸ್ವರೂಪಗಳಲ್ಲಿ ವ್ಯತ್ಯಾಸ ಗೋಚರವಾಗುತ್ತದೆ. ತುಳು ಭಾಷೆ ಮಾತನಾಡುವ ಪ್ರದೇಶದ ಸೂತ್ರಗಳ ಮೊತ್ತಕ್ಕೆ ಸರಿಹೋಗುತ್ತದೆ. ಆದರೆ ಎಲ್ಲಾ ಹಾಡುಗಾರರು ಎಲ್ಲಾ ಸೂತ್ರಗಳನ್ನು ತಿಳಿದಿರಲಾರರು. ಮೊದಲು ಗಾಯಕನೊಬ್ಬನ 'ಸೂತ್ರ' ಹಾಗೂ 'ವಸ್ತು'ಗಳ ಸಂಗ್ರಹ ಅಧ್ಯಯನಕ್ಕೆ ತೊಡಗಿ ಮುಂದೆ ಅವನಿಂದ ಪ್ರಭಾವಿತವಾದ ಬಳಗಕ್ಕೆ ವಿಸ್ತರಿಸಿ ಕೊನೆಗೆ ಆ ಊರಿಗೆ, ಜಿಲ್ಲೆಗೆ ಭಾಷಾ ಅಧ್ಯಯನವನ್ನು ವಿಸ್ತರಿಸಬಹುದು.

ಮೌಖಿಕ ಸೂತ್ರಾತ್ಮಕ ಶೈಲಿಯ ಅಧ್ಯಯನದ ಫಲವಾಗಿ ಮೌಖಿಕ ಗಾಯಕನೊಬ್ಬನು ನಿನ್ನೆಯದನ್ನು ಇಂದಿಗೆ ನೇರವಾಗಿ ವರ್ಗಾಯಿಸುವ ಜಡವಾಹಕನಲ್ಲವೆಂದೂ, ಒಂದೊಂದು ಪ್ರದರ್ಶನವನ್ನೂ ವಿಶಿಷ್ಟಗೊಳಿಸಬಲ್ಲ ಪ್ರತಿಭಾವಂತನೆಂದೂ ತಿಳಿವಳಿಕೆ ಮೂಡಿಬಂದಿತು. ○

ವೀರಶೈವವನ್ನು ಯಾರೂ ಸ್ಥಾಪಿಸಲಿಲ್ಲ

ಪೂಜ್ಯ ಡಾ॥ ಶರಣಬಸವಪ್ಪ ಅಪ್ಪ

ವಿಶ್ವದಲ್ಲಿ ಎರಡು ಬಗೆಯಿಂದ ಧರ್ಮಗಳು ಬೆಳೆದು ಬಂದಿವೆ ಒಂದು ನಿಸರ್ಗ ಸಹಜವಾಗಿ ಬೆಳೆದು ಬಂದಿರುವ ಧರ್ಮಗಳು ಇನ್ನೊಂದು ಏಕವ್ಯಕ್ತಿಯಿಂದ ಸ್ಥಾಪಿತ ವಾದ ಧರ್ಮಗಳು.

ನೈಸರ್ಗಿಕವಾಗಿ ಹುಟ್ಟಿದ ಧರ್ಮಗಳು ವ್ಯಕ್ತಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿವೆ. ಸ್ವಭಾವವನ್ನು ಬೆಳೆಯಿಸಿಕೊಳ್ಳುವ ಅವಕಾಶ ಒದಗಿಸಿಕೊಟ್ಟಿವೆ. ನಿಸರ್ಗದ ನಿತ್ಯ ನೂತನತೆಯನ್ನು ಮೈಗೂಡಿಸಿಕೊಂಡಿವೆ. ನಿಸರ್ಗದ ಅಂಗವಾದ ಒಂದು ವೃಕ್ಷವು ಋತುಮಾನಕ್ಕೆ ತಕ್ಕಂತೆ ತನ್ನಲ್ಲಿಯ ಹಣ್ಣೆಲೆಗಳನ್ನು ಕಳಚಿ ಬಿಸುಟಿ, ಚಿಗುರೆಲೆಗಳನ್ನು ಧರಿಸಿಕೊಂಡು ಸುಳಿಸುವಂತೆ, ನಿಸರ್ಗ ಸಹಜವಾದಿ ಹುಟ್ಟಿರುವ ಧರ್ಮಗಳು ಆ ಕಾಲಿನ ಪರಿಸರಕ್ಕೆ ಹೊಂದುವಂತೆ ಅತ್ಯುತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು, ಅಪಮೌಲ್ಯಗಳನ್ನು ತಳ್ಳಿ ಬಿಡುವ ಸ್ವಾತಂತ್ರ್ಯವನ್ನು ಪಡೆದುಕೊಂಡಿವೆ. ತನ್ಮೂಲಕ ಉಜ್ವಲ ಧಾರ್ಮಿಕ ಪರಂಪರೆಯನ್ನೇ ಮುಂದಿನ ಜನಾಂಗಕ್ಕೆ ಕೊಡಮಾಡಿವೆ. ಇಂಥ ಪರಂಪರೆಯನ್ನೇ ಶೈವ-ವೀರಶೈವ ಧರ್ಮಗಳು ಹೊಂದಿವೆ. ಶೈವ ಧರ್ಮದ ಮೂಲ ಸ್ಥಾಪಕನಾರೆಂಬುದು ತಿಳಿದಿಲ್ಲ. ಅದರಂತೆ ವೀರಶೈವ ಧರ್ಮದ ಸ್ಥಾಪಕ ನಾರೆಂಬುದು ತಿಳಿಯುವದಿಲ್ಲ, ಶೈವ-ವೀರಶೈವ ಧರ್ಮ ಸಂಸ್ಕೃತಿಗಳು ಬಹು ಪ್ರಾಚೀನ ಮತ್ತು ಒಂದೆ ಮೂಲದಿಂದ ಹುಟ್ಟಿದ ಧರ್ಮಗಳಾಗಿವೆ. ಮೂಲ ದ್ರಾವಿಡ ಭಾಷೆಯಿಂದ ಕನ್ನಡ, ತೆಲುಗು, ತಮಿಳು ಮುಂತಾದ ಪಂಚ ದ್ರಾವಿಡ ಭಾಷೆಗಳು ಹುಟ್ಟಿರುವಂತೆ, ನಿಸರ್ಗ ಧಾರ್ಮಿಕ ಪರಂಪರೆಯಿಂದ ಶೈವ–ವೀರಶೈವ ಧರ್ಮಗಳು ಹುಟ್ಟಿವೆ. ಹೀಗಾಗಿ ಅವುಗಳ ಸ್ಥಾಪಕನಾರೆಂದು ಗುರುತಿಸುವುದು ಅಸಾಧ್ಯವಾಗಿದೆ.

ಆದರೆ ಏಕ ವ್ಯಕ್ತಿಯಿಂದ ಸ್ಥಾಪಿತವಾದ ಎರಡನೆಯ ವರ್ಗದ ಧರ್ಮ ಗಳು ಆಯಾ ಸ್ಥಾಪಕನ ಹೆಸರಿನಿಂದಲೇ ಕರೆಯಲ್ಪಟ್ಟಿವೆ. ಉದಾಹರಣೆಗೆ ಬುದ್ಧ ನಿಂದ ಬೌದ್ಧ ಧರ್ಮ, ಮಹಮ್ಮದನಿಂದ ಮಹಮ್ಮದೀಯ ಧರ್ಮ, ಕ್ರೈಸ್ತನಿಂದ ಕ್ರೈಸ್ತ ಧರ್ಮ, ಜಿನನಿಂದ ಜೈನಧರ್ಮ ಹೀಗೆ ಅವು ಬೆಳೆದುಕೊಂಡುಬಂದಿವೆ. ಆದರೆ ಶೈವ-ವೀರಶೈವ ಧರ್ಮಗಳಿಗೆ ಯಾವುದೇ ವ್ಯಕ್ತಿಯ ನಾಮ ನಿರ್ದೇಶನವಿಲ್ಲ. 'ಶೈವ-ವೀರಶೈವ' ಎಂಬುವುಗಳಂತೂ ವ್ಯಕ್ತಿಗಳ ಹೆಸರು ಅಲ್ಲವೇ ಅಲ್ಲ. ಅವು ಅನಾದಿ ಕಾಲ ದಿಂದಲೂ ವಿಕಾಸಗೊಂಡು ಬಂದಿರುವ ಉಜ್ವಲವಾದ ಧಾರ್ಮಿಕ ಪರಂಪರೆಗಳು,

ಸೃಷ್ಟಿ ಹೇಗೆ ಬರಡಲ್ಲವೊ ಹಾಗೇ ಈ ಭೂಮಿ ಬರಡಲ್ಲ. ಈ ನೆಲದಲ್ಲಿ ಕಾಲದಿಂದ ಕಾಲಕ್ಕೆ ಅಸಂಖ್ಯಾತ ಮಹಾಪುರುಷರು ಸಿದ್ಧ ಸಾಧಕರು ಜನ್ಮಿಸಿ ಬಂದಿರುವರು, ಈಗ ಜೀವಿಸಿರುವರು. ಮುಂದೆಯೂ ಜನ್ಮಿಸಿ ಬರುವರು, ಈ ಕಾರಣದಿಂದಲೇ ಭಾರತವು ಅಧ್ಯಾತ್ಮ ಭೂಮಿ 'ಧರ್ಮ ಭೂಮಿ' ಎಂದು ಖ್ಯಾತಿ ಪಡೆದಿದೆ.

ಆದುದರಿಂದಲೇ ಈ ಧರ್ಮದಲ್ಲಿ ರೇಣುಕರಿಗಿಂತಲೂ ಮಹಾ ರೇಣುಕರ ಜನ್ಮ ಸಾಧ್ಯವಿದೆ. ಪ್ರಭುದೇವರಿಗಿಂತಲೂ ಮಹಾ ನಿರಂಜನ ಜಂಗಮ ಪುಂಗವನು ಹುಟ್ಟುವದಕ್ಕೆ ಅವಕಾಶವಿದೆ. ಬಸವನಿಗಿಂತಲೂ ಮಿಗಿಲಾದ 'ಭಕ್ತಿ ಭಂಡಾರಿ' ಅವತರಿಸುವದಕ್ಕೆ ಅವಕಾಶವಿದೆ. ಶರಣಬಸವನಿಗಿಂತಲೂ ಅಧಿಕವಾದ 'ಮಹಾ ದಾಸೋಹಿ' ಹುಟ್ಟುವದಕ್ಕೆ ಅನುವಿದೆ.

ವೀರಶೈವ ಧರ್ಮಕ್ಕೊಂದು ಧರ್ಮಗ್ರಂಥ ಬೇಕೆಂದು ಹೇಳುತ್ತಿರುವದು ಇತ್ತೀಚಿನ ದಿನಗಳಲ್ಲಿ ಕೇಳಿ ಬರುತ್ತಲಿದೆ. ಸಣ್ಣ ವಿಷಯ ಪಂಚಾಚಾರ್ಯರಿಗಾಗಲಿ, ಬಸವಾದಿ ಪ್ರಮಥರಿಗಾಗಲಿ ಅಥವಾ ಇನ್ನಿತರ ಮಹಾ ಪುರುಷರಿಗಾಗಲಿ ಏಕೆ ಹೊಳೆಯಲಿಲ್ಲವೋ!! ಅವರಿಗೆ ಗ್ರಂಥ ಪ್ರಾಧಾನ್ಯ ಬೇಕಾಗಿರಲಿಲ್ಲ, ಆದುದರಿಂದಲೇ ಬಸವಾದಿ ಪ್ರಮಥರು "ವೇದಕ್ಕೆ ಒರೆಯನ್ನಿಕ್ಕುವೆ, ಆಗಮಕ್ಕೆ ನಿಗುಳನಿಕ್ಕುವೆ" ಎಂದು ಹೇಳಿ ತಮ್ಮ ವೈಜ್ಞಾನಿಕ ದೃಷ್ಟಿಯನ್ನು ಶೃತಗೊಳಿಸಿರುವರು ಮತ್ತು ಗ್ರಂಥ ಪ್ರಾಮಾಣ್ಯವನ್ನು ಅಲ್ಲಗಳೆದಿರುವರು. ನಮಗೆ ಒಂದು ಗ್ರಂಥವಲ್ಲ ! ಗ್ರಂಥರಾಶಿಯೇ ಇದೆ ಅವು ಒಂದೇ ಇರಲಿ, ಅನೇಕವೇ ಇರಲಿ ನಮಗೆ ಮಾರ್ಗದರ್ಶನ ಮಾಡುತ್ತವೆ ಹೊರತು ಅವೇ ಸರ್ವಸ್ವವಲ್ಲ. ಗ್ರಂಥಗಳು ಜೀವನದ ಒಂದು ಭಾಗ. ವೀರಶೈವ ಧರ್ಮಕ್ಕೆ ಮಹಾ ಜೀವನವೇ ಪ್ರಮಾಣ. ವೈದಿಕರಿಗೆ ವೇದಗಳು, ಮುಸ್ಲಿಮರಿಗೆ ಕುರಾನ್, ಕ್ರೈಸ್ತರಿಗೆ ಬೈಬಲ್ ಪ್ರಮಾಣ ಗ್ರಂಥವಾಗಿರುವಂತೆ, ಲಿಂಗವಂತರಿಗೂ ಒಂದು ಪ್ರಮಾಣ ಗ್ರಂಥ ಬೇಕೆಂದು ಹೇಳುತ್ತಿರುವುದು ಪರಕೀಯರ ಅಂಧಾನುಕರಣೆಯಲ್ಲದೆ ಮತ್ತೇನೂ ಅಲ್ಲ. ಸಾವಿರಾರು ವರ್ಷಗಳ ಹಿಂದೆ ರಚಿತವಾದ ಆ ಗ್ರಂಥಗಳಲ್ಲಿಯ ಎಲ್ಲ ಮೌಲ್ಯಗಳು ಇಂದಿನ ಕಾಲಕ್ಕೆ ಪ್ರಸ್ತುತವಾಗಿರುವುದಕ್ಕೆ ಹೇಗೆ ಸಾಧ್ಯ ?

ಗ್ರಂಥ ಪ್ರಾಮಾಣ್ಯ ನಂಬಿದ ಜನಕ್ಕೆ ಈ ಬೆಳವಣಿಗೆಯ ಸ್ವಾತಂತ್ರ್ಯವೇ ಇಲ್ಲ. ಅವರು ಧರ್ಮ ಗ್ರಂಥಗಳನ್ನು ಪ್ರಾಮಾಣ್ಯವೆಂದು ನಂಬಿದ ಪ್ರಮಾದಕ್ಕಾಗಿ ಒಳ್ಳೆಯ ಮೌಲ್ಯಗಳೊಂದಿಗೆ ಅಲ್ಲಿರುವ ಕೆಲವು ಅಪಮೌಲ್ಯಗೊಂಡ ತತ್ವಗಳೂ ಸಹ ಮೌಲ್ಯಗಳೆಂದೇ ಆಚರಿಸಬೇಕಾಗುತ್ತದೆ. ವೈದಿಕರಿಗೆ ವೇದಗಳು ಪ್ರಾಮಾಣ್ಯ

ಆದುದರಿಂದ ಮುಂದೆ ಬಂದ ಶಂಕರಾಚಾರ್ಯ, ಮಾಧ್ವ, ರಾಮಾನುಜಾಚಾರ್ಯರು ತಮ್ಮ ತಮ್ಮ ತತ್ವಗಳನ್ನು ಪ್ರತಿಪಾದನೆ ಮಾಡುವಾಗ ಪ್ರಸ್ಥಾನತ್ರಯಗಳನ್ನು ಆಧರಿಸಿ ಪ್ರತಿಪಾದನೆ ಮಾಡಿ ಭಾಷ್ಯ ಬರೆದರು ತಮ್ಮ ತತ್ವಗಳೆಲ್ಲವೂ ವೇದ ಭಗವದ್ಗೀತೆ ಉಪನಿಷತ್ತುಗಳಲ್ಲಿವೆಯೆಂದು ಹೇಳುವುದಕ್ಕಾಗಿ ಅವುಗಳನ್ನು ಹಿಗ್ಗಿಸಿ "ಆರ್ಯ ಪ್ರಾಣಾಯಮ" ಮಾಡಿದರು. ಎಲ್ಲವೂ ಹಳೆಯುದರಲ್ಲಿಯೇ ಹುಡುಕಿ, ಅಲ್ಲಿಯೇ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡು ಬದುಕಿದರು. ಹಳೆಯುದನ್ನೇ ತಲೆಯ ಮೇಲೆ ಹೊತ್ತುಕೊಂಡು ಕುಣಿದರು. ಹೀಗಾಗಿ ತಮ್ಮ ಸಮಕಾಲೀನ ಸಮಾಜಕ್ಕೆ ಬೇಕಾದ ತತ್ವಗಳನ್ನು ನಿರೂಪಿಸದೇ ಹೋದರು. ಕುರಾನ್ ನಂಬಿದ ಮುಹಮ್ಮದೀಯರ ಸ್ಥಿತಿಯೂ ಹೀಗೇ ಆಯಿತು. ಧಾರ್ಮಿಕ ನಿರ್ಬಂಧಕ್ಕೆ ಕಟ್ಟು ಬಿದ್ದು "ಫೋನಿನಲ್ಲಿ ಮಾತನಾಡುವದೂ ಮಹಾಪಾಪವೆಂದು ವೈಜ್ಞಾನಿಕ ಸೌಲಭ್ಯಗಳನ್ನು ಧಿಕ್ಕರಿಸಿ ನಿಂತವರು ಅವರಲ್ಲಿ ಹಲವರು. ಅದು ಎಂಥ ವಿಪರ್ಯಾಸ ? ಮಹಮ್ಮದೀಯರಲ್ಲಿ ಪ್ರಚಲಿತವಿರುವ "ಬಹು ಪತ್ನಿತ್ವ" ಪದ್ಧತಿ ಇನ್ನೊಂದು ಅಭಾಸವೇ ಆಗಿದೆ. ಪೈಗಂಬರನ ಕಾಲದಲ್ಲಿ ಬಹಳಷ್ಟು ಯುದ್ಧಗಳಾದುದರಿಂದ ಯೋಧರು ಮಡಿದರು. ಅವರ ಹೆಣ್ಣು ಮಕ್ಕಳು ನಿರಾಶ್ರಿತರಾದರು. ಅವರಿಗೆ ಆಶ್ರಯ ಕಲ್ಪಿಸಲೆಂದು ಬಹು ಪತ್ನಿಯರನ್ನು ಮದುವೆಯಾದನು. 1400 ವರ್ಷಗಳ ಹಿಂದಿನ ಆ ಪದ್ಧತಿಯನ್ನೇ ಇಂದಿಗೂ ಮಹಮ್ಮದಿಯರು ಪರಿಪಾಲಿಸುತ್ತಿರುವುದು ಎಷ್ಟು ಸಮಂಜಸ ? ಜನ ಸಂಖ್ಯೆ ಕಡಿಮೆ ಇದ್ದ ಕಾಲದಲ್ಲಿ ಜನನ ನಿಯಂತ್ರಣ ಅವಶ್ಯಕತೆ ಇರಲಿಲ್ಲ. ಇಂದೂ ಸಹ ಕ್ಯಾಥೋಲಿಕ್ ಧರ್ಮದ ಅನುಯಾಯಿಗಳು "ಜನನ ನಿಯಂತ್ರಣ" ತಮ್ಮ ಧರ್ಮಕ್ಕೆ ವಿರೋಧವಾದುದೆಂದು ಬಗೆದು ಅದನ್ನು ಪಾಲಿಸದೆ ಇರುವದು ಮಾನವ ಜನಾಂಗವನ್ನು ಬಿಕ್ಕಟ್ಟಿಗೆ ಸಿಲುಕಿಸಿದಂತೆ. ಧರ್ಮವಿರುವದು ಬಿಕ್ಕಟ್ಟಿಗೆ ಸಿಲುಕಿಸುವದಕ್ಕಲ್ಲ ಜನಾಂಗದ ಜೀವನವನ್ನು ಸಂಕಟದಿಂದ, ಬಿಕ್ಕಟ್ಟಿನಿಂದ ಬಿಡಿಸುವದಕ್ಕೆ. ಆದರೆ ದರ್ಮ ಗ್ರಂಥ ಪ್ರಾಮಾಣ್ಯವೆಂದು ನಂಬಿದ್ದಕ್ಕಾಗಿ ಮಾನವನು ಪುಸ್ತಕದ ಗುಲಾಮನಾಗಿ ಜೀವನದ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವಂತಾಯಿತು.

ಯಾವುದೇ ಮಹಾ ಪುರುಷನಾದರೂ ಸಹ ಪೂರ್ಣವಾದ ಸತ್ಯವನ್ನು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಒಂದು ಕಾಲದಲ್ಲಿ ಹೇಳಿದ ಮೌಲ್ಯಗಳಲ್ಲಿ ಕಾಲ ಬದಲಾಗದಂತೆ ಹಲವಾರು ಬದಲಾಗುತ್ತವೆ. ಹಾಗೆ ಬದಲಾವಣೆಗೊಳ್ಳದೆ ಉಳಿದುಕೊಂಡರೆ, ಆ ಸ್ಥಿತಿ ಹಾವಶೆಗಟ್ಟಿದ ನೀರಿನಂತಾಗುತ್ತದೆ. ಅಪಮೌಲ್ಯಗೊಂಡ ಆಚರಣೆಗಳು ಕಾಲ ಬದಲಾದಂತೆ ಆಚರಿಸುವದಕ್ಕೆ ಅನರ್ಹವೆನಿಸುತ್ತವೆ. ಆದುದರಿಂದಲೇ ವೀರಶೈವ ಧರ್ಮವು ಇಂತಹ ದುರಂತವನ್ನು ತಪ್ಪಿಸುವದಕ್ಕಾಗಿ ಯಾವುದೇ

ಒಂದು ಗ್ರಂಥಕ್ಕೆ ಸೀಮಿತವಾಗಿ ಉಳಿಯಲಿಲ್ಲ. ವೀರಶೈವ ಮಹಾಪುರುಷರಾದರೂ ಹಾಗೆ ಅದನ್ನು ಉಳಿಸಲಿಲ್ಲ.

ಗ್ರಂಥ ಪ್ರಾಮಾಣ್ಯವು ಕಟ್ಟಿದ ಬುತ್ತಿ ಕಲಿಸಿದ ಮಾತಿದ್ದಂತೆ, ಅವು ಎಷ್ಟು ದಿನ ಬಳಕೆಗೆ ಬಂದಾವು ?

ಗ್ರಂಥ ಪ್ರಾಮಾಣ್ಯವನ್ನು ನಂಬಿ ಯಾವುದೋ ಕಾಲದಲ್ಲಿದ್ದ ಧರ್ಮವನ್ನೇ ಆಚರಿಸುವುದು ಎಂದರೆ ಕಟ್ಟಿದ ಬುತ್ತಿಯನ್ನೇ ಹಳಸಿದರೂ ತಿನ್ನುತ್ತಾ ಹೋದಂತೆ. ವೀರಶೈವ ಮಹಾಪುರುಷರು, ಬಸವಾದಿ ಶರಣರು ನಮಗೆ ಕಟ್ಟಿದ ಬುತ್ತಿವುಂಡು ಆರೋಗ್ಯ ಕೆಡಿಸಿಕೊಳ್ಳಲು ಹೇಳಲಿಲ್ಲ. ನಿತ್ಯ ನಿತ್ಯ ಅಡುಗೆ ಮಾಡಿ ಉಣ್ಣುವ ಕಲೆಯನ್ನು ಕಲಿಸಿದಂತೆ, ಅವರು ನಿತ್ಯ ನಿತ್ಯ ಅನುಭಾವ ಮಾಡುವ ಕಲೆಯನ್ನು ಕಲಿಸಿದರು. ಅದಕ್ಕೆಂದು ವಿಶ್ವಕ್ಕೆ ಅನುಭವ ಸಂಪತ್ತು ಅನುಭವ ಮಂಟಪ ಕೊಡುಗೆಯಾಗಿ ನೀಡಿದರು. ನಿತ್ಯ ನಿತ್ಯವು ಅರ್ಚನ-ಅರ್ಪಣ-ಅನುಭವದ ಅನುಸಂಧಾನ ಮಾಡಿ ಆನಂದಿಸಲು ಹೇಳಿದರು.

ಇಂದು ನಾವು ವೀರಶೈವ ಧರ್ಮಕ್ಕೆ ಒಂದು ಪ್ರಮಾಣ ಗ್ರಂಥ ಬೇಕೆಂದು ಹೊರಟಿರುವುದು ನಮಗ ಲಭ್ಯವಾಗಿರುವ ಧಾರ್ಮಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಹೊರಟಂತೆ. ನಿಜವಾಗಿ ವಿಚಾರ ಮಾಡಿದರೆ ಗ್ರಂಥದಲ್ಲಿ ಧರ್ಮವಿಲ್ಲ. ಮಹಾ ಜೀವನದಲ್ಲಿ ಧರ್ಮವಿದೆ.

ಜಾತಿ ನಂಬಬೇಡಿ ಗೆಳೆಯರೆ

ಜಾತಿ ನಂಬಬೇಡಿ ಗೆಳೆಯರೆ
ಜಾತಿ ನಂಬಿ ಜಗಳಾಡಬೇಡಿ ಗೆಳೆಯರೆ !
ನೀನು ಬೇರೆ ಜಾತಿ, ನಾನು ಬೇರೆ ಜಾತಿ
ಮುಟ್ಟಬೇಡ ನನ್ನ ಎಂದು ಜಗಳಾಡುವುದು ಬೇಡ
ನಮ್ಮ ರಕ್ತವೊಂದೆ, ನಿಮ್ಮ ರಕ್ತವೊಂದೆ
ಎಲ್ಲರು ಒಟ್ಟುಗೂಡಿ ಬಾಳೋಣ ಬನ್ನಿ ಗೆಳೆಯರೆ,

ತೇಜಸ್ವಿನಿ ಅಂಬಲಗೆ

ಈ ಸಂಚಿಕೆಯ ಲೇಖಕರು

1. ಪೂಜ್ಯ ಡಾ, ಶರಣಬಸವಪ್ಪ ಅಪ್ಪ ಮಹಾದಾಸೋಹ ಪೀಠಾಧಿಪತಿಗಳು, ಶರಣಬಸವೇಶ್ವರ ಸಂಸ್ಥಾನ, ಕಲಬುರ್ಗಿ–3
2. ಎಂ. ಜಿ. ವಾರಿ, ಬಾಣದಾರ ಓಣಿ, ಬಾದಾಮಿ
3. ಆರ್. ಎಸ್. ಸ್ವಾಮಿ. ಹೈಸ್ಕೂಲ್ ಶಿಕ್ಷಕರು, ತಡಕಲ್ಲ, ತಾ॥ ಆಳಂದ ಜಿ॥ ಕಲಬುರ್ಗಿ
4. ಉಮಾ ಫಿರಂಗಿ, C/o ಡಾ॥ ಕಾಶೀನಾಥ ಅಂಬಲಗೆ, ಧನ್ವಂತರಿ ಕಾಲನಿ, ಕಲಬುರ್ಗಿ-5
5. ಶಂಕ್ರಯ್ಯ ಘಂಟಿ, ಗು. ವಿ. ವಿ. ಕಲಬುರ್ಗಿ–6
6. ಡಾ॥ ಕೆ. ಆರ್. ದುರ್ಗಾದಾಸ, ರೀಡರ್ ಕನ್ನಡ ವಿಭಾಗ, ಪಿ. ಜಿ. ಸೆಂಟರ್, ಬೆಳಗಾಂ
7. ಡಾ॥ ಪುರುಷೋತ್ತಮ ಬಿಳಿಮಲೆ, ಕನ್ನಡ ವಿಭಾಗ ಮಂಗಳೂರು ವಿಶ್ವ ವಿದ್ಯಾಲಯ, ಮಂಗಳೂರು
8. ಬಸವರಾಜ ಜಾನಬೊ. ಮಾಣಿಕೇಶ್ವರಿ ಕಾಲನಿ, ಬ್ರಹ್ಮಪುರ ಕಲಬುರ್ಗಿ-3
9. ವಿಜಯಕುಮಾರ ಸಾಲಿಮಠ ಕನ್ನಡ ಅಧ್ಯಾಪಕ, ಜೂ. ಕಾಲೇಜ, ಅಫಜಲಪುರ
10. ಮುನೀರ ಪಟೇಲ, ಅಫಜಲಪುರ
11. ಪ್ರಭು ಖಾನಾಪುರೆ, ಡಿಗ್ರಿಕಾಲೇಜ, ಆಳಂದ
12. ವಿಶು ಸತ್ಯಂಪೇಟೆ, ಕುಂಬಾರ ಓಣಿ. ಶಹಪುರ
13. ಡಾ॥ ಪಿ. ಕೆ. ಖಂಡೋಬಾ, ಮುಖ್ಯಸ್ಥರು. ಕನ್ನಡ ವಿಭಾಗ, ಗು. ವಿ. ವಿ, ಪಿ, ಜಿ, ಕೇಂದ್ರ, ನಂದಿಹಳ್ಳಿ–ಸಂಡೂರ
14. ಚನ್ನಬಸಪ್ಪ ಹೊಳೆಯಣ್ಣವರ, ನಾಗನೂರ. ತಾ॥ ನವಲಗುಂದ ಜಿ॥ ಧಾರವಾಡ
15. ಪ್ರೊ, ಎ, ವಿ, ನಾವಡಾ ಭಂಡಾರಕರ್ಸ್ ಕಾಲೇಜ ಕುಂದಾಪುರ ದ. ಕ.
16. ತೇಜಸ್ವಿನಿ ಅಂಬಲಗೆ, ಧನ್ವಂತರಿ ಕಾಲನಿ, ವಿ. ವಿ. ರಸ್ತೆ ಕಲಬುರ್ಗಿ–5

ಚಂದಾ ವಿವರ

ವಾರ್ಷಿಕ :	25 ರೂ. ಗಳು
ಸಂಸ್ಥೆಗೆ :	35 ರೂ. ಗಳು
ಪಂಚವಾರ್ಷಿಕ :	100 ರೂ. ಗಳು
ಆಜೀವ :	300 ರೂ. ಗಳು

ವ್ಯವಹಾರ : ಡಾ॥ ವೀರಣ್ಣ ದಂಡೆ, 'ತೇಜಸ್ವಿನಿ', ಸರಸ್ವತಿಪುರ, ವಿ, ವಿ, ಅಂಚೆ, ಕಲಬುರ್ಗಿ-6

ಸ್ವೀಕಾರ

1. ಕಾಡ್ಯನಾಟ-ಪಠ್ಯ ಮತ್ತು ಪ್ರದರ್ಶನ. ಪ್ರೊ. ಎ. ವಿ. ನಾವಡ, ಶ್ರೀಮತಿ ಗಾಯತ್ರೀ ನಾವಡ. ಕರ್ನಾಟಕ ಜಾನಪದ ಅಧ್ಯಯನ ಕೇಂದ್ರ, ಉಡುಪಿ ಬೆಲೆ 40-00 1992
2. ವೈದೇಹಿ, (ಕಾದಂಬರಿ) ಲಲಿತಾ ದೇವುಶೆಟ್ಟಿ. ಮಮತಾ ಪ್ರಕಾಶನ, ಕೊಪ್ಪಳ 20-00 1991
3. ಜನಪದ ಸುತ್ತಮುತ್ತ, ವಾಮನ ನಂದಾವರ, ಪ್ರಜಾಬಂಧು ಪ್ರಕಾಶನ ನೊಯೆಲ್ಲಾ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು 30-00, 1992
4, ವಿಜಯಕಾವ್ಯ, ಸಂ. ಎ. ಎಸ್. ರುದ್ರಪ್ಪ, ಕರ್ನಾಟಕ ಸಂಘ, ವಿಜಯನಗರ ಕಾಲೇಜು, ಹೊಸಪೇಟೆ, 15-00 1992
5. ದಿಲ್ಲಿ ಮತ್ತು ಪಾರಿವಾಳ, (ಕವನ ಸಂಕಲನ) ರವಿ ಉಪಾಧ್ಯ 561/1, ಮಠಗಲ್ಲಿ, ಬೆಳಗಾವಿ, 20-00 1992
6. ಕೊರವರು, ಈರಣ್ಣ ಎನ್, ಕೋಸಗಿ, ಕೋಸಗಿ ಪ್ರಕಾಶನ, ರಾಯಚೂರು 5-00 1991
7. ಈ ನೆಲದಲಿ, (ಕವನ ಸಂಕಲನ) ಆರ್. ಬಿ, ದಿವಾಕರ ಗಂಗೋತ್ರಿ ಪ್ರಕಾಶನ, ರಾಮಸಾಗರ. 6-00 1991
8. ಒಂದು ಚಿಂತನ ಕುಟುಂಬ ಕಲ್ಯಾಣ ಕಾರ್ಯಕ್ರಮ ನಡೆದು ಬಂದ ದಾರಿ, ಎಸ್. ಎಸ್. ಹಿರೇಮಠ, ಶಿವಪ್ರಶಾಂತ ಪ್ರಕಾಶನ, ಮ, ನಂ. 46. ಕೆ, ಎಚ್. ಬಿ. ಕಾಲನಿ ರಾಜಾಪೂರ ರೋಡ್. ಗುಲಬುರ್ಗಾ 40-00 1991
9. ಲಕ್ಷ್ಮಣರೇಖೆ ದಾಟಿದವರು (ಕವನ ಸಂಕಲನ) ಡಾ, ವಿಜಯಶ್ರಿ ಸಬರದ, ಪಲ್ಲವಿ ಪ್ರಕಾಶನ ಬಿದರ, 15-00, 1991

ಗ್ರಿನೋಬಲ್ಸ ಪ್ರಕಟಣೆಗಳು ಗುಲಬರ್ಗಾ

10. ಸಂಬಂಧಗಳು–ಕಂದರಗಳು ಡಾ॥ ಸಂಗಮೇಶ್ ಸೌದತ್ತಿಮಠ, 20-00 1991
11. ಬೆಳ್ಳಿ–ರೆಕ್ಕೆ ಮೂಡಿದಾಗ, ಡಾ॥ ಬಸವರಾಜ ಸಬರದ, 20-00, 1991
12. ಐದು ಸಮಾಜವಾದಿ ನಾಟಕಗಳು, ಡಾ॥ ಚೆನ್ನಣ್ಣ ವಾಲೀಕಾರ 24-00 1991
13. ಸಂಗ್ಯಾಬಾಳ್ಯಾ, ಸಂ. ಎಂ. ಎಸ್, ಲಠ್ಠೆ 1991

ಮುದ್ರಣ : ಗ್ರಿನೋಬಲ್ಸ್ ಪ್ರೈ. ಲಿ. ಗುಲಬರ್ಗಾ